

# ಅಖಿಲ ಭಾರತ ಪತ್ರಿಕೆ

ಸೆಪ್ಟೆಂಬರ್ 2025

ಜೀವನದ ಕಲೆ:

## ಭಯ ಬೇಡ, ವಿಶ್ವಾಸವಿರಲಿ

ಬೆಲೆ : 15/-



ಫೋಟೊ: ಇಮೇಜಿಂಗ್ ಸಾವಿತ್ರಿ

"ಜ್ಞಾನ–ಸಂಪನ್ನ ಲೋಕಪ್ರಾವಿಣ್ಯ ಧೀಃಶಕ್ತಿ ಆತ್ಮಸ್ಪರ್ಶಿ"

**– ಪುಟ್ಟು ಕುಲಕರ್ಣಿ**
**(ಶ್ರೀ ಅರವಿಂದರ 'ಸಾವಿತ್ರಿ')**

# ಅಖಿಲ ಭಾರತ ಪತ್ರಿಕೆ
## ಸೆಪ್ಟೆಂಬರ್ 2025

ಸಂಪುಟ: 35 ಸಂಚಿಕೆ: 09


## ಪರಿವಿಡಿ

## ಜೀವನದ ಕಲೆ: ಭಯ ಬೇಡ, ವಿಶ್ವಾಸವಿರಲಿ

ಜಡತ್ವದಲ್ಲಿ ದೈವತ್ವದ ಆವಿಷ್ಕಾರ. – ಶ್ರೀ ಅರವಿಂದರು

### ಭಾಗ 1: ಭಯ – ಮೂಲ ಕಾರಣ ಮತ್ತು ಪರಿಹಾರ


**ಭಯ ಎಂದರೇನು** 3

**ಭಯದ ಅನುಭವವು ಏಕೆ?** 6

ಅನು: ನಾಗಜ್ಯೋತಿ ಮಾನ್ವಿ

**ಭಯದಿಂದ ಮುಕ್ತಿ** 8

**ಭಯ ಮತ್ತು ಅನಾರೋಗ್ಯ** 13

**ಪ್ರಗತಿಯ ಮೂರು ಹಿಡಿತಗಳು** 15

**ಭಯವನ್ನು ಎದುರಿಸಿ ಯಾನ** 17

ಅನು: ಶ್ರೀಮತಿ ವಿಶಾಲಾಕ್ಷೀ ಸತ್ಯನ್


### ಭಾಗ 2: ಶ್ರದ್ಧೆ, ವಿಶ್ವಾಸ ಮತ್ತು ನಂಬಿಕೆ


**ಶ್ರದ್ಧೆ, ವಿಶ್ವಾಸ ಮತ್ತು ನಂಬಿಕೆ** 19

**ನಮ್ಮನ್ನು ಸೀಮಿತಗೊಳಿಸುವ ಹಂತ** 25

**ಮೊದಲ ನಿಯಮ – ಮುಗ್ಧ ಮಗುವಿನ ವಿಶ್ವಾಸ** 28

**ಮನೋಸಂಕಲ್ಪ ಮಾತ್ರ ಸಾಕಾಗದು** 31

**ಶುದ್ಧ (ಪೂರ್ಣ) ವಿಶ್ವಾಸ ಎಂದರೇನು** 34

ಅನು: ಶ್ರೀ ಕಿಶೋರಕುಮಾರ ಕಾಸಾರ

**ವೈಯಕ್ತಿಕ ಸಾಧನೆ – ವಿಶ್ವಾಸದ ವೃದ್ಧಿ** 36

**ಪರಮಾತಿಪರಮ ವಿಶ್ವಾಸ** 41

**ಇದು ನಿಮಗೆ ತಿಳಿದಿದೆಯೇ?** 43

**ವಿಶ್ವಾಸವಿಲ್ಲದಿದ್ದರೆ..** 45

**ದೈವೀ ಕಾರ್ಯ** 46

ಅನು: ಡಾ॥ ಮಹಾದೇವ ಸಕ್ರಿ

**ಶ್ರೀ ಅರವಿಂದರ 'ಗೀತಾ ಪ್ರಬಂಧಗಳು'** 48

ಅನು: ಜಾನ್ವಿ

**ಶ್ರೀ ಅರವಿಂದರ 'ಉರ್ವಶಿ'** 58

ಅನು: ಶ್ರೀ ಕಿಶೋರಕುಮಾರ ಕಾಸಾರ (ಸಮಷ್ಟಿ)

**ವಾರ್ತಾಪತ್ರ** 72



**ಸಂಪಾದಕರು:**
ಶ್ರೀ ಪುಟ್ಟು ಕುಲಕರ್ಣಿ
ರಾಘವೇಂದ್ರ ಮಠದ ಹಿಂಭಾಗ,
ಗಿಬ್ ಸರ್ಕಲ್, ಹೆರವಟ್ಟ ರಸ್ತೆ,
ಕುಮಟಾ – 581 332.
ಫೋನ್: 9448774920
mayureshwarkp@gmail.com

**ಪರಿಶೀಲನಾ ಸಮಿತಿ:**
ಡಾ॥ ಆರ್.ಕೆ. ಕುಲಕರ್ಣಿ

**ಪ್ರಕಾಶಕರು:**
ಡಾ॥ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು:**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.
ಫೋನ್: 080 – 2244 9882
https://www.sriaurobindo
complex.org/archive.php
http://abp.sirinudi.org

**ಡಿ.ಟಿ.ಪಿ.:**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ:**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

# ಪ್ರಸ್ತಾವನೆ

ಭಯ ಮತ್ತು ಆತಂಕಗಳು ನಮ್ಮ ಇಚ್ಛಾಶಕ್ತಿಯ ವಿಕೃತರೂಪಗಳಾಗಿವೆ. ಯಾವುದರ ಕುರಿತು ನೀವು ವಿಚಾರ ಮಾಡುತ್ತೀರೋ ಮತ್ತು ಸದಾ ವಿಚಾರ ಮಾಡುತ್ತೀರೋ ಅದನ್ನೇ ಮನಸ್ಸೂ ಸಹಿತ ಪುನರಾವರ್ತಿತಗೊಳಿಸುತ್ತ ಸಾಗುತ್ತದೆ, ಇದರಿಂದ ಮನಸ್ಸು ವಿಚಲನೆಗೆ ಸಿಲುಕುತ್ತದೆ. ಯಾವುದಕ್ಕೆ ನೀವು ಅಂಜುತ್ತೀರೋ ಯಾವುದು ನಿಮ್ಮನ್ನು ಸದಾ ಅಪ್ಪಳಿಸುತ್ತಿದೆಯೋ, ಅದನ್ನು ಸಾಕಾರ ಮಾಡಿಕೊಳ್ಳಲು ಪ್ರಯತ್ನ ಮಾಡುತ್ತೀರಿ; ಏಕೆಂದರೆ, ನಿಮ್ಮ ಇಚ್ಛಾಶಕ್ತಿಯನ್ನು ಜಾಗೃತಿಗೊಳಿಸಿಕೊಳ್ಳುವದರ ಮೂಲಕ ಆರೋಹಗೊಳ್ಳುವದರ ಬದಲು, ನೀವು ಅದರಿಂದ ದೂರವೇ ಉಳಿಯುತ್ತೀರಿ. ಆದರೆ ನಿಮ್ಮ ಜಾಗೃತ ಮನಸ್ಸು ಈ ಅವಚೇತನದ ಸ್ಥಿತಿಯಿಂದ ಮುಕ್ತವಾಗಿ, ಮಾನಸಿಕವಾಗಿ ನೀವು ಹೆಚ್ಚಿನ ಸಾಮರ್ಥ್ಯದಿಂದ ತುಲನಾತ್ಮಕವಾದ ಚಿಂತನವನ್ನು ನಡೆಸುವದರ ಮೂಲಕ, ಅಧಿಕ ಶಕ್ತಿಶಾಲಿಯಾಗಲು ಅದರಿಂದ ಸುಸಜ್ಜಿತಗೊಳ್ಳಲು ಸದಾ ಇಚ್ಛಿಸುತ್ತಾ ಇರುತ್ತದೆ. ಇವೆಲ್ಲವುಗಳಿಗಿಂತ ಆತ್ಮವೂ ಮತ್ತೂ ಸಾಮರ್ಥ್ಯಪೂರ್ಣವಾಗಿದ್ದು ಅದು 'ಭಯ ಮತ್ತು ಆಶೆ'ಗಳಿಂದ ಸದಾ ದೂರವೇ ಇರುತ್ತದೆ. ಅದಕ್ಕಾಗಿ ಆತ್ಮದ ಅನಂತಾನಂತವಾದ ಭವ್ಯ ಪ್ರಶಾಂತತೆಯ ಮತ್ತು ನಿಶ್ಚಿಂತತೆಯ ಮಹತಿಯಲ್ಲಿ ನಿಮ್ಮನ್ನು ಸಮರ್ಪಿಸಿಕೊಳ್ಳಿರಿ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 12/473 – ಶ್ರೀ ಅರವಿಂದರು**

ಭಯಪಡಲು ಯಾವುದೇ ಕಾರಣವಿಲ್ಲ, ಅಂತಹ ಯಾವುದೇ ಘಟನೆಯೂ ಇಲ್ಲ. ಪರಮಪ್ರಭುವಿನ ಹೊರತಾಗಿ ಅನ್ಯಥಾ ಏನೂ ಇಲ್ಲವೇ ಇಲ್ಲ. ಇರುವದೆಲ್ಲವೂ ಪರಮಾತ್ಮನ ವಿದ್ಯಮಾನಗಳೇ ಆಗಿವೆ. ಇವುಗಳಲ್ಲಿ ಕೆಲವು ನಮ್ಮನ್ನು ಭಯಪಡಿಸುವಂತೆ ಕಾಣುತ್ತಿದ್ದರೂ, ಅವೆಲ್ಲವೂ ಪರಮಾತ್ಮನೇ ಸೃಷ್ಟಿಸುತ್ತಿರುವ ಚೇಷ್ಟೆಗಳಾಗಿವೆ; ಅಣಕು ಆಟಗಳಾಗಿವೆ.

*

ಯಾವುದು ಈಶ್ವರನಿಂದಲೇ ರೂಪಿತಗೊಂಡಿದೆಯೋ ಅದಕ್ಕೇಕೆ ಭಯಪಡುತ್ತೀರಿ? ಈ ಘಟನೆಗಳ ಮೂಲಕವೇ ನಿಮ್ಮ ಆತ್ಮ ವಿಕಾಸದ ಪಥವನ್ನು ನಿರ್ಧರಿಸಿರುವದರಿಂದ, ನಿಮಗೆ ಪ್ರಕಾಶವನ್ನು ಕಾಣಲು ರೂಪಿಸಿರುವದರಿಂದ, ಆ ಪಥದಲ್ಲಿ ಸಾಗಲು ಏಕೆ ಅಂಜಿಕೆ? ಅದು ಯಾವುದೇ ಸ್ವರೂಪದಲ್ಲಿ ಇದ್ದರೂ ಸಹಿತ, ಅದು ಬುದ್ಧಿಗಮ್ಯತೆಯ ಆಚೆ ಆಚೆ ಇದ್ದರೂ ಸಹಿತ, ಅದು ನಿಮ್ಮನ್ನು ಪಕ್ವಗೊಳಿಸಲು ರೂಪಿತಗೊಂಡಿರುವದರಿಂದ, ಭಯಪಡಬೇಕಿಲ್ಲ.

*

ನನ್ನ ಪುತ್ರರೆಂದಿಗೂ ಅಂಜುವದಿಲ್ಲ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/240–42 – ಶ್ರೀಮಾತೆ**

# ಭಯ ಎಂದರೇನು

**– ಅನು: ನಾಗಜ್ಯೋತಿ ಮಾನ್ವಿ**

## ಭಯ – ಪ್ರಾಣ ಸ್ತರದ ಒಂದು ಸೃಷ್ಟಿ

ಉನ್ನತ ಪ್ರಕೃತಿಯಲ್ಲಿ ಯಾವುದೇ ಭಯ ಇರುವದಿಲ್ಲ, ಏಕೆಂದರೆ ಭಯವು ಪ್ರಾಣಸ್ತರದ ಒಂದು ಪ್ರವೃತ್ತಿಯಾಗಿದೆ. ಅಪಾಯದ ಅರ್ಥ ಕೊಡುವದರ ಜೊತೆಗೆ ಹಿಂಸಾತ್ಮಕ ಪ್ರಾಣಿಕ ಪ್ರತಿಕ್ರಿಯೆಯಾಗಿದೆ – ಇದು ವಸ್ತುಗಳ ಬೌದ್ಧಿಕತೆಯನ್ನು ಬದಲಾಯಿಸುತ್ತದೆ ಮತ್ತು ಸಾಮಾನ್ಯವಾಗಿ ತಡೆಯನ್ನು ಒಡ್ಡುತ್ತದೆ. ಅಥವಾ ವಿಕಾರದಲ್ಲಿ ಅಂತಿಮಗೊಳ್ಳುತ್ತದೆ. ಇದನ್ನು ಬಹುತೇಕವಾಗಿ ವಿರೋಧಿ ಶಕ್ತಿಗಳ ಆವಿಷ್ಕಾರವೆಂದು ಪರಿಗಣಿಸಲಾಗಿದೆ.

*

ಹೌದು, ಭಯವು ಕಲ್ಪನಾತ್ಮಕ ಭಯಾನಕವನ್ನು ನಿರ್ಮಿಸುತ್ತದೆ. ಅಲ್ಲಿ ನಿಜವಾದ ಅಪಾಯವಿದ್ದರೂ ಸಹ ಭಯವು ಸಹಾಯ ಮಾಡುವದಿಲ್ಲ. ಇದು ಬುದ್ಧಿಯನ್ನು ಮರೆಮಾಡುತ್ತದೆ. ಮನಸ್ಸಿನ ಜಾಗ್ರತ ಸ್ಥಿತಿಯನ್ನು ತೆಗೆದುಹಾಕುತ್ತದೆ. ಜೊತೆಗೆ ಸರಿಯಾದುದನ್ನು ಮಾಡುವದನ್ನು ನೋಡಲು ಅಡಚಣೆಗೊಳಪಡಿಸುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 31/278 – ಶ್ರೀ ಅರವಿಂದರು**

ಹೌದು, ನನ್ನ ಮಗುವೆ, ಈ ಸತ್ತೆಗಳಿಂದ ಜಗತ್ತಿಗೆ ಕೊಡಲ್ಪಟ್ಟ ಅತಿ ಪ್ರಶಂಸನೀಯ ಕೊಡುಗೆ ಎಂದರೆ ಭಯವೇ ಆಗಿದೆ. ಅದು ಅವುಗಳ ಮೊದಲ ಕೊಡುಗೆಯೂ ಹೌದು. ಮತ್ತು ಅತೀ ಶಕ್ತಿಶಾಲಿಯೂ ಆಗಿದೆ. ಭಯದ ಮೂಲಕ ಮಾನವರನ್ನ ಹಿಡಿದಿಟ್ಟುಕೊಳ್ಳುತ್ತದೆ. ಮೊದಲಿಗೆ, ಅವು ಭಯದ ಒಂದು ಚಲನೆಯನ್ನು ಸೃಷ್ಟಿಸುತ್ತವೆ. ಭಯದ ಚಲನೆಯು ಸದಾ ನಿಮ್ಮನ್ನು ನಿಶ್ಶಕ್ತರನ್ನಾಗಿಸುತ್ತದೆ. ಆಗ ಸ್ವಲ್ಪ ಸ್ವಲ್ಪವಾಗಿ ಅವುಗಳ ಶಕ್ತಿಯ ಆಧೀನದಲ್ಲಿ ನೀವು ಸಿಲುಕುತ್ತೀರಿ. ಆದರೆ ಅದು ತರ್ಕಬದ್ಧವಾದ ಭಯವಾಗಿರುವದಿಲ್ಲ; ಇದೊಂದು ರೀತಿಯ ಭಯವಾಗಿದ್ದು ನಿಮ್ಮನ್ನು ಆವರಿಸಿಕೊಂಡಿರುತ್ತದೆ. ಇದು ಏಕೆ ಎಂದು ನಿಮಗೆ ತಿಳಿದಿಲ್ಲ. ಏನೋ ಒಂದು ನಿಮ್ಮನ್ನು ನಡುಗುವಂತೆ ಮಾಡುತ್ತಿದೆ, ಆತಂಕವನ್ನು ಉಂಟು ಮಾಡುತ್ತದೆ.

ಏಕೆಂದು ನಿಮಗೆ ತಿಳಿದಿರುವದಿಲ್ಲ. ಅದಕ್ಕೆ ಸ್ಪಷ್ಟ ಕಾರಣವೂ ಇರುವದಿಲ್ಲ. ಇದೇ ಇವುಗಳ ಕಾರ್ಯವೈಖರಿ ಆಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 5/118 – ಶ್ರೀಮಾತೆ**

**ಭಯ – ಅಪ್ರಜ್ಞೆಯ ಒಂದು ವಿದ್ಯಮಾನ**

ಭಯವು ಅಪ್ರಜ್ಞೆಯ ಒಂದು ವಿದ್ಯಮಾನವಾಗಿದೆ. ಕೆಲವೊಂದು ವಿಷಯದ ಸ್ವಭಾವವಾಗಲಿ ಅದರ ಪರಿಣಾಮವಾಗಲಿ ಅಥವಾ ಮುಂದೆ ಏನಾಗಬಹುದು ಎನ್ನುವದು ನಿಮಗೆ ತಿಳಿದಿರುವದಿಲ್ಲ. ನಿಮ್ಮ ಕ್ರಿಯೆಗಳ ಫಲವೂ ನಿಮಗೆ ತಿಳಿದಿರುವದಿಲ್ಲ. ನಿಮಗೆ ಬಹಳಷ್ಟು ವಿಷಯಗಳು ತಿಳಿವಿಗೆ ಬರುವದಿಲ್ಲ. ಈ ಅಜ್ಞಾನವೇ ನಿಮ್ಮಲಿ ಭಯವನ್ನು ಉಂಟು ಮಾಡುತ್ತದೆ. ನಿಮಗೆ ಏನು ತಿಳಿದಿಲ್ಲವೋ ಅದಕ್ಕೇ ನೀವು ಭಯಪಡುವದು ಜಾಸ್ತಿ. ಇದು ಒಂದು ಆತಂಕದ ಮಿಶ್ರಣವಾಗಿದೆ, ಒಂದು ರೀತಿಯ ಸಹಜ ಪ್ರವೃತ್ತಿಯೂ ಆಗಿರಬಹುದು. ನಿಮಗೆ ಏನೋ ಒಂದು ಅಪಾಯಕಾರಿ ಎಂದು ಮತ್ತು ಅದರ ಪರಿಹಾರವೂ ಇಲ್ಲದಿರುವಾಗಿ ಸಹಜವಾಗಿ ಈ ಭಾವ ಬರುತ್ತದೆ. ಅದರಿಂದ ನಿಮ್ಮನ್ನು ಹೇಗೆ ಕಾಪಾಡಿಕೊಳ್ಳಬೇಕು ಎನ್ನುವದು ನಿಮಗೆ ಗೊತ್ತಿಲ್ಲದಾಗ, ಭಯವು ಉದಿಸುತ್ತದೆ. ನನ್ನ ನಂಬಿಕೆಯ ಪ್ರಕಾರ ಭಯಕ್ಕೆ ಅನೇಕ ಕಾರಣಗಳಿವೆ. ಆದರೆ ಪ್ರತಿ ಘಟನೆಯಲ್ಲೂ ಇದು ಅಪ್ರಜ್ಞಾಪೂರ್ವಕವಾಗಿ ಉದಯಿಸುವ ಘಟನೆಯಾಗಿದೆ.

ಯಾವುದರ ಬಗೆಗೆ ತಿಳಿದಿರುತ್ತದೆಯೋ, ಅಲ್ಲಿ ಭಯವು ಬರಲು ಆಸ್ಪದವೇ ಇರುವದಿಲ್ಲ. ಯಾವುದು ಸಂಪೂರ್ಣವಾಗಿ ಜಾಗೃತವಾಗಿರುತ್ತದೆಯೋ, ಯಾವುದು ಪೂರ್ಣವಾಗಿ ಪ್ರಜ್ಞಾಯುಕ್ತವಾಗಿರುತ್ತದೆಯೋ ಮತ್ತು ಅದು ಏನು ಎನ್ನವುದು ತಿಳಿದಾಗ, ಖಂಡಿತವಾಗಿ ಭಯವು ಉದ್ಭವಿಸುವದಿಲ್ಲ. ಆದರೆ ಯಾವಾಗಲೂ ಯಾವುದೋ ಒಂದು ಗೂಢವಾದ ಕತ್ತಲೆಯಿಂದ ಕೂಡಿರುತ್ತದೆ. ಅದೇ ಭಯಕ್ಕೆ ಮೂಲ ಕಾರಣವೂ ಆಗಿರುತ್ತದೆ.

ಯಾವಾಗ ಭಯವಿರುತ್ತದೆಯೋ, ಆಗ ನಾವು ಅದರ ಮೇಲೆ ಯಶಸ್ವಿಯಾಗಿ ಪ್ರಜ್ಞೆ, ಜ್ಞಾನ, ಶಕ್ತಿ, ಬೆಳಕನ್ನು ಹೇರಲು ಬಂದರೆ ಅದನ್ನು ಸಂಪೂರ್ಣವಾಗಿ ಗುಣಮುಖಗೊಳಿಸಿಕೊಳ್ಳಬಹುದು. ಕ್ರಿಶ್ಚಿಯನ್ ಧರ್ಮದವರು ಹೀಗೆ ಹೇಳುತ್ತಾರೆ

– ಈಡನ್ ಉದ್ಯಾನವನದ ಸೇಬನ್ನು ತಿಂದುದರಿಂದ ಭಯವು ಬಂದಿದೆ – ಜ್ಞಾನದಿಂದಲೇ ಭಯವು ಬಂದಿದೆ; ಪೃಥ್ವಿಯ ಮೇಲೆ ಎಲ್ಲಾ ಎಲ್ಲಾ ಜೀವಿಗಳನ್ನೂ ಎಲ್ಲ ಮಾನವರನ್ನೂ ಆಳುತ್ತಿರುವದು ಇದೇ ಭಯವಾಗಿದೆ. ಇಲ್ಲಿ, ನನ್ನ ತರ್ಕವನ್ನು ಪುನಃ ಹೇಳುತ್ತೇನೆ, ಪ್ರಾಣಿಗಳಿಗೆ ಭಯವಿರುತ್ತದೆ, ಆದರೆ ಅವು ಯಾವ ಪಾಪವನ್ನೂ ಮಾಡಿಲ್ಲ. ಸೇಬನ್ನು ತಿಂದಿಲ್ಲ. ಹಾಗಾಗಿ ಅವುಗಳಿಗೆ ಭಯವೇ ಇರಬಾರದು! ಇದು ಅರ್ಧಪ್ರಜ್ಞೆಯ ಜೊತೆಗೆ ಒಂದು ರೀತಿಯ ಅಜ್ಞಾನಭರಿತ ಸಹಜ ಪ್ರವೃತ್ತಿಯಿಂದ ಕುಡಿದ ಮಿಶ್ರಣವಾಗಿದ್ದು, ಒಂದು ಅಪಾಯಕ್ಕೆ ಒತ್ತು ಕೊಟ್ಟು, ಅದೇ ಸಮಯದಲ್ಲಿ ಅದರ ಪರಿಣಾಮ ಏನೆಂದು ತಿಳಿದಿರುವದಿಲ್ಲ. ಆದರೆ ಖಂಡಿತವಾಗಿಯೂ ವಾಸ್ತವವಾಗಿ ಈ 'ದೈವೀ ಕಾರ್ಯದ ವಿರುದ್ಧ ಹೋರಾಡುವ ಅಸುರೀ ಸತ್ತೆಗಳು', ಪ್ರಾಣ ಲೋಕದ ಸತ್ತೆಗಳು, ಬಹುತೇಕವಾಗಿ ಭಯವನ್ನು ಆಧರಿಸಿವೆ. ಇದರ ಮೂಲಕವೇ ಮಾನವನ ಮೇಲೆ ಶಕ್ತಿಶಾಲಿಯಾದ ಹಿಡಿತವನ್ನು ಹೊಂದುತ್ತವೆ. ಇದಲ್ಲದೇ, ಇವಷ್ಟೇ ಅಲ್ಲದೇ, ಎಲ್ಲಾ ರಾಜಕೀಯ ಮತ್ತು ಧಾರ್ಮಿಕ ಮಾರ್ಗಗಳು ಇದೇ ರೀತಿಯದಾಗಿವೆ. ಮತ್ತೆ ಕೆಲವೊಂದು ಧರ್ಮಗಳಿವೆ, ಅವು ತಮ್ಮ ಆಸ್ತಿಕರ ಮೇಲೆ ಸಾವಿನ ಭಯ ಮತ್ತು ಸತ್ತ ನಂತರ ಏನಾಗುತ್ತದೆ ಮತ್ತು ಅವು ಆದೇಶಿಸುವ ನಿಯಮಗಳನ್ನು ಕುರುಡಾಗಿ ಅನುಸರಿಸಿದ್ದರೆ ಸಾವಿನ ನಂತರ ನಿಮಗಾಗಿ ಕಾದಿರುವ ಎಲ್ಲಾ ದುರಂತಗಳು ನಿಮ್ಮನ್ನು ಕಾಯುತ್ತಿರುತ್ತವೆ ಎನ್ನುವ ಭಯವನ್ನು ತುಂಬುತ್ತಲೇ ತಮ್ಮ ಅಧಿಕಾರವನ್ನು ಸ್ಥಾಪಿಸಿಕೊಳ್ಳುತ್ತಾರೆ.

ಈ ಭಯವು ವಿರೋಧಾಭಾಸದಿಂದಲೂ ಬರಬಹುದು. ಅಂದರೆ, ಯಾವುದೇ ಒಂದರ ಬಗೆಗೆ ಬಾಂಧವ್ಯವಿಲ್ಲದ ಕಾರಣದಿಂದ ಬರಬಹುದು. ಕೆಲವೊಬ್ಬರು ಬೆಂಕಿಗೆ ಹೆದರುತ್ತಾರೆ, ಕೆಲವೊಬ್ಬರು ನೀರಿಗೆ ಹೆದರುತ್ತಾರೆ. ಇನ್ನು ಕೆಲವರಿಗೆ ಪ್ರಾಣಿಗಳ ಬಗೆಗೆ ಭಯವಿರುತ್ತದೆ. ಇವೆಲ್ಲವೂ ಪ್ರಾಣಿಕ ಕಂಪನಗಳ ಮಧ್ಯೆ ಇರುವ ಅಸಾಮರಸ್ಯದಿಂದ ಬರುತ್ತವೆ. ಮತ್ತು ಇದು ದೇಹದ ಅಪ್ರಜ್ಞಾಪೂರ್ವಕವಾಗಿಯೇ ಇದನ್ನು ಭಯವಾಗಿ ಭಾಷಾಂತರಿಸುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 6/50–51 – ಶ್ರೀಮಾತೆ**

## ಭಯದ ಅನುಭವವು ಏಕೆ?

*ಪ್ರ: ಯಾಕೆ ಭಯದ ಅನುಭವ?*

ನನಗನಿಸುತ್ತಿದೆ, ಈ ರೀತಿಯಲ್ಲಿ ಇರುವದೇನೆಂದರೆ ಅವರು ಅಹಂಕಾರಿಯಾಗಿರುತ್ತಾರೆ.

ಇದಕ್ಕೆ ಮೂರು ಕಾರಣಗಳಿವೆ. ಮೊದಲನೆಯದು, ತನ್ನ ಸುರಕ್ಷತೆಯ ಬಗೆಗಿನ ಅತಿರೇಕದ ಕಾಳಜಿ, ಮತ್ತೊಂದು, ನಮಗೇನೂ ತಿಳಿದಿರುವದಿಲ್ಲವೋ ಅದರ ಬಗೆಗೆ ಅಹಿತಕರವಾದ ಭಾವನೆ ಇರುತ್ತದೆ. ಅದು ನಮ್ಮ ಪ್ರಜ್ಞೆಯಲ್ಲಿ ಭಯವಾಗಿ ರೂಪಾಂತರಗೊಳ್ಳುತ್ತದೆ. ಮತ್ತು ಇದೆಲ್ಲದರ ಆಚೆಗೆ ನಮ್ಮಲ್ಲಿ ದೈವತ್ವದ ಮೇಲೆ ಒಂದು ರೂಢಿಗತ ಸಹಜವಾದ ನಂಬಿಕೆ ಇರುವದಿಲ್ಲ, ನೀವು ಇದನ್ನು ಮತ್ತೂ ಗಂಭೀರವಾಗಿ ನೋಡಿದರೆ, 'ಇದೇ ನಿಜವಾದ ಕಾರಣ' ಎನ್ನುವದು ತಿಳಿಯುತ್ತದೆ. ಕೆಲವು ಜನರಿಗೆ ದೈವದ ಅಸ್ತಿತ್ವದ ಬಗೆಗೆ ಏನೂ ತಿಳಿದಿರುವದಿಲ್ಲ. ಅವರಿಗೆ ಬೇರೊಂದು ಬೇರೆ ಒಂದು ಶಬ್ದಗಳಲ್ಲಿ ಹೇಳುವದಾದಲ್ಲಿ, 'ನಿಮಗೆ ನಿಮ್ಮ ವಿಧಿಯ ಬಗೆಗೆ ಶ್ರದ್ಧೆ ಇಲ್ಲ' ಅಥವಾ 'ನಿನಗೆ ಕೃಪೆಯ ಬಗೆಗೆ' ಏನೂ ತಿಳಿದಿಲ್ಲ ಎಂದು ಹೇಳಬಹುದು. ಇದನ್ನೂ ಸಹಿತ ನಿಮಗೆ ತಿಳಿದ ಹಾಗೆ ನೀವು ಹೇಳಬಹುದು, ಆದರೆ ವಿಷಯದ ಮೂಲವೆಂದರೆ, ನಂಬಿಕೆಯಿಲ್ಲದಿರುವದು! ಪ್ರತಿಘಟನೆಯಲ್ಲಿಯೂ ಏನಾಗುತ್ತದೆಯೋ ಅದು ಒಳ್ಳೆಯದೇ ಆಗುತ್ತದೆ ಎನ್ನುವ ಭಾವನೆಯನ್ನು ನಾವು ಯಾವಾಗಲೂ ಇಟ್ಟುಕೊಂಡಿದ್ದಲ್ಲಿ, ಆಗ ಭಯಕ್ಕೆ ಸಿಲುಕುವದಿಲ್ಲ.

ಭಯದ ಮೊದಲನೆ ಚಲನೆಯು ಸ್ವಯಂಚಾಲಿತವಾಗಿ ಬರುತ್ತದೆ. ಒಬ್ಬ ಶ್ರೇಷ್ಠ ವಿಜ್ಞಾನಿ ಇದ್ದ. ಅವನು ಶ್ರೇಷ್ಠ ಮನಶ್ಶಾಸ್ತ್ರಜ್ಞನೂ ಆಗಿದ್ದ. (ಈಗ ಅವನ ಹೆಸರು ನನಗೆ ನೆನಪಿಗೆ ಬರುತ್ತಿಲ್ಲ) ಆತನು ತನ್ನ ಅಂತರಂಗದ ಪ್ರಜ್ಞೆಯನ್ನು ಬೆಳೆಸಿಕೊಂಡಿದ್ದ ಮತ್ತು ಅದನ್ನು ಪರೀಕ್ಷಿಸಲು ಬಯಸಿದ್ದ. ಹೀಗಾಗಿ ಅವನು ಒಂದು ಪ್ರಯೋಗವನ್ನು ಮಾಡಲು ಮುಂದಾದ. ನಮ್ಮ ಪ್ರಜ್ಞೆಯ ಮೂಲಕ ದೇಹದ ಸಹಜ ಪ್ರತಿಕ್ರಿಯೆಗಳನ್ನು ನಿಯಂತ್ರಿಸಬಹುದೇ ಎಂದು ಅವನು ತಿಳಿಯಲು ಬಯಸಿದ್ದ (ಬಹುತೇಕವಾಗಿ ಅವನು ಅದನ್ನು ಸಂಪೂರ್ಣವಾಗಿ ಮಾಡಲು ಹೋಗಲಿಲ್ಲ. ಅದನ್ನು ಮಾಡಬಹುದು; ಆದರೆ ಏನೇ ಆಗಲಿ ಆತನಿಗೆ ಅದು ಅಸಾಧ್ಯವಾಗಿತ್ತು). ಒಂದು ಪ್ರಾಣಿ ಸಂಗ್ರಹಾಲಯಕ್ಕೆ ಅವನು ಹೋಗಿ, ಅಲ್ಲಿ ಗಾಜಿನ ಪಂಜರದಲ್ಲಿಡಲಾಗಿದ್ದ ಹಾವುಗಳಲ್ಲಿ, ಒಂದು ಆಕ್ರಮಣಕಾರಿ ವಿಷದ ನಾಗರ ಹಾವು ಇತ್ತು. ಅದು ನಿದ್ದೆ

ಮಾಡದೇ ಇರುವಾಗ, ಯಾವಾಗಲೂ ಬಹಳಷ್ಟು ಆವೇಶದಲ್ಲಿಯೇ ಇರುತ್ತಿತ್ತು. ಗಾಜಿನ ಹೊರ ಭಾಗದಲ್ಲಿರುವ ಜನರನ್ನು ನೋಡಿ, ಭಯಂಕರವಾಗಿ ಕೆರಳಿ ಘೂತ್ಕರಿಸುತ್ತಿತ್ತು. ನಮ್ಮ ವಿಜ್ಞಾನಿ ಅಲ್ಲಿಗೆ ಹೋಗಿ ಆ ಪಂಜರದ ಎದುರು ನಿಂತುಕೊಂಡನು. ಯಾವುದೇ ಕಾರಣಕ್ಕೂ ಆ ಹಾವು ಅಲ್ಲಿರುವ ಗಾಜನ್ನು ಒಡೆದುಕೊಂಡು ಹೊರಬರಲಾಗದ ಹಾಗೆ ರೂಪಿಸಲಾಗಿತ್ತು. ಹೀಗಾಗಿ ಹಾವು ಗಾಜನ್ನು ಒಡೆದು ಹೊರಗೆ ಬಂದು ಆಕ್ರಮಣ ಮಾಡುವ ಅವಕಾಶವಿರಲಿಲ್ಲ, ಅದೂ ಅಲ್ಲದೇ ಆ ರೀತಿ ಭಾವಿಸಿಕೊಂಡು ಆತನು ಹೆದರಿ ಓಡಿ ಹೋಗುವ ಸಂಭವವೂ ಇರಲಿಲ್ಲ. ಈ ವಿಷಯ ಆ ವಿಜ್ಞಾನಿಗೆ ಚೆನ್ನಾಗಿ ತಿಳಿದಿತ್ತು. ಅವನು ನಿಂತಲ್ಲಿದಂದಲೇ ಕೂಗುತ್ತ ಮತ್ತು ಸನ್ನೆಗಳ ಮೂಲಕ ಹಾವನ್ನು ಪ್ರಚೋದಿಸಲು ಪ್ರಾರಂಭಿಸಿದನು. ಆಗ ಆ ನಾಗರ ಹಾವು ಮತ್ತೂ ಆವೇಶ ದುಂಬಿ, ಆ ಗಾಜಿನ ಮೇಲೆ ಎರಗಿತ್ತು. ಈ ರೀತಿ ಪ್ರತಿ ಬಾರಿ ಆ ಹಾವು ಎರಗಿದಾಗಲೂ, ಆ ವಿಜ್ಞಾನಿ ತನ್ನ ಕಣ್ಣುಗಳನ್ನು ಮುಚ್ಚಿಕೊಳ್ಳುತ್ತಿದ್ದನು! ಆದರೆ ಇಲ್ಲಿರುವ ಸಂಗತಿಯನ್ನು ಗಮನಿಸಿ, ಆ ಹಾವು ಯಾವ ಕಾರಣಕ್ಕೂ ಗಾಜನ್ನು ತೂರಿ ಬರುವದಿಲ್ಲ ಎನ್ನುವದು ತಿಳಿದ್ದಿದ್ದರೂ ತಾನೇಕೆ ಕಣ್ಣನ್ನು ಮುಚ್ಚಿಕೊಳ್ಳುತ್ತಿದ್ದೇನೆ ಎನ್ನುವದು ಅವನ ಪ್ರಶ್ನೆಯಾಗಿತ್ತು. ಸರಿ, ಈ ಪ್ರತಿಕ್ರಿಯೆಯನ್ನು ಅರಿತುಕೊಳ್ಳುವದು ಎಂದರೆ ತುಂಬ ಕಷ್ಟವೆಂದು ನಾವು ಗುರುತಿಸಬಹುದು. ಆದರೆ ಇದೊಂದು ರಕ್ಷಣೆಯ ಭಾವವಾಗಿದೆ. ನಿಮ್ಮನ್ನು ನೀವು ಕಾಪಾಡಿಕೊಳ್ಳಲಾರಿರಿ ಎಂದು ಅನಿಸಿದಾಗ, ನೀವು ಭಯಗೊಳ್ಳುತ್ತೀರಿ. ಆದರೆ ಕಣ್ಣು ಮುಚ್ಚಿಕೊಳ್ಳುವ ಭಯದ ಚಲನೆಯು ಮಾನಸಿಕ ಅಥವಾ ಪ್ರಾಣಿಕ ಭಯವಲ್ಲ; ಇದು ದೇಹದ ಜೀವಕೋಶಗಳಲ್ಲಿನ ಭಯವಾಗಿದೆ; ಅಲ್ಲಿ ಯಾವುದೇ ಅಪಾಯವಿಲ್ಲವೆಂದು ಅದರಲ್ಲಿ ಸ್ಪಷ್ಟವಾಗಿ ಲಿಖಿತವಾಗಿಲ್ಲ. ಜೊತೆಗೆ ಅದನ್ನು ತಡೆಗಟ್ಟುವದು ಹೇಗೆಂದೂ ತಿಳಿದಿರುವದಿಲ್ಲ. ಇದರ ಮೂಲ ಕಾರಣವೆಂದರೆ ಅವರು ಯೋಗ ಮಾಡಿಲ್ಲ. ನಿಮಗೆ ಗೊತ್ತೇನು? ಯೋಗದಿಂದ ನೀವು ತೆರೆದ ಕಣ್ಣುಗಳಿಂದ ನೋಡಬಹುದು, ನೀವು ಕಣ್ಣನ್ನು ಮುಚ್ಚುವದಿಲ್ಲ; ಆದರೆ ನೀವು ಬೇರೆಯ ಯಾವುದೋ ಒಂದನ್ನು ಕರೆಯುತ್ತಿರುತ್ತೀರಿ, ಆ 'ಬೇರೆಯ ಏನೋ ಒಂದು' ಎಂದರೆ 'ಅದು ನಿಮ್ಮೊಳಗಿರುವ ದೈವೀ ಸಾನಿಧ್ಯದ ಭಾವವೇ ಆಗಿದೆ'. ಅದು ಎಲ್ಲದಕ್ಕಿಂತಲೂ ಬಲಶಾಲಿಯಾಗಿದೆ. ಇದೊಂದೇ ಮಾತ್ರ ನಿಮ್ಮ 'ಭಯ'ವನ್ನು ಪರಿಹರಿಸುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 4/211–13** **– ಶ್ರೀಮಾತೆ**

**ದುಃಸ್ವಪ್ನಗಳು:**

ಪ್ರಾಣದ ಸತ್ತೆಗಳು ಅತಿಭೌತಿಕ ಜಗತ್ತಿನಲ್ಲಿ ಚಲಿಸುತ್ತಲಿರುತ್ತವೆ. ಮನುಷ್ಯನಿಗೆ ಅದರಲ್ಲಿ ಪ್ರವೇಶಿಸುವ ಅವಕಾಶ ಸಿಕ್ಕಲ್ಲಿ, ಗೊಂದಲ ಮತ್ತು ಅಸಹಾಯಕ ಹಾಗು ಅರಕ್ಷಿತವೆಂದೆನಿಸುತ್ತದೆ. ಮಾನವನು ಮನೆಯಲ್ಲಿ ಇದ್ದಂತೆ ಮತ್ತು ಸುರಕ್ಷಿತವಾಗಿ ಭೌತಿಕ ದೇಹದಲ್ಲಿ ಇರುತ್ತಾನೆ; ದೇಹವು ಆತನ ರಕ್ಷಣಾ ಕವಚವಾಗಿದೆ. ಮತ್ತೆ ಕೆಲವರು ತಮ್ಮ ದೇಹದ ಬಗೆಗೇ ತಾತ್ಸಾರ ಮನೋಭಾವ ಹೊಂದಿವರಾಗಿರುತ್ತಾರೆ. ಸಾವಿನ ನಂತರ ದೇಹರಹಿತ ಸ್ಥಿತಿಯಲ್ಲಿ ಇರುವದು ಬಹಳ ಉತ್ತಮ ಎಂದೇ ಅವರು ಯೋಚಿಸುತ್ತಾರೆ. ಆದರೆ ನಿಜವಾದ ವಿಷಯವೆಂದರೆ, ದೇಹವು ನಿಮ್ಮ ಕೋಟೆಯಾಗಿದೆ. ನಿಮಗೆ ಆಶ್ರಯ ನೀಡುತ್ತಿದೆ. ನೀವು ದೇಹದೊಳಗೆ ಇದ್ದಾಗ, ವಿರೋಧಿ ಜಗತ್ತಿನ ಶಕ್ತಿಗಳಿಗೆ ನಿಮ್ಮ ಮೇಲೆ ನೇರವಾಗಿ ತಮ್ಮ ಹಿಡಿತ ಸಾಧಿಸುವದು ಕಷ್ಟವಾಗುತ್ತದೆ. ದುಃಸ್ವಪ್ನಗಳೆಂದರೇನು? ನೀವು ಪ್ರಾಣ ಲೋಕದಲ್ಲಿ ಪ್ರವೇಶಿಸಿದ ಪರಿಣಾಮಗಳು ಮತ್ತು ನೀವು ದುಃಸ್ವಪ್ನದ ಹಿಡಿತದಲ್ಲಿ ಇದ್ದಾಗ, ಮೊದಲು ಏನು ಮಾಡಲು ಪ್ರಯತ್ನಿಸುವಿರಿ? ನಿಮ್ಮ ದೇಹಕ್ಕೆ ಮರಳಿ ಧಾವಿಸಲು ಧಾವಂತಿಸುತ್ತೀರಿ. ಮತ್ತು ನಿಮ್ಮ ಸಹಜ ಭೌತಿಕ ಪ್ರಜ್ಞೆಗೆ ಬರುವಂತೆ ಪ್ರಯತ್ನ ಮಾಡುತ್ತೀರಿ. ಆದರ ಪ್ರಾಣದ ಶಕ್ತಿಗಳ ಜಗತ್ತಿನಲ್ಲಿ ನೀವು ಒಬ್ಬರು ಅಪರಿಚಿತರಾಗಿರುತ್ತೀರಿ; ಇದೊಂದು ನಕ್ಷೆಗೆ ಸಿಗದ ಸಾಗರ. ಇದರಲ್ಲಿ ನಿಮ್ಮ ಬಳಿ ದಿಕ್ಸೂಚಿಯಾಗಲೀ ಚುಕ್ಕಾಣಿಯಾಗಲೀ ಇಲ್ಲ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/46–47 – ಶ್ರೀಮಾತೆ**

## ಭಯದಿಂದ ಮುಕ್ತಿ

**– ಅನು: ಶ್ರೀಮತಿ ವಿಶಾಲಾಕ್ಷೀ ಸತ್ಯನ್, ಬೆಂಗಳೂರು**

*ಪ್ರಶ್ನೆ: ಯಾರಿಗಾದರೂ ಭಯ ಉಂಟಾದರೆ ಏನು ಮಾಡಬೇಕು?*

ನಿಮ್ಮ ಚೈತ್ಯ ಸತ್ತಯೊಂದಿಗೆ ಅಲ್ಪ ಸಲ್ಪ ಸಂಪರ್ಕವಿದ್ದರೆ, ನೀವು ಅದನ್ನು ತಕ್ಷಣ ಕರೆಯಬೇಕು ಮತ್ತು ಚೈತ್ಯದ ಬೆಳಕಿನಲ್ಲಿ ಎಲ್ಲವನ್ನೂ ನಿಯಮಬದ್ಧಗೊಳಿಸಬೇಕು. ಇದು ಅತ್ಯಂತ ಶಕ್ತಿಭರಿತವಾದ ಹಾದಿ.

ಚೈತ್ಯದ ಸಂಪರ್ಕವಿಲ್ಲದೆ, ತಕ್ಕಮಟ್ಟಿಗೆ ತರ್ಕಬದ್ಧ ಸತ್ತೆಯಾಗಿದ್ದರೆ, ಅಂದರೆ ವಿವೇಚನಾಯುಕ್ತ ಮನಸ್ಸಿನ ಸ್ವತಂತ್ರ ಚಲನೆಯನ್ನು ಹೊಂದಿದ್ದರೆ, ಅದನ್ನು ನಾವು ತರ್ಕಿಸಲು ಉಪಯೋಗಿಸಬಹುದು. ಮಗುವಿನೊಂದಿಗೆ ಮಾತನಾಡುವ ರೀತಿಯಲ್ಲಿ

ತನ್ನೊಂದಿಗೆ ತಾನು ಮಾತನಾಡಬಹುದು. ಈ ಭಯವೂ ನಿಜಕ್ಕೂ ಉತ್ತಮವಾದುದಲ್ಲ ಎಂದು ವಿವರಿಸಬಹುದು. ಏನಾದರೂ ಅಪಾಯವಿದ್ದರೂ ಸಹ ಭಯದೊಂದಿಗೆ ಆಪತ್ತನ್ನು ಎದುರಿಸುವಿಕೆ ಅತ್ಯಧಿಕ ದಡ್ಡತನವಾಗಿರುವುದು. ಏನಾದರೂ ವಿಪತ್ತು ಇದ್ದರೂ ಸಹ ಧೈರ್ಯದ ಶಕ್ತಿಯನ್ನು ಹೊಂದಿದ್ದರೆ ಮಾತ್ರ ಅದರಿಂದ ಹೊರಬರುವ ಅವಕಾಶವು ಲಭಿಸಬಹುದು. ನಿಮಗೆ ಅತ್ಯಂತ ಕಡಿಮೆ ಭಯವಿದ್ದರೂ ಸಹ, ನೀವು ಸಿಕ್ಕಿಹಾಕಿಕೊಳ್ಳುವಿರಿ. ಆದುದರಿಂದ ಅಂತಹ ತರ್ಕಬದ್ಧತೆಯನ್ನು ಭಯಪಡುತ್ತಿರುವ ಭಾಗಕ್ಕೆ ಧೈರ್ಯ ತುಂಬಲು ಮಾತ್ರ ಉಪಯೋಗಿಸಿ.

ನಿಮಗೆ ಶ್ರದ್ಧೆಯಿದ್ದು ದಿವ್ಯಕ್ಕೆ ಶರಣಾಗಿದ್ದರೆ, ಒಂದು ಅತ್ಯಂತ ಸರಳವಾದ ಹಾದಿಯು ಇರುವದು. ಅಂದರೆ ಹೀಗೆ ಹೇಳಿಕೊಳ್ಳುವುದು: “ನಿನ್ನ ಸಂಕಲ್ಪವು ನೆರವೇರಲಿ. ನನ್ನ ಜೀವನದ ಮಾರ್ಗದರ್ಶಕಳು ನೀನಾಗಿರುವುದರಿಂದ ನನ್ನನ್ನು ಏನೂ ಭಯಪಡಿಸಲಾಗುವುದಿಲ್ಲ. ನಾನು ನಿನಗೆ ಸೇರಿದವನು ಮತ್ತು ನನ್ನ ಜೀವನದ ಮಾರ್ಗದರ್ಶಕಳು ನೀನೇ.” ಅದು ತಕ್ಷಣವೇ ಕ್ರಿಯಾಶೀಲವಾಗುವುದು. ಎಲ್ಲಾ ರೀತಿಗಳಿಗಿಂತಲೂ ಇದೇ ಹೆಚ್ಚು ಪರಿಣಾಮಕಾರಿ. ನಿಜಕ್ಕೂ ಇದೇ. ಅಂದರೆ ನಾವು ಸತ್ಯವಾಗಿ ದಿವ್ಯಕ್ಕೆ ಶರಣಾಗಬೇಕು. ನಾವು ಅದನ್ನು ಹೊಂದಿದ್ದರೆ ಅದು ತತ್‌ಕ್ಷಣದಲ್ಲಿ ಪ್ರತಿಕ್ರಿಯಿಸುವುದಲ್ಲದೆ ಸ್ವಪ್ನದ ರೀತಿಯಲ್ಲಿ ಎಲ್ಲಾ ಭಯವೂ ಇಲ್ಲವಾಗುವದು. ಕೆಟ್ಟ ಪ್ರಭಾವದ ಸತ್ತೆಯು ಸಹ ಭಯದೊಂದಿಗೆ ಕನಸಿನ ರೀತಿಯಲ್ಲಿ ಕಾಣದಾಗುವುದು. ವೇಗವಾಗಿ ಅದು ಓಡಿಹೋಗುವುದನ್ನು ನೀನು ನೋಡಬಹುದು. ಪುರ್! ಓ’ಲ.

ಈಗ, ಅತ್ಯಂತ ಬಲವಾದ ಪ್ರಾಣ ಶಕ್ತಿಯನ್ನು ಹೊಂದಿರುವ ಜನರು ಸಹ ಇರುವರು. ಅವರು ಶಕ್ತಿಶಾಲಿಗಳಾಗಿದ್ದು, ತಮ್ಮ ತಲೆಯೆತ್ತಿ ಹೀಗೆ ಹೇಳುವರು: “ಓ ಶತ್ರುವು ಇಲ್ಲಿ ಇರುವನು, ನಾವು ಅವನನ್ನು ಕೆಳಗೆ ಬೀಳಿಸಬೇಕು.” ಆದರೆ ಅದಕ್ಕೆ ನಾವು ಜ್ಞಾನಭರಿತರಾಗಿರಬೇಕು ಮತ್ತು ಅತ್ಯಧಿಕ ಪ್ರಾಣ ಶಕ್ತಿಯನ್ನು ಹೊಂದಿರಬೇಕು. ನಿಜಕ್ಕೂ ದೈತ್ಯ ಶಕ್ತಿಯನ್ನು ಹೊಂದಿರುವದು ಅವಶ್ಯಕ.

ಹೀಗಾಗಿ ಅನೇಕ ವಿಧವಾದ ಹಾದಿಗಳು ಇವೆ. ಅವುಗಳೆಲ್ಲವೂ ಉತ್ತಮವಾದವೇ. ಆದರೆ ನಿನ್ನ ಸ್ವಭಾವಕ್ಕೆ ಯಾವುದು ಹೊಂದಾಣಿಕೆಯಾಗುವದೋ ಅದನ್ನು ನೀನು ಉಪಯೋಗಿಸಬೇಕು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 5/118–20**

## ಒಂದು ಸುಲಭವಾದ ಪರಿಹಾರ

ಈಗ, ಒಂದು ಅತ್ಯಂತ ಸುಲಭವಾದ ಚಿಕ್ಕ ಉಪಾಯವು ಇದೆ.

ಏಕೆಂದರೆ ಅದು ನಿಮ್ಮ ವೈಯಕ್ತಿಕ ಸಾಮಾನ್ಯ ಜ್ಞಾನವನ್ನು ಅವಲಂಬಿಸಿದೆ.... ಭಯಭೀತರಾಗಿರುವಾಗ ನಿಮ್ಮನ್ನು ನೀವು ಗಮನಿಸಿದರೆ, ನೀವು ಯಾವುದರ ಬಗ್ಗೆ ಭಯಯುಕ್ತರಾಗಿರುವಿರೋ ಅದನ್ನು ಭಯವು ಸೆಳೆಯುತ್ತಿರುವದು ನಿಮ್ಮ ಅರಿವಿಗೆ ಬರುವದು. ನೀವು ಖಾಯಿಲೆಯ ಬಗ್ಗೆ ಹೆದರಿದ್ದರೆ, ನೀವು ಖಾಯಿಲೆಯನ್ನು ಸೆಳೆಯುತ್ತಿರುವಂತೆ ಇರುವದು. ನೀವು ಅಪಘಾತದ ಬಗ್ಗೆ ಹೆದರಿದ್ದರೆ, ನೀವು ಅಪಘಾತವನ್ನು ಸೆಳೆಯುತ್ತಿರುವಂತೆ ಇರುವದು. ನೀವು ನಿಮ್ಮೊಳಗೆ ಮತ್ತು ನಿಮ್ಮ ಸುತ್ತಮುತ್ತಲೂ ಸ್ವಲ್ಪ ನೋಡಿದರೆ, ನಿಮಗೆ ಅದು ಗೊತ್ತಾಗುವದು. ಅದು ನಿರಂತರವಾದ ಸತ್ಯ. ಆದುದರಿಂದ ನಿಮಗೆ ಒಂದು ಸ್ವಲ್ಪ ಸಾಮಾನ್ಯ ಪರಿಜ್ಞಾನವಿದ್ದರೆ, ನೀವು ಹೀಗೆ ಹೇಳುವಿರಿ: “ಯಾವುದರ ಬಗ್ಗೆಯಾಗಲಿ ಹೆದರುವದು ಪೆದ್ದುತನ. ಏಕೆಂದರೆ ಅದರಿಂದ ನನ್ನ ಒಳಗೆ ಅದನ್ನು ಆಹ್ವಾನಿಸಿದಂತೆ ಆಗುವದು. ನನ್ನನ್ನು ಕೊಲ್ಲ ಬಯಸುವ ಶತ್ರುವೇನಾದರೂ ಇದ್ದರೆ, ನಾನು ಅವನ ಒಳಗೆ ಹೋಗಿ, ನೀನು ಕೊಲ್ಲಲು ಪ್ರಯತ್ನಿಸುತ್ತಿರುವದು ನನ್ನನ್ನೇ ಎಂದು ಹೇಳುವದಿಲ್ಲ ಅಲ್ಲವೇ. ಈ ವಿಷಯವೂ ಸಹ ಸ್ವಲ್ಪ ಹಾಗೆ ಇದೆ. ಹೀಗಾಗಿ ಭಯವು ಕೆಟ್ಟದಾದುದರಿಂದ ನೀವು ಅದನ್ನು ಹೊಂದಿರಬಾರದು. ನಿಮ್ಮ ತರ್ಕದ ಮೂಲಕ ಅದು ಬರದಿರುವಂತೆ ಮಾಡಲು ಅಸಾಧ್ಯವಾದರೆ, ಆಗ, ನಿನ್ನ ಮೇಲೆ ನಿನಗೆ ಹತೋಟಿ ಇಲ್ಲವೆಂದು ಹೇಳಬೇಕಾಗುವದು. ಮತ್ತು ನೀನು ಆ ಹತೋಟಿಗಾಗಿ ಸ್ವಲ್ಪ ಪ್ರಯತ್ನಿಸಬೇಕು ಅಷ್ಟೇ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 5/317–18**

## ಅತ್ಯುತ್ತಮವಾದ ಪರಿಹಾರ

ಸ್ವಲ್ಪ ಭಯದ ಭಾವನೆ ಉಂಟಾಗುತ್ತಿದ್ದಂತೆ ದಿವ್ಯದ ಬಗ್ಗೆ ಚಿಂತಿಸುವದು ಅತ್ಯುತ್ತಮವಾದ ಪರಿಹಾರ, ಆಗ ಭಗವಂತನ ತೋಳುಗಳನ್ನು ಅಥವಾ ಆತನ ಪಾದಗಳನ್ನು ಆಶ್ರಯಿಸಿ, ಆಂತರಿಕವಾಗಿ ಬಾಹ್ಯದಲ್ಲಿ, ಮತ್ತು ಎಲ್ಲಾ ಕಡೆ, ಏನೆಲ್ಲಾ ಸಂಭವಿಸುತ್ತಿದೆಯೋ ಅದಕ್ಕೆ ಆತನನ್ನೇ ಹೊಣೆಗಾರನನ್ನಾಗಿ ಮಾಡಬೇಕು – ತಕ್ಷಣವೇ ಭಯವು ಕಾಣದಾಗುವದು. ಯೋಗಿಗಳಿಗೆ ಇದೇ ಪರಿಹಾರ ಇದೇ

ಎಲ್ಲದಕಿಂತಲೂ ಅತಿ ಹೆಚ್ಚು ಸುಲಭವಾದುದು. ಆದರೆ ಯೋಗಿಯಾಗುವ ಅನುಗ್ರಹವನ್ನು ಎಲ್ಲರೂ ಪಡೆದಿರುವದಿಲ್ಲ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 5/319**

**ಸಮರ್ಪಕವಾದ ಮನೋಭಾವದ ಶಕ್ತಿ**

ಯಾವಾಗಲೂ ಸಂಭವಿಸುವದು ನಿಜಕ್ಕೂ ಅತ್ಯುತ್ತಮವಾದುದೇ?... ಏನೇನು ಸಂಭವಿಸಬೇಕಾಗಿತ್ತೋ ಅದು ಸಂಭವಿಸಿದೆ ಎಂಬುದಂತೂ ಸ್ಪಷ್ಟ. ಅದು ಬೇರೆಯ ತರಹ ಆಗಲು ಸಾಧ್ಯವೇ ಇಲ್ಲ – ವಿಶ್ವಾತೀತ ಸಂಕಲ್ಪದಿಂದ ಅದು ಸಂಭವಿಸ–ಬೇಕಾಗಿತ್ತು. ನಾವು ಅದು ಸಂಭವಿಸಿದ ಮೇಲೆ ಮಾತ್ರವೇ ಹಾಗೆ ಹೇಳಬಹುದು, ಅದಕ್ಕೆ ಮೊದಲಲ್ಲ. ವೈಯಕ್ತಿಕ ಸಮಸ್ಯೆಯಾಗಿದೆ ಸಂದರ್ಭಕ್ಕೆ ಅನುಗುಣವಾಗಿ ಅತ್ಯುತ್ತಮವಾದುದರ ಸಂಭವಿಸುವಿಕೆ, ವೈಯಕ್ತಿಕತೆಯು ಒಂದು ರಾಷ್ಟ್ರಕ್ಕೆ ಸಂಬಂಧಿಸಿದುದಾಗಿರಬಹುದು. ಓರ್ವ ಮಾನವ ಸತ್ತೆಗೆ ಸಂಬಂಧಿಸಿದುದೇ ಆಗಿರಬಹುದು. ಅದೆಲ್ಲವೂ ಸ್ವಂತ ಮನೋಭಾವನೆಯನ್ನು ಅವಲಂಬಿಸಿದೆ. ಆದರೆ, ಇನ್ನೇನು ಈಗ ಸಂಭವಿಸಬೇಕಾಗಿರುವ ಘಟನೆಗಳ ಸಾನ್ನಿಧ್ಯದಲ್ಲಿ ನೀನು ಅತ್ಯುನ್ನತವಾದ ಮನೋಭಾವನೆಯನ್ನು ಹೊಂದಿರಲು ಸಾಧ್ಯವಾದರೆ, – ಅಂದರೆ ಸಮೀಪದ ಅತ್ಯುನ್ನತ ಚೇತನದ ಸಂಪರ್ಕದಲ್ಲಿ ನೀನು ನಿನ್ನ ಚೇತನವನ್ನು ಇರಿಸಿದರೆ, ಆಗ ಅತ್ಯುತ್ತಮವಾದುದೇ ಸಂಭವಿಸುವದು ಎಂಬುದರ ಬಗ್ಗೆ ನೀನು ನಿಶ್ಚಿಂತನಾಗಿರಬಹುದು. ಆದರೆ ಈ ಚೇತನದಿಂದ ನೀನು ಕೆಳಗಿನ ಸ್ತರಕ್ಕೆ ಬಿದ್ದ ಕೂಡಲೇ, ಆಗ ಸಂಭವಿಸುವದು ನಿಜಕ್ಕೂ ಅತ್ಯುತ್ತಮ ಸಂಭವಿಸುವಿಕೆಯಾಗಿ ಇರುವದಿಲ್ಲ. ಏಕೆಂದರೆ ನೀನು ಆಗ ಅತ್ಯುತ್ತಮ ಚೇತನದಲ್ಲಿ ಇಲ್ಲದಿರುವದೇ ಅದಕ್ಕೆ ಕಾರಣ. ಪ್ರತಿಯೊಂದರ ತಕ್ಷಣದ ಪ್ರಭಾವದಲ್ಲಿನ ವಲಯದಲ್ಲಿ ಸಮರ್ಪಕವಾದ ಮನೋಭಾವವು ಎಲ್ಲಾ ಪರಿಸ್ಥಿತಿಗಳನ್ನು ಅನುಕೂಲಕರವಾಗಿ ತಿರುಗಿಸುವದು ಮಾತ್ರವಲ್ಲ ಅದು ಪರಿಸ್ಥಿತಿಯನ್ನೇ ಸಂಪೂರ್ಣವಾಗಿ ಬದಲಾಯಿಸಿಬಿಡುವ ಶಕ್ತಿಯನ್ನು ಸಹ ಹೊಂದಿರುವದು ಎಂದೂ ಸಹ ಹೇಳಬಹುದು ಎಂಬುದು ನನ್ನ ಅಭಿಪ್ರಾಯ. ಉದಾಹರಣೆಗೆ, ಯಾರಾದರೂ ನಿನ್ನನ್ನು ಕೊಲ್ಲಲು ಬಂದರೆ, ನೀನು ಸಾಮಾನ್ಯ ಚೇತನದಲ್ಲಿ ಇದ್ದು ತುಂಬಾ ಭಯವನ್ನು ಹೊಂದಿದರೆ, ಆತನು ತನ್ನ ಕೆಲಸವನ್ನು ಮಾಡಿ ಮುಗಿಸಬಹುದು. ನೀನು ಚೇತನದಲ್ಲಿ ಸ್ವಲ್ಪ ಮೇಲೇರಿ ಭಯವನ್ನು ಹೊಂದಿದ್ದರೂ ಸಹ ದಿವ್ಯದ ಸಹಾಯಕ್ಕಾಗಿ ಬೇಡಿದರೆ, ಆತನು

ನಿನಗೆ ಸಣ್ಣ ಗಾಯವನ್ನು ಮಾಡಿ ನಿನ್ನಿಂದ ದೂರ ಹೋಗಬಹುದು; ಆದರೆ, ನೀನು ಸಮರ್ಪಕವಾದ ಮನೋಭಾವವನ್ನು ಹೊಂದಿದ್ದು, ಸುತ್ತಲೂ ದಿವ್ಯ ಸಾನ್ನಿಧ್ಯದ ಚೇತನಾಭರಿತನಾಗಿದ್ದರೆ ನಿನ್ನ ಒಂದೇ ಒಂದು ಬೆರಳನ್ನು ಅಲುಗಾಡಿಸಲು ಆತನಿಗೆ ಸಾಧ್ಯವಾಗುವದಿಲ್ಲ.

ಸಮರ್ಪಕವಾದ ಮನೋಭಾವದ ಅಸಂಖ್ಯಾತ ಉದಾಹರಣೆಗಳು ನನಗೆ ಉಂಟಾಗಿವೆ. ಸಮರ್ಪಕವಾದ ಮನೋಭಾವವನ್ನು ಹೊಂದಿರುವ ಓರ್ವ ಮಾನವನು ದೊಡ್ಡ ಗುಂಪುಗಳನ್ನು ಮಹಾದುರಂತದಿಂದ ರಕ್ಷಿಸಿರುವದನ್ನು ನಾನು ನೋಡಿರುವೆ. ಆದರೆ ಆ ಮನೋಭಾವವು ಬಹಳ ಮೇಲೆ ಇದ್ದು, ದೇಹವನ್ನು ತನ್ನ ಸಾಮಾನ್ಯ ಪ್ರತಿಕ್ರಿಯೆಗಳಿಗೆ ಬಿಟ್ಟು ಬಿಡುವಂತಹುದಾಗಿರಬಾರದು. ನೀನು ಬಹಳ ಮೇಲೆ ಇದ್ದು, ದೈವ ಸಂಕಲ್ಪವು ನೆರವೇರಲಿ ಎಂದು ಹೇಳಿದರೆ, ನೀನು ಸಹ ಕೊಲ್ಲಲ್ಪಡುವ ಸಾಧ್ಯತೆ ಇರುವದು. ಏಕೆಂದರೆ ನಿನ್ನ ದೇಹವು ಭಯದಿಂದ ನಡುಗುತ್ತಾ ದಿವ್ಯತ್ವವನ್ನು ಹೊಂದಿರಬಹುದು. ಆಗ ಏನು ಮಾಡಬೇಕೆಂದರೆ, ನೈಜ ಪ್ರಜ್ಞೆಯನ್ನು ಸ್ವತಃ ದೇಹದಿಂದಲೇ ಆಧರಿಸಿ ಸ್ವಲ್ಪವೂ ಭಯಪಡದೆ ದಿವ್ಯ ಶಾಂತಿಯಿಂದ ತುಂಬಿರಬೇಕು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/154–5 – ಶ್ರೀಮಾತೆ**

---

## ಸಾಧಕನ ಮೊದಲ ಕರ್ತವ್ಯ

ಒಂದು ಮಾಲಿನ್ಯವಾಗಿದೆ ಭಯ. ಅತ್ಯಧಿಕ ಮಲಿನತೆಗಳಲ್ಲಿ ಇದು ಸಹ ಒಂದಾಗಿದೆ. ಅದೈವೀ ಶಕ್ತಿಗಳಿಂದ ನಮ್ಮ ಬಳಿಗೆ ನೇರವಾಗಿ ಬರುವ ಇದು ಭೂಮಿಯ ಮೇಲೆ ದಿವ್ಯದ ಕ್ರಿಯೆಯನ್ನು ನಾಶಪಡಿಸಲು ಬಯಸುವದು. ಪ್ರಾಮಾಣಿಕವಾಗಿ, ತಮ್ಮ ಎಲ್ಲಾ ಶಕ್ತಿಯನ್ನು ಉಪಯೋಗಿಸಿ ತಮ್ಮಿಂದ, ಎಷ್ಟು ಸಾಧ್ಯವೋ ಅಷ್ಟು ಬಲವಾಗಿ ಸಾಧಕರು ಭಯವನ್ನು ತಮ್ಮ ಚೇತನದಿಂದ ಹೊರಗೆ ನೂಕಬೇಕು. ಯೋಗ ಮಾಡಲು ಇಚ್ಛಿಸುವವರ ಮೊದಲ ಕರ್ತವ್ಯವು ಇದಾಗಿದೆ. ಭಯದ ನೆರಳು ಸಹ ಇರಲು ಬಿಡಬಾರದು. ಪಥದಲ್ಲಿ ಮುಂದೆ ಸಾಗಲು ಎದೆ ಗುಂದದೆ ಭಯವೆಂಬ ಕ್ಷುಲ್ಲಕ, ದುರ್ಬಲ, ಉಪಯೋಗರಹಿತ ಹಿಂಜರಿಕೆಯನ್ನು ನಮ್ಮ ಬೆನ್ನ ಮೇಲೆ ಹೊರದೆ ಬಲಿಷ್ಠರಾಗಿರುವದು ಅವಶ್ಯಕ.

ಕೊಸರಾಟ ಅಥವಾ ಲೆಕ್ಕಾಚಾರಗಳನ್ನು ಹೊಂದದೆ ಇರಲು ಅಜೇಯವಾದ ಧೈರ್ಯ, ಒಂದು ಪರಿಪೂರ್ಣ ಪ್ರಾಮಾಣಿಕತೆ, ಅಪೇಕ್ಷೆರಹಿತ ಸ್ವ–ಸಮರ್ಪಣೆಗಳು ಅವಶ್ಯಕ. ತನಗೇನೋ ಲಭಿಸುವದು ಎಂಬ ಚಿಂತನೆಯೊಂದಿಗೆ ಕೊಡಬಾರದು. ತನ್ನನ್ನು ಭಗವಂತನು ರಕ್ಷಿಸುವನು ಎಂಬ ಚಿಂತನೆಯಲ್ಲಿ ಶ್ರದ್ಧೆ ಇರಬೇಕು. ಎಲ್ಲದಕ್ಕೂ ಸಾಕ್ಷಿ ಅಥವಾ ಪುರಾವೆಗಳನ್ನು ಕೇಳುವ ನಂಬಿಕೆಯನ್ನು ಹೊಂದಿರಬಾರದು. – ಪಥದಲ್ಲಿ ಮುಂದೆ ಸಾಗಲು ಇವುಗಳು ಅತ್ಯಾವಶ್ಯಕವಾಗಿದ್ದು ನಮ್ಮನ್ನು ಅಪಾಯಗಳಿಂದ ರಕ್ಷಿಸುವ ಉಪಕರಣಗಳು ಸಹ ಇವೇ ಆಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 8/261–62**

ನಿರಂತರವಾದ ಒಂದು ದಿವ್ಯ ಚೇತನದ ಸನ್ನಿಧಿಯೊಂದಿಗೆ ಪ್ರತಿಯೊಂದನ್ನೂ ಎದುರಿಸು. ದಿವ್ಯತೆಗೆ ಸಂಪೂರ್ಣವಾಗಿ ಸ್ವ–ಸಮರ್ಪಣೆ ಮಾಡು, ಈ ಸಂಕಲ್ಪದಲ್ಲಿ ಇಡೀ ಸತ್ತೆಯು ಒಗ್ಗೂಡಿರಲಿ; ಆಗ ಜೀವನದಲ್ಲಿ ಮುನ್ನಡೆಯಬಹುದು, ಏನನ್ನು ಬೇಕಾದರೂ ಎದುರಿಸಬಹುದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 7/31**

.... ಯಾವುದೇ ಕ್ಷೇತ್ರವಾಗಿರಲಿ, ಯಾವುದೇ ವಿಪತ್ತು ಎದುರಾಗಲಿ, ಮನೋಭಾವವು ಶಾಂತವಾಗಿರಬೇಕು ಮತ್ತು ದೃಢತೆಯಿಂದ ತುಂಬಿರಬೇಕು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/181** **– ಶ್ರೀಮಾತೆ**

---

## ಭಯ ಮತ್ತು ಅನಾರೋಗ್ಯ

*ಪ್ರಶ್ನೆ: ಭಯದಿಂದ ಯಾರಿಗಾದರೂ ಖಾಯಿಲೆ ಬರಬಹುದೇ?*

ಹೌದು. ಅತ್ಯಧಿಕ ಭಯವನ್ನು ಹೊಂದಿದ್ದವರೊಬ್ಬರಿಗೆ, ಕಾಲರಾ ರೋಗ ಉಂಟಾಗಿದ್ದನ್ನು ನಾನು ಕಂಡಿರುವೆ. ಪಕ್ಕದ ಮನೆಯವರಿಗೆ ಕಾಲರ ರೋಗ ಬಂದಿತ್ತು. ಆತನಿಗೆ ಎಷ್ಟು ಭಯವಾಯಿತೆಂದರೆ, ಮತ್ತ್ಯಾವುದೇ ಕಾರಣವಿಲ್ಲದೆಯೇ ಕಾಲರ ಅಂಟಿಕೊಂಡಿತು. ಅದು ಭಯ ಮಾತ್ರದಿಂದಲೇ ಆಗಿತ್ತು. ಮತ್ತು ಈ ವಿಷಯವು ಸರ್ವೇ ಸಾಮಾನ್ಯವೆಂದೇ ಹೇಳಬಹುದು. ಸಾಂಕ್ರಾಮಿಕ ರೋಗಗಳು

ಉಂಟಾಗಿರುವಾಗ, ಬಹುಪಾಲು ಜನರಿಗೆ ಹೀಗೇ ಆಗುವದು. ಭಯದಿಂದಲೇ ಬಾಗಿಲು ತೆರೆಯಲ್ಪಡುವದು ಮತ್ತು ನಿನಗೆ ರೋಗವು ಅಂಟಿಕೊಳ್ಳುವದು. ಯಾರಿಗೆ ಭಯವೇ ಇಲ್ಲವೋ ಅವರು ಸ್ವತಂತ್ರವಾಗಿ ಓಡಾಡಬಹುದು ಮತ್ತು ಸಾಮಾನ್ಯವಾಗಿ ಅವರನ್ನು ಯಾವುದೂ ಸೆಳೆಯುವದು ಅಸಾಧ್ಯ. ಆದರೂ... ನಿಮಗೆ ಮನಸ್ಸಿನಲ್ಲಿ ಭಯ ಇಲ್ಲದೆ ಇರಬಹುದು. ಪ್ರಾಣದಲ್ಲಿಯೂ ನಿಮಗೆ ಭಯ ಇಲ್ಲದೆ ಇರಬಹುದು. ಆದರೆ ಯಾರಿಗೆ ಶರೀರದಲ್ಲಿ ಭಯ ಇಲ್ಲ?.... ಬಹಳ ಕೆಲವರಿಗೆ. ದೇಹವನ್ನು ಅದರ ಭಯದಿಂದ ಗುಣಪಡಿಸಲು ಒಂದು ಕಟ್ಟುನಿಟ್ಟಾದ ಶಿಸ್ತು ಅಗತ್ಯ. ಸ್ವತಃ ಕೋಶಗಳೇ ಕಂಪಿಸುವವು. ಶಿಸ್ತಿನ ಮೂಲಕ, ಯೋಗದ ಮೂಲಕ ಮಾತ್ರ ನಾವು ಭಯವನ್ನು ಜಯಿಸಬಹುದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 5/168**

ಅಡಗಿದ ಅಂಗೀಕಾರವಾಗಿದೆ ಭಯ. ನೀವು ಯಾವುದರ ಬಗ್ಗೆಯಾದರೂ ಹೆದರಿದ್ದರೆ, ಅದರ ಸಾಧ್ಯತೆಯನ್ನು ನೀವು ಅಲ್ಲಗೆಳೆಯುವದಿಲ್ಲ. ಮತ್ತು ಅದರಿಂದ ನೀವು ಅದನ್ನು ಪುಷ್ಟೀಕರಿಸುತ್ತಿರುವಿರಿ. ಅದು ಒಳ ಪ್ರಜ್ಞೆಯ ಅಂಗೀಕಾರವೆಂದು ಹೇಳಬಹುದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/262**

ನೀನು ಭಯಪಡಬಾರದು. ನಿನ್ನ ಬಹುಪಾಲು ಕಷ್ಟಗಳು ಭಯದಿಂದಲೇ ಉಂಟಾಗುವದು. ನಿಜಕ್ಕೂ, ದೇಹದ ಒಳ ಪ್ರಜ್ಞೆಯ ಭಯದ ಫಲವೇ ಶೇಕಡ 90 ಭಾಗದಷ್ಟು ಖಾಯಿಲೆಗಳು. ದೇಹದ ಸಾಮಾನ್ಯ ಪ್ರಜ್ಞೆಯಲ್ಲಿ ಅತ್ಯಂತ ಕಡಿಮೆ ಭೌತಿಕ ಅಸಮತೋಲನದ ಬಗ್ಗೆಯೂ ಸಹ ಕಾತುರತೆಯು ಇರುವದು. ಅಂದರೆ ಭವಿಷ್ಯ ಕಾಲದ ಬಗ್ಗೆ ಸಂದೇಹವನ್ನು ಈ ಮಾತುಗಳ ಮೂಲಕ ವ್ಯಕ್ತಪಡಿಸಬಹುದು. “ಮುಂದೆ ಏನಾಗುವದು” ಈ ಕಾತುರತೆಯನ್ನು ನಾವು ಹತೋಟಿಯಲ್ಲಿ ಇಟ್ಟುಕೊಳ್ಳಬೇಕು. ನಿಜಕ್ಕೂ, ದಿವ್ಯತೆಯ ಬಗ್ಗೆ ನಂಬಿಕೆ ಇಲ್ಲದಿರುವದೇ ಈ ಕಾತುರತೆಯಾಗಿದೆ. ಜೊತೆಗೆ ಸಮರ್ಪಣೆಯು ಪರಿಪೂರ್ಣವಾಗಿ ಆಗಿಲ್ಲ ಎಂಬುದರ ಸುಸ್ಪಷ್ಟ ಸಂಕೇತವೂ ಸಹ ಆಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 15/151** **– ಶ್ರೀಮಾತೆ**

# ಪ್ರಗತಿಯ ಮೂರು ಹಿಡಿತಗಳು
## ಭಯ, ಸಂಶಯ ಮತ್ತು ಸಂದೇಹವಾದ

... ಯಾರು ಸಿದ್ಧವಾಗಿರುವರೋ, ನಿಸ್ಸಂಶಯವಾಗಿ ಯಾರು ಸಾಕ್ಷಾತ್ಕಾರಕ್ಕಾಗಿಯೇ ಇರುವರೋ, ಅವರು ತಮ್ಮ ಜೀವನದ ಯಾವುದೋ ಒಂದು ನಿರ್ದಿಷ್ಟ ಕ್ಷಣದಲ್ಲಿ, ಕೆಲವೇ ಕೆಲವು ಸೆಕೆಂಡುಗಳಾದರೂ ಈ ಮನೋರಥದ ಅನುಭವವನ್ನು ಪಡೆಯದಿರುವದು ಅಸಾಧ್ಯ.

ಆದರೆ ಯಾರ ಅಂತಿಮ ಘಟ್ಟವು ನಿರ್ಧಾರಿತವಾಗಿದೆಯೋ ಅವರೂ ಸಹ ಈ ಅಂಶದ ವಿರುದ್ಧ ಬಲವಾಗಿ ಮತ್ತು ದೃಢ ನಿಶ್ಚಯದಿಂದ ಪ್ರಯಾಸ ಪಡಬೇಕು. ಏಕೆಂದರೆ ಇದು ನಾವು ಉಸಿರಾಡುತ್ತಿರುವ ಗಾಳಿಯಲ್ಲೇ ಇರುವಂತಿದೆ: ಈ ಭಯ, ಈ ಏನಾಗುವದೋ ಎಂಬ ಹೆದರಿಕೆ. ಇದು ತುಂಬಾ ಪೆದ್ದುತನ, ಏಕೆಂದರೆ ಕೊನೆಯಲ್ಲಿ ಎಲ್ಲರ ಅಂತ್ಯವೂ ಒಂದೇ ಆಗಿದೆ. ನೀವು ಜನಿಸುವಿರಿ, ಜೀವಿಸುವಿರಿ – ಹೆಚ್ಚು ಕಮ್ಮಿ ಸಂತೃಪ್ತರಾಗಿ – ಮತ್ತು ಮರಣ ಹೊಂದುವಿರಿ; ನಂತರ ಒಂದು ನಿರ್ದಿಷ್ಟ ಕಾಲಾವಧಿಯವರೆಗೂ ಕಾದು ಪುನಃ ಜನಿಸುವಿರಿ, ಜೀವಿಸುವಿರಿ – ಹೆಚ್ಚು ಕಮ್ಮಿ ತೃಪ್ತರಾಗಿ – ಮತ್ತು ಪುನಃ ಸಾಯುವಿರಿ. ....ಹೀಗೆ ಪುನರಾವರ್ತನೆಯಾಗುತ್ತಿರುವದು; ನಿಮಗೆ ಸಾಕು ಎನ್ನಿಸುವವರೆಗೂ ಹೀಗೆ ಮುಂದುವರಿಯುತ್ತಿರುವದು.

ಯಾವುದರ ಬಗ್ಗೆ ಹೆದರಿಕೆ? ದುಃಸ್ಥಿತಿಯಿಂದ ಹೊರಗೆ ಬರುವದರ ಬಗ್ಗೆ ಹೆದರಿಕೆಯಾ? ಸ್ವತಂತ್ರವಾಗಿರುವದರ ಬಗ್ಗೆ ಹೆದರಿಕೆಯೇ? ಬಂಧಿತನಾಗಿಲ್ಲದೆ ಇರುವದರ ಬಗ್ಗೆ ಹೆದರಿಕೆಯೇ?

ನಂತರ, ಇದನ್ನು ಜಯಿಸಬಲ್ಲ ಸಾಕಷ್ಟು ಧೈರ್ಯವು ನಿಮಗೆ ಉಂಟಾದಾಗ, ನೀವೇ ಹೇಳುವಿರಿ, "ಏನಾದರೂ ಆಗಲಿ! ಓ, ಹೆಚ್ಚಿನದೇನನ್ನೂ ನಾವು ಕಳೆದುಕೊಳ್ಳುತ್ತಿಲ್ಲ", ನಂತರ ನೀವು ಜಾಗರೂಕರಾಗುವಿರಿ, ಅದು ತರ್ಕಬದ್ಧವೇ, ಸತ್ಯವೇ, ಭ್ರಮೆಯೇ ಅಥವಾ ಕಲ್ಪನೆಯೇ? ಇದಕ್ಕೆ ಏನಾದರೂ ಅರ್ಥವಿದೆಯೇ? ಎಂದು ನೀವು ಆಶ್ಚರ್ಯ ಪಡುವಿರಿ .... ಮತ್ತು ಜ್ಞಾಪಕದಲ್ಲಿ ಇಟ್ಟುಕೊಳ್ಳಿ. ಈ ಅಪನಂಬಿಕೆಯು ಮೂರ್ಖತನ, ಆದರೆ ನೀವು ಇದನ್ನು ಅತ್ಯಂತ ಬುದ್ಧಿವಂತರಲ್ಲೂ ಕಾಣುವಿರಿ, ಪುನಃ ಪುನಃ ನಿರ್ಧಾರಿತ ಅನುಭವಗಳನ್ನು ಹೊಂದಿರುವವರಲ್ಲಿಯೂ ಕಾಣುವಿರಿ – ಏಕೆಂದರೆ ನೀವು ಸೇವಿಸುವ ಆಹಾರದಿಂದಲೇ, ನಿಮ್ಮ ಉಸಿರಾಟದ

ಗಾಳಿಯಿಂದಲೇ ಇದು ನಿಮ್ಮ ಅಂತರಂಗವನ್ನು ಪ್ರವೇಶಿಸುವದು. ಇತರರ ಸಂಪರ್ಕದಿಂದಲೂ ನಿಮ್ಮೊಳಗೆ ಬರಬಹುದು.

ನೀವು ಈ ಎರಡು ಅಡ್ಡಿಗಳನ್ನು ಜಯಿಸಿದ ನಂತರವೂ ಸಹ, ಅನುಭವಗಳು ಅತ್ಯಂತ ಬಲಿಷ್ಠವಾದಾಗ ನೀವು ಸಂಶಯಪಡುವದು ಅಸಾಧ್ಯವಾಗುವದು – ನಿಮ್ಮ ಸ್ವಂತ ಜೀವನವನ್ನೇ ಸಂದೇಹಿಸುತ್ತಿರುವಂತೆ – ಆಗ ಕೆಟ್ಟದಾದುದೊಂದು ಮಾತ್ರ ಉಳಿಯುವದು. ಅದೇ ಕ್ಷುಲ್ಲಕ, ಶುಷ್ಕ ಮತ್ತು ನಾಶಪಡಿಸುವ ಸಂಶಯ ಪ್ರಕೃತಿ.

ಇದು ಮಾನವ ಅಹಂಕಾರದ ಆಧಾರವನ್ನು ಹೊಂದಿದೆ. ಆದುದರಿಂದಲೇ ಇಷ್ಟು ದೀರ್ಘ ಕಾಲ ಉಳಿದಿರುವದು. ನೀನು ಈ ಎಲ್ಲಾದರ ಮೇಲಿರುವೆ ಎಂದು ಚಿಂತಿಸಲು ಬಯಸುವೆ. “ಓ, ನಾನು ಆ ಬಲೆಗಳಲ್ಲಿ ಬೀಳುವಂತಹವನಲ್ಲ! ನಾನು ವಿವೇಕಿಯಾದ ಮಾನವ, ನಾನು ಪ್ರಾಯೋಗಿಕ ದೃಷ್ಟಿಕೋನದಿಂದ ವಸ್ತುಗಳನ್ನು ವೀಕ್ಷಿಸುವೆ, ನನ್ನನ್ನು ಸುಲಭವಾಗಿ ಮೋಸಗೊಳಿಸಲು ಸಾಧ್ಯವಿಲ್ಲ”. ಇದು ಅಸಹನೀಯ.... ಕೀಳು ಬುದ್ಧಿ, ಆದರೆ ಇದು ಅಪಾಯಕಾರಿ. ...

ನಿಮಗೆ ನಿಜಕ್ಕೂ ಇದು ಇನ್ನು ಸಾಕು ಎನಿಸಿ ಬೇರೆಯದನ್ನು ಬಯಸಿದಾಗ ನೀವು ಧೈರ್ಯಶಾಲಿಗಳಾಗುವಿರಿ, ಬಲಿಷ್ಠರಾಗುವಿರಿ. ಈ ಮೂರು ಭಯಂಕರ ಶತ್ರುಗಳಾದ ಭಯ, ಸಂದೇಹ ಮತ್ತು ಸಂಶಯ ಪ್ರವೃತ್ತಿಗಳನ್ನು ಎದುರಿಸುವ ಸಾಮರ್ಥ್ಯವನ್ನು ಹೊಂದುವಿರಿ. ಆದರೆ ನಾನು ಪುನರಾವರ್ತಿಸಿ ಹೇಳುತ್ತಿರುವೆ. ಒಂದು ದಿನ, ನಿನ್ನನ್ನು ನೀನು ಗಮನಿಸಿ, ನಿನ್ನೊಳಗಿರುವ ಈ ವಿಷಯಗಳ ಬಗ್ಗೆ ಶ್ರಮಿಸಿದರೆ ಅದು ಸಾಕಾಗುವದಿಲ್ಲ. ನೀನು ಅದನ್ನು ಪುನಃ ಪುನಃ ಮಾಡುತ್ತಲೇ ಇರಬೇಕಾಗುವದು. ಇದಕ್ಕೆ ಕೊನೆಯೇ ಇಲ್ಲವೇನೋ ಅನ್ನುವಷ್ಟು ಸಲ ಪ್ರಯತ್ನಿಸಬೇಕು ನೀನು ಇದರಿಂದ ಸಂಪೂರ್ಣವಾಗಿ ಹೊರಬರಲು. ಆದರೆ ನಿಜಕ್ಕೂ ಪೂರ್ಣ ಜಯ ಸಿಗುವದಿಲ್ಲವೇನೋ. ಆದರೆ ಅಂತಿಮವಾಗಿ ನಿನ್ನೊಳಗೆ ನೀನು ಎಷ್ಟು ಬದಲಾಗುವೆಯೆಂದರೆ ಇವುಗಳಿಂದ ಸ್ಪರ್ಶಿತನಾಗುವದೇ ಇಲ್ಲ. ನೀನು ಅವುಗಳನ್ನು ನೋಡುವೆ; ಆದರೆ ಆಗ ನೀನು ಮುಗುಳ್ನಗುತ್ತಿರುವೆ ಮತ್ತು ಒಂದೇ ಒಂದು ಚಹರೆಯಿಂದ ಅವು ತಮ್ಮ ಮೂಲ ಸ್ಥಾನಕ್ಕೆ ಹೊರಟು ಹೋಗುವವು. ಆಗ ಅವು ಸ್ವಲ್ಪ ಬದಲಾಗಿರಬಹುದು, ಸ್ವಲ್ಪ ಕಮ್ಮಿ ಶಕ್ತಿಯುತವಾಗಿರಬಹುದು, ಕಮ್ಮಿ ಗಡುಸಾಗಿರಬಹುದು, ಕಡಿಮೆ ಆಕ್ರಮಣಕಾರಿಯಾಗಿರಬಹುದು – ಪ್ರಕಾಶವು ಬಹಳ ಹೆಚ್ಚಾಗಿ ಅಂಧಕಾರವು ಇಲ್ಲವಾಗುವವರೆಗೂ ಹಾಗಾಗುವದು.

ಮತ್ತು ಅಂತಿಮವಾಗಿ, ನೀವೇ ಸ್ವತಃ ಈ ಅನುಭವಗಳನ್ನು ಹೊಂದಬೇಕೆಂಬುದು ನನ್ನ ಅಭಿಲಾಷೆ. ಮತ್ತು ಅದಕ್ಕೆ, ಶ್ರದ್ಧೆ, ಭರವಸೆ, ಹೆಚ್ಚಾದ ಕರುಣೆ ಮತ್ತು ಶ್ರೇಷ್ಠ ಸದ್ಭಾವನೆಗಳು ಅವಶ್ಯಕ.

ತೆರೆದುಕೋ, ಅಭೀಪ್ಸೆ ಹೊಂದು, ಮತ್ತು... ಕಾದು ನಿರೀಕ್ಷಿಸು. ಅದು ನಿಶ್ಚಿತವಾಗಿ ಆಗಮಿಸುವದು. ಅನುಗ್ರಹವು ಇರುವದು. ಎಲ್ಲರಿಗಾಗಿ ಕೆಲಸ ಮಾಡಲು ಸಾಧ್ಯವಾಗುವದನ್ನು ಮಾತ್ರ ಅದು ಕೇಳುವದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 10/11–14 – ಶ್ರೀಮಾತೆ**

---

ಆದರೆ (ಸಾಕ್ಷಾತ್ಕಾರದ) ಹಾದಿಯು ಕಿರಿದಾಗಿದೆ, ಬಾಗಿಲುಗಳನ್ನು ತೆರೆಯುವದು ಕಷ್ಟಕರವಾಗಿದೆ ಮತ್ತು ಭಯ, ಅಪನಂಬಿಕೆ ಮತ್ತು ಸಂಶಯ ಪ್ರವೃತ್ತಿಗಳು ಇವೆ. ಜೊತೆಗೆ, ನಾವು ಆಕೆಯ ಸಾಮಾನ್ಯ ಹುಲ್ಲುಗಾವಲಿನಿಂದ ನಮ್ಮ ಕಾಲುಗಳನ್ನು ತಿರುಗಿಸಲು ಪ್ರಯತ್ನಿಸದಿರುವಂತೆ ನೋಡಿಕೊಳ್ಳುವ ಪ್ರಕೃತಿಯ ಕಾವಲುಗಾರರು ಸಹ ಇರುವರು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 12/423 – ಶ್ರೀ ಅರವಿಂದರು**

---

## ಭಯ, ಅಪಾಯ ಮತ್ತು ದುರಂತಗಳ ವಿರುದ್ಧ ರಕ್ಷಾಕವಚವನ್ನು ತೊಟ್ಟು ಜೀವನದ ಪಥದಲ್ಲಿ ಯಾನ

ಎಲ್ಲಾ ಭಯ, ಅಪಾಯ ಮತ್ತು ದುರಂತದ ವಿರುದ್ಧ ಕವಚವನ್ನು ತೊಟ್ಟು ಜೀವನದ ಹಾದಿಯಲ್ಲಿ ಸಾಗುವಿಕೆಗೆ ಎರಡು ವಿಷಯಗಳು ಮಾತ್ರ ಅವಶ್ಯಕ. ಅವೆರಡು ಯಾವಾಗಲೂ ಜೊತೆಯಲ್ಲೇ ಸಾಗುವೆವು. – ದಿವ್ಯ ಮಾತೆಯ ಅನುಗ್ರಹ ಮತ್ತು ನಿನ್ನ ಕಡೆಯಿಂದ ಶ್ರದ್ಧೆ, ಪ್ರಾಮಾಣಿಕತೆ ಮತ್ತು ಶರಣಾಗತಿಯಿಂದ ತುಂಬಿದ ಒಂದು ಆಂತರಿಕ ಅವಸ್ಥೆ. ನಿನ್ನ ಶ್ರದ್ಧೆಯು ಪರಿಶುದ್ಧವಾಗಿರಲಿ, ನಿಷ್ಕಪಟ ಮತ್ತು ಪರಿಪೂರ್ಣವಾಗಿರಲಿ. ಮಹತ್ವಾಕಾಂಕ್ಷೆ, ಹೆಮ್ಮೆ, ನಿರರ್ಥಕತೆ, ಮಾನಸಿಕ ಗರ್ವ, ಪ್ರಾಣಿಕ ಸ್ವ–ಸಂಕಲ್ಪ, ವೈಯಕ್ತಿಕ ಕೋರಿಕೆ, ನಿಮ್ನ ಸ್ವಭಾವದ ಕ್ಷುಲ್ಲಕ ತೃಪ್ತಿಗಳಿಗಾಗಿ ಆಸೆ ಮುಂತಾದ ಮಾಲಿನ್ಯದಿಂದ ತುಂಬಿದ ಮಾನಸಿಕ ಮತ್ತು ಭಾವನಾತ್ಮಕ ಸತ್ತೆಯ ಅಹಂಕಾರಭರಿತ ನಂಬಿಕೆಯು ಧೂಮದಿಂದ ತುಂಬಿದ ಅಸ್ಪಷ್ಟ ಕಿಡಿ ಮಾತ್ರವಾಗಿದ್ದು ಸ್ವರ್ಗದ ಕಡೆ ಜ್ವಲಿಸಲಾರದು. **“ಜೀವನವನ್ನು ನಿನಗೆ**

**ದಿವ್ಯ ಕಾರ್ಯಕ್ಕಾಗಿ ಮತ್ತು ದಿವ್ಯದ ಪ್ರಕಟಣೆಗೆ ನೆರವಾಗಲು ನೀಡಲಾಗಿದೆ ಎಂದು ಪರಿಗಣಿಸು."** ಪರಿಶುದ್ಧತೆ, ಶಕ್ತಿ, ಬೆಳಕು, ವಿಶಾಲತೆ, ಶಾಂತತೆ, ದಿವ್ಯ ಚೇತನದ ಆನಂದ ಮತ್ತು ನಿನ್ನ ಮನಸ್ಸು, ಪ್ರಾಣ ಮತ್ತು ದೇಹದ ಪರಿಪೂರ್ಣತೆಯತ್ತಲಿನ ಅದರ ಒತ್ತಾಯಗಳನ್ನು ಮಾತ್ರ ಅಪೇಕ್ಷಿಸು. ದಿವ್ಯ, ಆಧ್ಯಾತ್ಮಿಕ ಮತ್ತು ಸುಪ್ರಮಾನಸ ಸತ್ಯಗಳನ್ನು ಮಾತ್ರ ಕೇಳು. ಜೊತೆಗೆ ಭೂಮಿಯ ಮೇಲೆ, ನಿನ್ನಲ್ಲಿ, ಕರೆಯನ್ನು ಪಡೆದ ಎಲ್ಲರಲ್ಲಿ, ಅದರ ಸೃಷ್ಟಿಗೆ ಅವಶ್ಯಕವಾದ ಪರಿಸ್ಥಿತಿಗಳು ಮತ್ತು ಅದನ್ನು ವಿರೋಧಿಸುವ ಎಲ್ಲಾ ಶಕ್ತಿಗಳ ವಿರುದ್ಧ ಅದರ ಜಯಕ್ಕಾಗಿ ಪ್ರಾರ್ಥಿಸು.

ನಿನ್ನ ಪ್ರಾಮಾಣಿಕತೆ ಮತ್ತು ಶರಣಾಗತಿಯು ನೈಜ ಮತ್ತು ಸಂಪೂರ್ಣ–ವಾದುದಾಗಿರಲಿ. ನೀನು ನಿನ್ನನ್ನು ನೀಡಿದಾಗ, ಪೂರ್ತಿಯಾಗಿ, ಯಾವುದೇ ಕೋರಿಕೆಯಿಲ್ಲದೆ, ಯಾವುದೇ ನಿಬಂಧನೆಯಿಲ್ಲದೆ, ಯಾವುದೇ ಷರತ್ತಿಲ್ಲದೆ ನೀಡಬೇಕು. ಅದರಿಂದ ನಿನ್ನಲ್ಲಿರುವದೆಲ್ಲವೂ ದಿವ್ಯ ಮಾತೆಗೆ ಸಮರ್ಪಿತವಾಗುವದು ಮತ್ತು ಅಲ್ಪ ಸ್ವಲ್ಪವೂ ಅಹಂಕಾರ ಅಥವಾ ಇನ್ನಾವುದೇ ಶಕ್ತಿಯ ಪಾಲಾಗುವದಿಲ್ಲ.

ನಿನ್ನ ಶ್ರದ್ಧೆ, ಪ್ರಾಮಾಣಿಕತೆ ಮತ್ತು ಶರಣಾಗತಿಗಳು ಹೆಚ್ಚು ಪರಿಪೂರ್ಣ–ವಾಗುತ್ತಿದ್ದಂತೆ ಹೆಚ್ಚು ಅನುಗ್ರಹ ಮತ್ತು ರಕ್ಷಣೆಯು ನಿನ್ನೊಂದಿಗೆ ಇರುವದು. ದಿವ್ಯ ಮಾತೆಯ ಅನುಗ್ರಹ ಮತ್ತು ರಕ್ಷಣೆಯು ನಿನ್ನೊಂದಿಗಿರುವಾಗ ನಿನ್ನನ್ನು ಏನು ತಾನೆ ಸ್ಪರ್ಶಿಸಬಲ್ಲದು ಅಥವಾ ನೀನು ಯಾರಿಗೂ ಹೆದರಬೇಕಾಗಿಲ್ಲ. ಎಲ್ಲಾ ಕಷ್ಟಗಳು, ಅಡ್ಡಿಗಳು ಮತ್ತು ಅಪಾಯಗಳ ಮೂಲಕ ಅದರ ಅಲ್ಪ ಭಾಗವೇ ನಿನ್ನನ್ನು ಕರೆದೊಯ್ಯಬಲ್ಲದು. ಅದರ ಸಾನ್ನಿಧ್ಯವು ನಿನ್ನನ್ನು ಸಂಪೂರ್ಣವಾಗಿ ಆವರಿಸಿದ್ದರೆ ನಿನ್ನ ಹಾದಿಯಲ್ಲಿ ಸುರಕ್ಷಿತವಾಗಿ ಚಲಿಸಬಹುದು. ಏಕೆಂದರೆ ಅದು ಆಕೆಯದು; ನೀನು ಆಗ ಎಲ್ಲಾ ವಿಪತ್ತುಗಳನ್ನು ಉಪೇಕ್ಷಿಸಬಹುದು ಈ ಪ್ರಪಂಚದ ಅಥವಾ ಅಗೋಚರ ಲೋಕದ ಯಾವುದೇ ದುಷ್ಟ ಶಕ್ತಿಯು ಎಷ್ಟೇ ಶಕ್ತಿಯುತವಾಗಿದ್ದರೂ ನೀನು ಅದರಿಂದ ಪ್ರಭಾವಿತನಾಗುವದಿಲ್ಲ.

ಅದರ ಸ್ಪರ್ಶವು ಕಷ್ಟಗಳನ್ನು ಅವಕಾಶಗಳನ್ನಾಗಿ, ಅಪಜಯವನ್ನು ಜಯವನ್ನಾಗಿ ಮತ್ತು ದುರ್ಬಲತೆಯನ್ನು ದೃಢವಾದ ಸಾಮರ್ಥ್ಯವಾಗಿ ಪರಿವರ್ತಿಸುವದು. ಏಕೆಂದರೆ ದಿವ್ಯ ಮಾತೆಯ ಅನುಗ್ರಹವು ಪರಮೋತ್ತಮನ ಅಂಗೀಕಾರವಾಗಿದೆ. ಮತ್ತು ಇಂದು ಅಥವಾ ನಾಳೆ ಅದರ ಪರಿಣಾಮವು ನಿಶ್ಚಿತವಾಗಿ ಗೋಚರಿಸುವದು. ಅದು ಶಾಸನವಾಗಿದೆ, ಅನುಲ್ಲಂಘನೀಯ ಮತ್ತು ಅಪರಿಹಾರ್ಯ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/8–9 – ಶ್ರೀ ಅರವಿಂದರು**

ನಿನಗೆ ಶ್ರದ್ಧೆಯಿದ್ದು ದಿವ್ಯಕ್ಕೆ ಶರಣಾಗಿದ್ದರೆ, ಒಂದು ಬಹಳ ಸುಲಭವಾದ ಹಾದಿಯು ಇದೆ. ಅಂದರೆ ಹೀಗೆ ಹೇಳುವದು: "ನಿನ್ನ ಸಂಕಲ್ಪವು ನೆರವೇರಲಿ. ಯಾವುದೂ ನನ್ನನ್ನು ಭಯಪಡಿಸಲಾರದು. ಏಕೆಂದರೆ ನನ್ನ ಜೀವನದ ಮಾರ್ಗದರ್ಶಕಳು ನೀನಾಗಿರುವೆ. ನಾನು ನಿನಗೆ ಸೇರಿದವನು. ನನ್ನ ಜೀವನವನ್ನು ನೀನು ಮುನ್ನಡೆಸುತ್ತಿರುವೆ." ಅದು ತತ್ಕ್ಷಣದಲ್ಲಿ ಪರಿಣಾಮಕಾರಿಯಾಗುವದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 5/118 – ಶ್ರೀಮಾತೆ**

**ಭಾಗ 2:**

## ಶ್ರದ್ಧೆ, ವಿಶ್ವಾಸ ಮತ್ತು ನಂಬಿಕೆ

**– ಅನು: ಶ್ರೀ ಕಿಶೋರಕುಮಾರ ಕಾಸಾರ, ಕಲಬುರ್ಗಿ**

### ಶ್ರದ್ಧೆ, ವಿಶ್ವಾಸ ಮತ್ತು ನಂಬಿಕೆ

**ಶ್ರದ್ಧೆ**ಯೆಂದರೆ, ಈ ಮರ್ತ್ಯದ ಪ್ರತಿಯೊಂದು ಆತ್ಮಗಳೂ, ಔನ್ನತ್ಯದಲ್ಲಿರುವ ಆ ದಿವ್ಯತೆಯ ಅಸ್ತಿತ್ವ, ಶಕ್ತಿ, ಪ್ರೇಮ ಮತ್ತು ಅದು ಕರುಣಿಸುವ ಅನುಗ್ರಹದ ಮೇಲೆ ಇಟ್ಟಿರುವ ಶ್ರದ್ಧೆಯಾಗಿದೆ. ಇನ್ನುಳಿದ ಆತ್ಮವಿಶ್ವಾಸ ಮತ್ತು ನಂಬಿಕೆಗಳು ಈ ಶ್ರದ್ಧೆಯ ಮೂಲದಿಂದ ಉದಿಸಿದ ಅಂಶಗಳಾಗಿವೆ.

**ವಿಶ್ವಾಸ** ಎಂದರೆ, ಮರ್ತ್ಯವು ಮೊರೆವ ಪ್ರತಿಯೊಂದು ಕರೆಯನ್ನು ಆಲಿಸುವ ದಿವ್ಯತೆಯು ಪ್ರತಿಯೋರ್ವರ ಪ್ರಾರ್ಥನೆಗೆ ತಕ್ಕಂತೆ ಫಲಗಳನ್ನು ಅನುಗ್ರಹಿಸುತ್ತದೆ ಎಂಬ ಖಚಿತವಾದ ಭಾವನೆಯಾಗಿದೆ.

**ನಂಬಿಕೆ** ಎಂದರೆ ನಮ್ಮ ಮನ–ಹೃದಯಗಳು ಆ ದಿವ್ಯತೆಯ ಮೇಲೆ ಮತ್ತು ಅದು ಕರುಣಿಸುವ ಮಾರ್ಗದರ್ಶನ ಮತ್ತು ರಕ್ಷಣೆಯ ಮೇಲೆ ಪೂರ್ಣವಾಗಿ ಅವಲಂಬನೆಯಾಗುವ ಪ್ರಮೇಯವಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/88**

ಶ್ರದ್ಧೆಯು ಅನುಭವದ ಮೇಲೆ ಅವಲಂಬಿತವಾಗಿರುವದಿಲ್ಲ; ಏಕೆಂದರೆ, ಅದು ಅನುಭೂತಿಗೂ ಪೂರ್ವದಲ್ಲೇ ಪ್ರಕಟವಾಗುವ ವಿಷಯವಾಗಿದೆ. ದರ್ಶನದ ಅಭೀಪ್ಸೆಯಲ್ಲಿರುವ ಅನ್ವೇಷಕನೋರ್ವ ಹೊಸದಾಗಿ ಯೋಗವನ್ನು ಆರಂಭಿಸಿದಾಗ,

ಅವನಲ್ಲಿ ಅನುಭವದ ಕೊರತೆಯಿರುತ್ತದೆ. ಆದರೆ, ಅವನಲ್ಲಿ ದಿವ್ಯತೆಯ ಮೇಲಿನ ಶ್ರದ್ಧೆಯು ಪ್ರಬಲವಾಗಿರುತ್ತದೆ. ಎಂದಾದರೊಂದು ದಿನ ಆ ದಿವ್ಯತೆಯು ತನ್ನನ್ನು ದ್ರಷ್ಟಾರ ಪದವಿಗೆ ಏರಿಸಿಯೇ ತೀರುತ್ತದೆ ಎಂಬ ಶ್ರದ್ಧೆಯ ಮೇಲೆ ಅವನ ಯೋಗ ಜೀವನವು ಸಾಗುತ್ತದೆ. ಕೊನೆಗೊಂದು ದಿನ ಅವನ ನಂಬುಗೆಯಂತೆ ಆ ಅನ್ವೇಷಕನಿಗೆ ಕ್ರಾಂತದರ್ಶವು ಲಭಿಸಿಯೂ ಬಿಡುತ್ತದೆ. ಶ್ರದ್ಧೆಯು ಯೋಗ ಮತ್ತು ಆಧ್ಯಾತ್ಮಿಕದ ಜೀವನದಲ್ಲಿ ಮಾತ್ರವಲ್ಲದೆ ವ್ಯಕ್ತಿಗತವಾದ ಸಾಮಾನ್ಯ ಬದುಕಿನಲ್ಲೂ ಸಹ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿರುತ್ತದೆ. ಸಾಧನೆಯ ಹಾದಿಯಲ್ಲಿ ಮುಂದುವರೆಯುವ ಸಾಹಸಿಗಳು, ಅನ್ವೇಷಕರು, ಸಂಶೋಧಕರು, ಜ್ಞಾನೋದಯದ ಅಭೀಪ್ಸೆಯನ್ನುಳ್ಳವರು... ಹೀಗೆ ತಮ್ಮದೇ ಆದ ಸಾಧನಾಪಥದಲ್ಲಿ ಚೈತ್ಯಯಾತ್ರೆಯನ್ನು ಹೊರಡುವ ಮರ್ತ್ಯರು ತಮ್ಮ ಅಭಿಪ್ಸೆಯನ್ನು ಪೂರ್ಣಗೊಳಿಸುವವರೆಗೂ ತಮ್ಮ ಕಾರ್ಯವನ್ನು ಎಡಬಿಡದೆ ಮುಂದುವರೆಸುತ್ತಾರೆ. ಅವರ ಮಾರ್ಗದಲ್ಲಿ ಕಂಟಕವನ್ನು ತಂದೊಡ್ಡುವ ನಿರಾಶೆ, ಸತತ ವೈಫಲ್ಯ, ನಿರಾಕರಣೆಗಳಂತಹ ಎಲ್ಲಾ ಪ್ರತಿಬಂಧಕಗಳನ್ನು ದಾಟಿ ಅವರು ಮುಂದುವರೆಯುತ್ತಾರೆ. ಏಕೆಂದರೆ, ಅದಾವುದೋ ಅದೃಶ್ಯವಾದ ಸತ್ಯವೊಂದು ಕತ್ತಲೆಯಲ್ಲೂ ಅವರ ಕೈಹಿಡಿದು ನಡೆಸುತ್ತಿರುತ್ತದೆ. ಆ ಶ್ರದ್ಧೆಯೇ ಅವರನ್ನು ಸಾಧನೆಯ ಗುರಿ ಶಿಖರದೆಡೆಗೇರಿಸುವ ಕಾರ್ಯದಲ್ಲಿ ನಿಯೋಜಿತ–ವಾಗಿರುತ್ತದೆ. ಯಾರೋ ಒಬ್ಬರು ಕೇಳಿದ ಪ್ರಶ್ನೆಗೆ ಉತ್ತರಿಸುತ್ತ ರಾಮಕೃಷ್ಣರು, 'ಅಂಧಶ್ರದ್ಧೆಗಳು ತಪ್ಪಲ್ಲ. ಏಕೆಂದರೆ ಕೆಲವರ ಶ್ರದ್ಧೆಗಳು ಅಂಧತೆಯಿಂದ ಕೂಡಿರಬಹುದು. ಹಾಗೆಂದು ಶ್ರದ್ಧೆಯನ್ನೇ ಅಂಧಕಾರಮಯವೆಂದು ಹೇಳಲಾಗದು. ಶ್ರದ್ಧೆಯು ಅಂಧವಾಗಿರಲಿ–ಸ್ವಸ್ಥವಿರಲಿ ಒಟ್ಟಿನಲ್ಲಿ ಶ್ರದ್ಧೆಯೇ ನಮ್ಮನ್ನು ಸಾಧನೆಗೆ ಪ್ರೇರೇಪಿಸುತ್ತದೆ.' ಎಂದು ನುಡಿಯುತ್ತಾರೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/92–93**

ನಮ್ಮ ಮಾರ್ಗದಲ್ಲಿ ಕುಳಿತ ಕಂಟಕಗಳನ್ನು ತೊಡೆದು ಮುನ್ನುಗ್ಗಲು ದಿವ್ಯತೆಯೆಡೆಗಿನ ವಿಶ್ವಾಸ ಮತ್ತು ನಮ್ಮ ಸಾಧನೆಯಲ್ಲಿನ ಶ್ರದ್ಧೆಯು (ಯಾವಾಗ ನಮ್ಮ ಹೃದಯ ಮತ್ತು ಆತ್ಮಗಳು ಆ ದಿವ್ಯತೆಯನ್ನು ಅನ್ವೇಷಿಸಲು ಹಾತೊರೆಯುತ್ತಿರುತ್ತದೆಯೋ, ಆ ನಮ್ಮ ಅಭೀಪ್ಸೆಯು ಒಂದು ದಿನ ನಮ್ಮನ್ನು ಆ ದಿವ್ಯತೆಯ ತಾಣಕ್ಕೆ ಅಧಿರೋಹಿಸಿಯೇ ತೀರುತ್ತದೆ.) ಬಹಳ ಮುಖ್ಯವಾಗಿವೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/92–93 – ಶ್ರೀ ಅರವಿಂದರು**

# ಶ್ರದ್ಧೆ ಎಂದರೇನು?

**ಶ್ರೀ ಅರವಿಂದರ ನುಡಿಗಳಲ್ಲಿ:**

ಶ್ರದ್ಧೆ ಎಂಬ ಪದವನ್ನು ಇಂಗ್ಲೀಷಿನಲ್ಲಿ faith ಎಂದು ಸೂಚಿಸಲಾಗುತ್ತದೆ–ಯಾದರೂ, ಇಂಗ್ಲಿಷಿನಲ್ಲಿ ಅದರ ಅರ್ಥವನ್ನು ಸಮರ್ಪಕವಾಗಿ ತಿಳಿಸಲು ಸಾಧ್ಯವಿಲ್ಲ. ಏಕೆಂದರೆ, ವಾಸ್ತವವಾಗಿ ಶ್ರದ್ಧೆ ಎಂಬುದು ಪರಮಾತ್ಮನಿಂದ ಉತ್ಸರ್ಜಿತವಾಗುತ್ತಲೇ ಇರುವ ಪ್ರಕಾಶದ ಮೂಲವಾಗಿದೆ, ಆ ಪ್ರಕಾಶದೊಳಗೆ ಸುಪ್ರಮಾನಸದ ಸಂದೇಶವೊಂದು ಇಳೆಗಿಳಿದು ಬಂದು ಮರ್ತ್ಯವನ್ನು ಜಾಗೃತಗೊಳಿಸುತ್ತಿದೆ. ಕೇವಲ ಜಡ ಭೌತಿಕದಲ್ಲೇ ಬದುಕುತ್ತಿರುವ ಮರ್ತ್ಯ ಜೀವನವನ್ನು ಅದರ ಔನ್ನತ್ಯದೆಡೆ ಆರೋಹಿಸಿ ಅದನ್ನು ದಿವ್ಯ ಜೀವನವಾಗಿಸುವ ಕ್ರಮವಾಗಿದೆ. ಮನ–ಹೃದಯ–ಬುದ್ಧಿಗಳ ಮೂಲದಿಂದ ಮರ್ತ್ಯವು ಮೊರೆಯುತ್ತಿರುವ ಪ್ರಾರ್ಥನೆಗೆ ಓಗೊಡುವ ದಿವ್ಯತೆಯು ಅದಕ್ಕೆ ಬೇಕಿರುವ ಫಲವನ್ನು ಕರುಣಿಸುತ್ತದೆ. ಆದರೆ, ಇವೆಲ್ಲಕ್ಕೂ ಮೀರಿದ ಅಂತರಾತ್ಮಕ್ಕೆ ನಮ್ಮ ಸಾಧನೆ ಮತ್ತು ಗುರಿಯನ್ನು ಸಿದ್ಧಿಸಿಕೊಳ್ಳಲು ಬೇಕಿರುವ ಅಂಶಗಳ ಕುರಿತಾದ ಸಮಗ್ರ ಅರಿವಿರುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 24/774**

... ಶ್ರದ್ಧೆಯು ಔನ್ನತ್ಯದಿಂದ ಬಂದ ಬೆಂಬಲದ ಮೂಲವಾಗಿದೆ; ಇದು ನಮ್ಮ ಬುದ್ಧಿಶಕ್ತಿಯು ಸಂಗ್ರಹಿಸಿದ ಎಲ್ಲ ಮಾಹಿತಿಯನ್ನೂ ಮೀರಿದ ದಿವ್ಯ ದ್ರವ್ಯವಾಗಿದ್ದು, ಅದೃಶ್ಯವಾದ ಒಂದು ರಹಸ್ಯ ಬೆಳಕಿನೊಳಗಿಂದ ಇಳೆಗಿಳಿದ ಪ್ರಕಾಶದ ಪುಂಜಗಳಾಗಿ ನಮ್ಮ ದಾರಿಯನ್ನು ಪ್ರಜ್ವಲಿಸುವಂತೆ ಮಾಡುತ್ತದೆ. ಶ್ರದ್ಧೆಯು ನಮ್ಮ ಪ್ರಾರ್ಥನ್ನಾಲಿಸುವ ಜ್ಞಾನದ ಗುಹ್ಯ ಹೃದಯವಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 23/245**

ಶ್ರದ್ಧೆಯೆಂಬುದು ನಮ್ಮ ಆತ್ಮವಿನ್ನೂ ಗ್ರಹಿಸದೇ ಇರುವ ಯಾವುದೋ ಅಜ್ಞಾತ ವಿಷಯಕ್ಕೆ ಸಾಕ್ಷಿಯಾಗಿದೆ. ಅದು ನಮ್ಮೊಳಗೆ ಮನೆ ಮಾಡಿಕೊಂಡಿರುವ ಜ್ಞಾನಿ ಭಾವನೆಯನ್ನು ಆ ಅನೂಹ್ಯ ದ್ರವ್ಯದ ಅಸ್ತಿತ್ವವನ್ನು ಯಾವುದೇ ಕುರುಹುಗಳಿಲ್ಲದೆಯೂ ಸಹ ಅದನ್ನು ನಿಜವೆಂದು ಭಾವಿಸುವ ಯೋಗ್ಯ ಸ್ಥಿತಿಗೆ ಕೊಂಡೊಯ್ಯುತ್ತದೆ. ಆ ದ್ರವ್ಯದ ಅಸ್ತಿತ್ವವನ್ನು ಒಪ್ಪಿಕೊಳ್ಳಲು ನಮ್ಮ ಮಾನಸವು ಸಿದ್ಧವಿಲ್ಲದಿದ್ದರೂ ಅದನ್ನು ನಿರಾಕರಿಸುವಂತೆ ಒತ್ತಾಯವನ್ನು ಹೇರಿದರೂ, ಅದರ ಸೂಕ್ಷ್ಮ ಸಂವೇದನೆಗಳು

ಮಾತ್ರ ನಮ್ಮ ಪ್ರಜ್ಞೆಯ ಯಾವುದೋ ಒಂದು ಮೂಲೆಯಲ್ಲಿ ಜಾಗೃತವಾಗಿ ನೆಲೆಸಿರುತ್ತವೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/93**

... ಶ್ರದ್ಧೆಯೆಂಬುದು, ಮರ್ತ್ಯವಿನ್ನೂ ಅರಿತುಕೊಳ್ಳದ ಋತಚೇತನದ ಅತ್ಯಂತ ಕೆಳಮಟ್ಟದಲ್ಲಿರುವ ಪ್ರಜ್ಞಾವಲಯದ ಪ್ರತಿರೂಪವಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 23/44**

ಶ್ರದ್ಧೆಯೆಂದರೆ, ನಮ್ಮ ಮಾನಸ ವಲಯದಲ್ಲಿ ನೆಲೆಸಿರುವ ಅಜ್ಞಾನ, ಅನುಮಾನ, ದೌರ್ಬಲ್ಯ ಮತ್ತು ಅನಿಶ್ಚಿತತೆಗಳ ಕೋಟೆಯನ್ನು ಭೇದಿಸಿಕೊಂಡು ಅಂತರಾತ್ಮಾಯನದ ಸ್ತರದಿಂದ ಪ್ರಜ್ವಲಿಸುತ್ತಾ ಬರುವ ನಿಗೂಢವಾದ ಬೆಳಕಾಗಿದೆ, ಅಜ್ಞಾತವಾದ ಶಕ್ತಿಯಾಗಿದೆ. ಮರ್ತ್ಯ ಕ್ಷೇತ್ರದಲ್ಲಿ ಶ್ರದ್ಧೆಯ ಅಸ್ತಿತ್ವವು ಅನಿವಾರ್ಯವಾಗಿದೆ. ಏಕೆಂದರೆ, ಸಾಧನಾ ಪಥದಲ್ಲಿ ಮುಂಬರುವ ಸಾಧಕನು ತನಗೆ ಗೊತ್ತಿರದೇ ಇರುವ ಅಜ್ಞಾತ ವಲಯದಲ್ಲಿ ಸಾಗುತ್ತಿರುವಾಗ ಇದೇ ಶ್ರದ್ಧೆಯು ಅವನನ್ನು ಮುಂದಕ್ಕೆ ಆರೋಹಿಸಲು ಸಹಕರಿಸುತ್ತದೆ. ಹಾಗೆಂದು ಯಾರೊಬ್ಬರ ಮೇಲೂ ಈ ಶ್ರದ್ಧೆಯನ್ನು ಒತ್ತಾಯಪೂರ್ವಕವಾಗಿ ಹೇರಬಾರದು. ಅದು ಆಂತರ್ಯದ ಚೈತನ್ಯದೊಳಗಿಂದ ಮುಕ್ತವಾಗಿ ಪ್ರವಹಿಸಿ ಮರ್ತ್ಯವನ್ನು ಪ್ರಗತಿಯೆಡೆಗೆ ಕರೆದೊಯ್ಯಬೇಕು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 22/896**

ಆಧ್ಯಾತ್ಮಿಕ ಅನ್ವೇಷಣೆಯಲ್ಲಿ ತೊಡಗಿಕೊಂಡ ಸಾಧಕನ ಪ್ರಕಾರ, ಶ್ರದ್ಧೆಯು ಅಂಧವಿಶ್ವಾಸವಲ್ಲ, ಬದಲಿಗೆ ಅದು ನಮ್ಮನ್ನು ಕತ್ತಲೆಯಿಂದ ಬೆಳಕಿನೆಡೆಗೆ ಕೊಂಡೊಯ್ಯುವ ಪ್ರಕಾಶಮಾನವಾದ ನಂಬುಗೆಯಾಗಿದೆ. ಬುದ್ಧಿಶಕ್ತಿಯಿಂದ ನಡೆಯುವ ಬಾಹ್ಯ ಬದುಕಿನ ಸಂಗತಿಗಳ ಪ್ರಕಾರ ಶ್ರದ್ಧೆಯು ಅಂಧವಿಶ್ವಾಸದ ಪ್ರತೀಕವಾಗಿದೆ. ಏಕೆಂದರೆ, ಶ್ರದ್ಧೆಯು ಆಂತರ್ಯದ ಬೆಳಕಿನಲ್ಲಿಯೇ ಅದರ ಪೂರ್ಣ ರೂಪವು ಗೋಚರಿಸುತ್ತದೆ. ಹಾಗೂ ಅದು ಬುದ್ಧಿಶಕ್ತಿಯ ಮುಂದೆ ತನ್ನನ್ನು ತಾನು ಸಮರ್ಥಿಸಿಕೊಳ್ಳಲು ಪುರಾವೆಗಳ ಊರುಗೋಲನಿಟ್ಟು ನಡೆಯುವದಿಲ್ಲ. ಇದೊಂದು ಅಂತಸ್ಫುರಣವಾಗಿದೆ. ಕೇವಲ ಅನುಭವದ ಸಮರ್ಥನೆಗಾಗಿ ಮಾತ್ರ ಕಾಯುತ್ತಿರುವದರ ಜೊತೆಗೇ ಅನುಭೂತಿಯ ಸಾಕ್ಷಾತ್ಕಾರಕ್ಕಾಗಿ ಧೇನಿಸುವ

ಅಂತಸ್ಫುರಣವಾಗಿದೆ. ನನ್ನಲ್ಲಿ ಸ್ವಯಂ–ಪರಿವರ್ತನೆಯ ಗುಣಗಳಿದ್ದರೇ, ನನ್ನಲ್ಲಿ ಉಂಟಾದ ತಪ್ಪುಗಳನ್ನು ಪರಿಹರಿಸಿಕೊಂಡು ರೂಪಾಂತರಣಗೊಳ್ಳುವ ಮಾರ್ಗವನ್ನೂ ಸಹ ನಾನು ಕಂಡುಕೊಳ್ಳುತ್ತೇನೆ. ಆ ಶಕ್ತಿಯು ಬಂದು ನನ್ನನ್ನು ಆವರಿಸಿರಲು ನನ್ನ ಕೈಯನ್ನು ನನ್ನ ಮೇಲಿಟ್ಟುಕೊಂಡು ರೂಪಾಂತರಣದ ಸಂಪೂರ್ಣ ಕ್ರಿಯೆಯನ್ನು ಪೂರ್ತಿಗೊಳಿಸಲು ಸಾಧ್ಯವಾಗುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 28/349**

"ಅಂಧಶ್ರದ್ಧೆ" ಎಂಬ ಪದಕ್ಕೆ ನಿಜವಾದ ಅರ್ಥವೇ ಇಲ್ಲ. ಕೆಲವರು ಸಾಕ್ಷಿಗಳಿಲ್ಲದೆ ಯಾವುದನ್ನೂ ಒಪ್ಪುಕೊಳ್ಳುವದಿಲ್ಲ. ಅಂತಹವರು ಮಾತ್ರ ಶ್ರದ್ಧೆಯನ್ನು ಅಂಧಶ್ರದ್ಧೆ ಎಂದು ಕರೆಯುತ್ತಾರೆ. ಒಂದು ವೇಳೆ ಯಾವುದೋ ಒಂದು ವಿಚಾರವನ್ನು ಒಪ್ಪಿಕೊಳ್ಳಲು ಸಾಕ್ಷಿಯ ಅವಶ್ಯಕತೆ ಇರುವುದೇ ಆದಲ್ಲಿ, ಅಂತಹ ವಿಚಾರವನ್ನು ಶ್ರದ್ಧೆ ಎಂದು ಕರೆಯಲಾಗುವದಿಲ್ಲ. ಅದನ್ನು ಜ್ಞಾನ ಅಥವಾ ಮಾನಸದ ಅಭಿಪ್ರಾಯವೆಂದು ಪರಿಗಣಿಸಬಹುದು. ಶ್ರದ್ಧೆ ಎಂಬುದು ಜ್ಞಾನ ಅಥವಾ ಸಾಕ್ಷಿಗಳಿಗೂ ಪೂರ್ವದಲ್ಲೇ ಉದಿಸುವ ಪ್ರಜ್ಞೆಯ ರೂಪವಾಗಿದೆ. ಈ ಶ್ರದ್ಧೆಯ ಮೂಲದಿಂದಲೇ ಜ್ಞಾನ ಅನುಭೂತಿಗಳು ಸೃಜಿತಗೊಳ್ಳುತ್ತವೆ. ದಿವ್ಯತೆಯು ಇದೆ ಎಂಬುದನ್ನು ನಿರೂಪಿಸಲು ಯಾವುದೇ ಸಾಕ್ಷಿಗಳು ಲಭ್ಯವಿಲ್ಲ. ಆದರೆ, ಆ ದಿವ್ಯತೆಯ ಬಗೆಗೆ ನಮ್ಮಲ್ಲಿ ಶ್ರದ್ಧೆ ಇದ್ದಲ್ಲಿ ಒಂದಲ್ಲ ಒಂದು ದಿನ ನಾವು ಆ ದಿವ್ಯತೆಯ ಸಾಕ್ಷಾತ್ಕಾರವನ್ನು ಮಾಡಿಕೊಳ್ಳುತ್ತೇವೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/91–92**

ಶಿಷ್ಯನೋರ್ವನು ಕೇಳಿದ, "ಅಂಧಶ್ರದ್ಧೆಯು ತಪ್ಪಲ್ಲವೇ?" ಎಂಬ ಪ್ರಶ್ನೆಗೆ ರಾಮಕೃಷ್ಣರು ಹೇಳಿದ, "ಅಂಧಶ್ರದ್ಧೆಗಳು ತಪ್ಪಲ್ಲ. ಏಕೆಂದರೆ ಕೆಲವರ ಶ್ರದ್ಧೆಗಳು ಅಂಧತೆಯಿಂದ ಕೂಡಿರಬಹುದು. ಹಾಗೆಂದು ಶ್ರದ್ಧೆಯನ್ನೇ ಅಂಧಕಾರಮಯವೆಂದು ಹೇಳಲಾಗದು. ಶ್ರದ್ಧೆಯು ಅಂಧವಾಗಿರಲಿ–ಸ್ವಸ್ಥವಿರಲಿ ಒಟ್ಟಿನಲ್ಲಿ ಶ್ರದ್ಧೆಯೇ ನಮ್ಮನ್ನು ಸಾಧನೆಗೆ ಪ್ರೇರೇಪಿಸುತ್ತದೆ." ಎಂಬ ನುಡಿಯು ಶ್ರದ್ಧೆಯು ಅಂಧತ್ವದಿಂದ ಕೂಡಿಲ್ಲ. ಬದಲಿಗೆ ಅದು ಸಾಕ್ಷ್ಯದಿಂದ ಲಭಿಸಿದ ಜ್ಞಾನ, ದೃಢವಾದ ವಿಶ್ವಾಸ ಅಥವಾ ಪೂರ್ಣ ರೂಪದ ಜ್ಞಾನದ ಪ್ರತೀಕವೇ ಆಗಿದೆ ಎಂಬುದನ್ನು ಸಮರ್ಥಿಸುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/93**

ಶ್ರದ್ಧೆಯು ಅಂಧವಾಗಿಲ್ಲ. ಅಪಶ್ರದ್ಧೆಯೇ ಅಂಧವಾಗಿದೆ. ಅದು ನಮ್ಮ ಅಂತಃಚಕ್ಷುವಿನ ದ್ರಷ್ಟಾರ ಸಾಮರ್ಥ್ಯವನ್ನು ಸಂಕುಚಿತಗೊಳಿಸುತ್ತದೆ. ನಮ್ಮ ಶಕ್ತಿಯನ್ನು ಕುಂದಿಸುತ್ತದೆ ಮತ್ತು ನಮ್ಮ ಕ್ರಿಯೆಯನ್ನು ತಟಸ್ಥಗೊಳಿಸುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 6–7/348**

**ಶ್ರೀಮಾತೆಯವರ ನುಡಿಗಳು:**

ಶ್ರದ್ಧೆಯು ಯಾವುದೇ ಸಾಕ್ಷ್ಯಗಳಿಲ್ಲದ ಪ್ರಮಾಣೀಕೃತ ವಿಚಾರವಾಗಿದೆ.

*

ಶ್ರದ್ಧೆಯು ಅನುಭವ ಅಥವಾ ಸಾಕ್ಷ್ಯಗಳಿಂದ ಪ್ರಮಾಣೀಕೃತವಾಗಬೇಕಿಲ್ಲದ ವಿಚಾರವಾಗಿದೆ.

*

ಶ್ರದ್ಧೆಯು ಮನಸ್ಸಿನಿಂದ ಸೃಜಿತವಾದ ಸ್ವಯಂಪ್ರೇರಿತವಾದ ಜ್ಞಾನವಾಗಿದೆ.

*

ಸಾಕ್ಷಿಗಳ ಅವಶ್ಯಕತೆಯಿರುವ ಶ್ರದ್ಧೆಯು ಶ್ರದ್ಧೆಯೇ ಅಲ್ಲ. ಅದು ತನ್ನನ್ನು ಒಪ್ಪಿಕೊಳ್ಳುವಂತೆ ಅಂಗಲಾಚುವ ಪ್ರಮೇಯವಾಗಿದೆ.

*

ಶ್ರದ್ಧೆಯು ಕತ್ತಲೆಯಲ್ಲಿ ನಮ್ಮನ್ನು ಕೈಹಿಡಿದು ನಡೆಸುವ ಬೆಳಕಿನ ಮೂಲವಾಗಿದೆ.

*

ನಮ್ಮ ಸಾಧನಾ ಪಥದಲ್ಲಿ ನಮಗೆದುರಾಗುವ ಎಲ್ಲ ಸಂದಿಗ್ಧತೆ, ಅನಿರೀಕ್ಷಿತತೆ, ಅನೌಪಚಾರಿಕತೆಗಳ ಆಗಮನವನ್ನು ಮೊದಲೇ ತಿಳಿಸಿ, ಅದನ್ನೆದುರಿಸುವ ಶಕ್ತಿಯನ್ನು ನಮ್ಮಲ್ಲಿ ತುಂಬಿಸುವ ಶುದ್ಧಬಲವೇ ಶ್ರದ್ಧೆಯಾಗಿದೆ.

*

**ನಮ್ಮಲ್ಲಿ ಶ್ರದ್ಧೆಯ ಕೊರತೆ ಉಂಟಾದಾಗ, ನಮ್ಮ ಪ್ರಜ್ಞಾವಲಯವು ಸೀಮಿತ ಕ್ಷೇತ್ರದಲ್ಲೇ ಬಂಧಿಯಾಗಿಬಿಡುತ್ತದೆ.**

*

ಆ ಪರಮಾತ್ಮದ ಅನಂತ ಶಕ್ತಿಯ ಮುಂದೆ ನಮ್ಮ ಶ್ರದ್ಧೆಯು ಬಹು ಚಿಕ್ಕದಾಗಿದೆ.

*

ಪರಮ ಶ್ರದ್ಧೆ ಮತ್ತು ದಿವ್ಯತೆಯ ಮೇಲಿನ ವಿಶ್ವಾಸಗಳೇ, ಪರಮಾತ್ಮದೆಡೆಗಿನ ನಮ್ಮ ಶೋಧಕಾರ್ಯದಲ್ಲಿ ನಮಗೆ ಸಹಾಯಕ್ಕೆ ಬರುವ ಕೊನೆಯ ಅಸ್ತ್ರವಾಗಿದೆ.

*

**ಯಾವಾಗ ನಮ್ಮೊಳಗೆ ಶ್ರದ್ಧೆ ಮತ್ತು ವಿಶ್ವಾಸಗಳಿಂದ ರೂಪುಗೊಂಡ ಅಪರಿಮಿತವಾದ ಶಕ್ತಿಯು ಬಂದು ನೆಲೆಸುತ್ತದೆಯೋ, ಆಗ ದಿವ್ಯತೆಯ ಕೃಪೆಯು ನಮ್ಮ ಮೇಲೆ ಅನುಗ್ರಹಿತವಾಗುತ್ತದೆ. ಹಾಗೂ ನಾವು ಆಶಿಸುವ ಪ್ರತಿಯೊಂದು ದ್ರವ್ಯಗಳೂ ನಮ್ಮ ಕೈವಶವಾಗಿಬಿಡುತ್ತವೆ.**

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/87 – ಶ್ರೀಮಾತೆ**

## ನಮ್ಮನ್ನು ಸೀಮಿತಗೊಳಿಸುವ ಹಂತ

ನಮಗೆ ನಾವೇ ಮಿತಿಯನ್ನು ಹಾಕಿಕೊಳ್ಳುತ್ತಿದ್ದೇವೆ. ನಾವು ಯಾವಾಗಲೂ ಹೇಳುತ್ತಿರುತ್ತೇವೆ, "ನನಗೆ ಇದನ್ನು ಮಾಡಲು ಸಾಧ್ಯವಿದೆ. ಆದರೆ ಅದನ್ನು ಮಾಡಲು ಸಾಧ್ಯವಿಲ್ಲ. ಹೌದು! ಇದು ಸುಲಭವಾಗಿದೆ ಇದನ್ನು ನಾನು ಸಾಧಿಸಬಹುದು. ಆದ್ರೆ ಅದು ಬಹು ಕ್ಲಿಷ್ಟವಾಗಿದೆ ಅದು ನನ್ನಿಂದ ಸಾಧ್ಯವಿಲ್ಲ" ಹೀಗೆ ನಮಗೆ ನಾವೇ ಕೆಲವೊಂದು ಕಟ್ಟುಪಾಡುಗಳನ್ನು ವಿಧಿಸಿಕೊಂಡಿರುತ್ತೇವೆ. ನಾವು ಕೆಲವು ಕಾರ್ಯಗಳನ್ನು ಮಾತ್ರ ಸಾಧಿಸಿಕೊಳ್ಳಬಹುದು, ಇನ್ನುಳಿದವು ನನ್ನಿಂದ ಸಾಧ್ಯವಿಲ್ಲ ಎಂದು ನಮ್ಮ ಮಿತಿಯನ್ನು ನಾವೇ ನಿರ್ಧರಿಸಿಕೊಂಡು ಬಿಡುತ್ತೇವೆ. ಈ ಮನೋಭಾವನೆಯೇ ನಮ್ಮನ್ನು ಅಜ್ಞಾನದ ಸಂಕೋಲೆಯೊಳಗೆ ಬಂಧಿಸಿಡುತ್ತದೆ. ಜೀವನವಿಡೀ ಅದೇ ಗುಲಾಮಿತನದಲ್ಲಿ ನಮ್ಮನ್ನು ಕೊಳೆಯುವಂತೆ ಮಾಡುತ್ತದೆ. ನಮ್ಮ ಜೀವನವು ನಾವೇ ಹಾಕಿಕೊಂಡ ಮಿತಿಯೊಳಗೆ ಸುತ್ತುಹಾಕುವ ಕೀಳರಿಮೆಯಾಗಿಲ್ಲ. ಬದಲಿಗೆ ಅದು ಔನ್ನತ್ಯವನ್ನೂ ಸಹ ತನ್ನದಾಗಿಸಿಕೊಳ್ಳುವ ಸಾಮರ್ಥ್ಯವಿರುವ ಚೈತನ್ಯ ರೂಪವಾಗಿದೆ. ಹಾಗಾಗಿ ಅದನ್ನು ಕೈಗೂಡಿಸಿಕೊಳ್ಳಲು ನಮ್ಮ ಯೋಚನೆಯಲ್ಲಿ ಬಿನ್ನತೆಯನ್ನು ತರಬೇಕಿದೆ. ನಮ್ಮ ಬದುಕಿನ ಕುರಿತು ವ್ಯಾಪ್ತವಾಗಿ ಯೋಚಿಸಬೇಕಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 6/124–25**

ನಿಮ್ಮ ಮನಸ್ಸು ನಿಜವಾಗಿಯೂ ನಿಮ್ಮ ಅಂಕೆಯಲ್ಲಿಯೇ ಇರುವುದಾದರೆ, ನಿಮ್ಮ ಆಲೋಚನಾ ವಿಧಾನವು ನಿಮ್ಮ ಪ್ರಗತಿಯನ್ನೇ ಅನುಮೋದಿಸುತ್ತಿದ್ದರೆ, ಅದು ನೀವು ಅಲ್ಲಿಲ್ಲ ಎಂಬುದನ್ನು ತೋರಿಸುತ್ತದೆ. ಹಾಗಾಗಿ, ನೀವು ಆ ತಾಣವನ್ನು ಬಿಟ್ಟು ಬೇರೆಡೆ ತೆರಳಿ, ಆಗ ಮಾತ್ರ ನನ್ನ ಮಾತು ನಿಮಗೆ ಅರ್ಥವಾಗುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 9/136–37**

ಯಾವಾಗ ಓರ್ವ ವ್ಯಕ್ತಿಯು ಭೌತಿಕತೆಯಿಂದ ನಿರ್ಲಿಪ್ತನಾಗಿ ಬಿಡುತ್ತಾನೋ ಆಗ ಅವನ ಇಡೀ ಜೀವನವೇ ಪ್ರಕಾಶಮಯವೂ–ಆನಂದಮಯವೂ, ಸರಳವೂ–ಸುಂದರವೂ ಆಗಿ ಪರಿವರ್ತನೆಯಾಗುತ್ತದೆ. ಅದು ಸಾಮಾನ್ಯ ಮರ್ತ್ಯರ ಜೀವನ ಶೈಲಿಗಿಂತಲೂ ಭಿನ್ನವಾಗಿ, ಸಾಮಾನ್ಯ ಜೀವನವು ಅನುಭವಿಸುವ ಸಂತೋಷ–ನೆಮ್ಮದಿಗಿಂತಲೂ ಮಿಗಿಲಾದ ಪೂರ್ಣತೆಯನ್ನು ದೊರಕಿಸಿ ಕೊಡುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 10/93**

ಸಾಮಾನ್ಯವಾದ ಜಡ ಭೌತಿಕದ ಅನುಭವವು, ಅತೀಂದ್ರಿಯವಾದ ಅನುಭೂತಿಯನ್ನು ನಿರಾಕರಿಸಬಹುದು. ಆದರೆ, ಸತ್ಯ ಜ್ಞಾನವನ್ನೂ–ಅಂತಃಸ್ಫುರಿತ ಜ್ಞಾನವನ್ನೂ ಹೊಂದಿರುವ ಅತೀಂದ್ರಿಯವು ಜಡ ಭೌತಿಕವನ್ನು ಕುರಿತು ನುಡಿಯುತ್ತದೆ, "ನನಗೆ ಎಲ್ಲವೂ ತಿಳಿದಿದೆ! ಅದನ್ನು ಸಮರ್ಥಿಸಲು ನನಗೆ ಸಾಕ್ಷ್ಯಗಳನ್ನು ಒದಗಿಸಲು ಸಾಧ್ಯವಿಲ್ಲ. ಆದರೆ ನನಗೆ ಎಲ್ಲವೂ ತಿಳಿದಿದೆ ಎಂಬುದಂತೂ ಸತ್ಯ!" ಎಂದು ತಿಳಿಸುತ್ತದೆ. ಏಕೆಂದರೆ, ಜ್ಞಾನವನ್ನು ಮನಸ್ಸಿನಿಂದ ಅರಿಯಲು ಸಾಧ್ಯವಿಲ್ಲ. ಅದನ್ನು ಅಂತರಾತ್ಮಾಯನದ ಅನುಭೂತಿಯಿಂದ ಕಂಡುಕೊಳ್ಳಬೇಕು. ಅದೊಂದೆ ಅದಕ್ಕಿರುವ ಸಾಕ್ಷ್ಯವಾಗಿದೆ. ಅದನ್ನು ಹೊರತಾದ ಬೇರಾವ ಬಾಹ್ಯ ಪುರಾವೆಗಳಿಂದ ಅದರ ಅಸ್ತಿತ್ವವನ್ನು ಸಮರ್ಥಿಸಲು ಸಾಧ್ಯವಿಲ್ಲ. **ಶ್ರದ್ಧೆಯು ಅಂತರಾತ್ಮಾಯನದ ಚಟುವಟಿಕೆಯಾಗಿದ್ದು, ಅದರ ಜ್ಞಾನವು ಶೀಘ್ರವೂ–ನೇರವೂ ಆಗಿರುತ್ತದೆ.** ಶ್ರದ್ಧೆಯನ್ನು ಸುಳ್ಳೆಂದು, ಅದರ ಅಸ್ತಿತ್ವವನ್ನೇ ಅನೃತವೆಂದು ಸಮರ್ಥಿಸಲು ಅದರ ವಿರುದ್ಧ ಯುದ್ಧಕ್ಕೆ ನಿಲ್ಲುವ ಇಡೀ ಜಗತ್ತು ಸಾವಿರ ಸಾಕ್ಷ್ಯಗಳನ್ನು ನೆರೆಸಿ ನಿಂತರೂ, ಶ್ರದ್ಧೆಯು ಮಾತ್ರ ನಿಲಿಪ್ತಭಾವನೆಯಿಂದ ತನ್ನ ಆಂತರ್ಯದ ಜ್ಞಾನದಿಂದ ಆ ಸಾಕ್ಷ್ಯ ಸೈನ್ಯವನ್ನು ಎದುರಿಸಿ ನಿಲ್ಲುವ ಸಾಮರ್ಥ್ಯವನ್ನು ಹೊಂದಿದೆ. ಅತೀಂದ್ರಿಯವಾದ ಜ್ಞಾನವು ಬಹು ಗಟ್ಟಿಯಾದ ಘನ ದ್ರವ್ಯವಾಗಿದ್ದು, ಅದನ್ನು ನೀವು ನಿಮ್ಮ

ಮನೋಮಯ, ಪ್ರಾಣಮಯ ಮತ್ತು ಅನ್ನಮಯದ ಸ್ತರದೊಳಗೂ ಸ್ಥಾಪಿಸಿಕೊಳ್ಳಬಹುದು. ಈ ಔನ್ನತ್ಯದ ಶ್ರದ್ಧೆಯನ್ನು ಹೊರತುಪಡಿಸಿದಂತೆ ಇನ್ನೊಂದು ಶ್ರದ್ಧೆಯೂ ನಿಮ್ಮೊಳಗೆ ಸುಪ್ತವಾಗಿ ನೆಲೆಸಿರುತ್ತದೆ. ಅಚಲವಾಗಿರುವ ಪರ್ವತಗಳನ್ನೂ ಸಹ ಮುನ್ನೂಕಿಸುವ ಸಾಮರ್ಥ್ಯವಿರುವ ಆ ಶ್ರದ್ಧೆಯು ತನ್ನ ಅಸ್ತಿತ್ವವನ್ನು ಸಮರ್ಥಿಸಿಕೊಳ್ಳಲು ಬರುವ ಎಲ್ಲಾ ಪ್ರಶ್ನಾರ್ಥಕಗಳಿಗೆ ಸೂಕ್ತವಾದ ಉತ್ತರಗಳನ್ನು ನೀಡಿ ಸಾಗಹಾಕುವ ಕಾರ್ಯದಲ್ಲಿ ನಿರತವಾಗಿರುತ್ತದೆ. ನಿಮ್ಮ ವಿಚಾರದೊಳಗೆ ಅರ್ಧಸತ್ಯವು ಮಾತ್ರ ಅಡಕವಾಗಿದ್ದರೆ, ಆ ಔನ್ನತ್ಯವು ಲಭಿಸುವುದು ಹೇಗೆ ಸಾಧ್ಯ? ಶ್ರದ್ಧೆಯು ಯಾವಾಗಲೂ ಅಚಲವಾಗಿರುತ್ತದೆ. ಆ ಘನತೆಯೇ ಶ್ರದ್ಧೆಯ ಗುಣಲಕ್ಷಣವಾಗಿದೆ. ಒಂದು ವೇಳೆ ಆ ಘನತೆಯು ಇಲ್ಲದೇ ಹೋದರೆ ಅದನ್ನು ಶ್ರದ್ಧೆ ಎಂದು ಕರೆಯಲು ಸಾಧ್ಯವೇ ಇಲ್ಲ! ನಮ್ಮ ಭೌತಿಕ–ಪ್ರಾಣಿಕ–ಮಾನಸಗಳು ಅತೀಂದ್ರಿಯದ ನಿಯಮಗಳ ಪ್ರಕಾರ ನಡೆಯದೇ ಇದ್ದಲ್ಲಿ ಇಂತಹ ಸಂದಿಗ್ಧಗಳು ರೂಪುಗೊಳ್ಳುತ್ತವೆ. ಓರ್ವ ಯೋಗಿಯ ಹತ್ತಿರ ಬರುವ ಸಾಮಾನ್ಯ ವ್ಯಕ್ತಿಯೋರ್ವನು, ತನ್ನನ್ನು ಈ ದುಃಖಗಳಿಂದ ಪಾರುಮಾಡಲು ಈ ಸಾಧುವಿಗೆ ಮಾತ್ರ ಸಾಧ್ಯ ಎಂಬ ಶ್ರದ್ಧೆಯನ್ನು ತಳೆದು ಆ ಯೋಗಿಯನ್ನು ನಂಬಲು ಆರಂಭಿಸುತ್ತಾನೆ. ಕ್ರಮೇಣ ಹಲವು ಪವಾಡಗಳನ್ನು ಗಮನಿಸಿದ ನಂತರ ಅವನಿಗೆ ಆ ಯೋಗಿಯ ಮೇಲಿನ ನಂಬುಗೆಯು ನಿಧಾನವಾಗಿ ಮರೆಯಾಗಲಾರಂಭಿಸುತ್ತದೆ. ಕೊನೆಗೊಮ್ಮೆ ತನ್ನ ಶ್ರದ್ಧೆಯ ಪತನದಿಂದ ಆ ವ್ಯಕ್ತಿಯು ತನ್ನ ಭವಿಷ್ಯವನ್ನೇ ಕಳೆದುಕೊಂಡು ಬಿಡುತ್ತಾನೆ...

ಹೀಗೆ ಮನುಷ್ಯರು ದಾರಿ ತಪ್ಪಲು ಅವನಲ್ಲಿರುವ ಅಂಧಶ್ರದ್ಧೆಯೇ ಕಾರಣವೆಂದು ಅರಿಯಲಾಗುತ್ತದೆ. ಹೀಗೆ ತಮ್ಮ ಶ್ರದ್ಧೆಯನ್ನು ಕಳೆದುಕೊಂಡು ತಮ್ಮ ಬದುಕನ್ನು ಹಾಳು ಮಾಡಿಕೊಂಡ ವ್ಯಕ್ತಿಗಳು ಹೇಳುತ್ತಿರುತ್ತಾರೆ, "ನಾನು ಆ ವ್ಯಕ್ತಿಯನ್ನು ನಂಬಿ ಮೋಸಹೋದೆ! ಅವನು ನನ್ನನ್ನು ನಂಬಿಸಿ ದ್ರೋಹವನ್ನೆಸಗಿದ್ದಾನೆ." ಎನ್ನುತ್ತ ಇತರರನ್ನು ದೂಷಿಸುತ್ತಿರುತ್ತಾರೆ. ಆದರೆ, ನಿಜವಾಗಿ ಹೇಳಬೇಕೆಂದರೆ, ತಪ್ಪು ಮೋಸಗಾರನದ್ದಲ್ಲ, ಬದಲಿಗೆ ಶ್ರದ್ಧೆಯುಳ್ಳವನದ್ದಾಗಿರುತ್ತದೆ. ಇದಕ್ಕೆ ಅವನ ದೌರ್ಬಲ್ಯವೇ ಕಾರಣವಾಗಿರುತ್ತದೆ. ಒಂದುವೇಳೆ ಆ ವ್ಯಕ್ತಿಯು ತನ್ನ ಶ್ರದ್ಧೆಯಿಂದ ಹಿಂಸರಿಯದೇ ಇದ್ದರೆ, ಆ ಯೋಗಿಯು ಅವನನ್ನು ಔನ್ನತ್ಯದೆಡೆಗೆ ಏರಿಸುತ್ತಿದ್ದನು. ಆದರೆ ಅವನು ತನ್ನ ಶ್ರದ್ಧೆಯನ್ನು ಕಳೆದುಕೊಂಡಿದ್ದರಿಂದ ಅವನು ತನಗೆ ತಾನೇ ದ್ರೋಹ ಮಾಡಿಕೊಂಡನು. ಪೂರ್ಣರೂಪದ ಶ್ರದ್ಧೆಯ ಕೊರತೆಯೇ ಇದಕ್ಕೆ

ಕಾರಣವಾಗುತ್ತದೆ. ಒಂದುವೇಳೆ ಅವನಲ್ಲಿ ಪೂರ್ಣರೂಪದ ಶ್ರದ್ಧೆಯು ಇದ್ದಿದ್ದರೆ ಮಾತ್ರ ಪವಾಡಗಳು ಸಾಧ್ಯವಾಗುತ್ತವೆ. ಔನ್ನತ್ಯ ಮತ್ತು ಶ್ರದ್ಧೆಗಳು ಯಾವಾಗಲೂ ಪ್ರಾಮಾಣಿಕವೇ ಆಗಿರುತ್ತವೆ. ನೀವು ನಿಮ್ಮ ಬಾಹ್ಯ ಅಸ್ತಿತ್ವದಲ್ಲಿಯೇ ಅಪ್ರಬುದ್ಧತೆಯನ್ನು ತುಂಬಿಕೊಂಡು, ಆಧ್ಯಾತ್ಮಿಕ ಶಕ್ತಿಗಳನ್ನು ಸಂಪಾದಿಸುತ್ತೇನೆಂದು ಹೊರಟು, ಅದರ ಆಂತರ್ಯದ ಅನ್ವೇಷಣೆಯಲ್ಲಿ ತೊಡಗಿದ್ದೇ ಆದಲ್ಲಿ, ಅದು ನಿಮ್ಮನ್ನು ದಾರಿ ತಪ್ಪಿಸುತ್ತದೆ. ನಿಜವಾಗಿ ಹೇಳಬೇಕೆಂದರೆ ಶ್ರದ್ಧೆಯು ನಿಮ್ಮನ್ನು ಅಧೋಗತಿಗಿಳಿಸುವದಿಲ್ಲ. ನಿಮ್ಮ ಶ್ರದ್ಧೆಯೊಳಗೆ ಮನೆ ಮಾಡಿಕೊಂಡಿರುವ ಕೀಳರಿಮೆಗಳೇ ನಿಮ್ಮನ್ನು ಅಧೋಗತಿಗಿಳಿಸುತ್ತವೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/152–53 – ಶ್ರೀಮಾತೆ**

## ಮೊದಲ ನಿಯಮ – ಮುಗ್ಧ ಮಗುವಿನ ವಿಶ್ವಾಸ

ನಮ್ಮಲ್ಲಿರಬೇಕಾದ ಅತ್ಯಂತ ಮುಖ್ಯವಾದ ಸ್ಥಿತಿಯೆಂದರೆ, ಶಿಶುವಿನಲ್ಲಿರುವಂತಹ ಶ್ರದ್ಧೆ. ಶಿಶುವಿಗೆ ಬೇಕಿರುವ ದ್ರವ್ಯಗಳೆಲ್ಲವೂ ಅದಕ್ಕೆ ಸಿಕ್ಕೇ ಸಿಗುತ್ತದೆ ಎಂಬ ನಂಬಿಕೆಯು ಆ ಶಿಶುವಿನಲ್ಲಿರುತ್ತದೆ. ಅದಕ್ಕೆ ಅದರಲ್ಲಿ ಯಾವುದೇ ತೆರನಾದ ಅನುಮಾನವಿರುವದಿಲ್ಲ. ಶಿಶುವಿಗೆ ಏನಾದರೂ ಬೇಕಿದ್ದಲ್ಲಿ ಆ ವಸ್ತು ತನ್ನೆಡೆಗೆ ಬರುತ್ತದೆ ಎಂಬ ನಂಬಿಕೆಯಲ್ಲಿಯೇ ಶಿಶುವು ಜೀವಿಸುತ್ತಿರುತ್ತದೆ. ಈ ರೀತಿಯ ಸರಳವಾದ ಶ್ರದ್ಧೆ ಅಥವಾ ಅವಲಂಬನೆಯೇ ನಮ್ಮಲ್ಲಿರಬೇಕಾದ ಅತ್ಯಂತ ಪ್ರಮುಖವಾದ ಸ್ಥಿತಿಯಾಗಿದೆ.

ಆಕಾಂಕ್ಷೆಯೆಂಬುದು ಮಾನವನಲ್ಲಿರಬೇಕಾದ ಅತಿ ಮುಖ್ಯವಾದ ಅಂಶವಾಗಿದೆ. ಆದರೆ, ಕೆಲವು ಜನರ ಆಂತರ್ಯದಲ್ಲಿ ಶ್ರದ್ಧೆ–ಅಪಶ್ರದ್ಧೆ, ನಂಬಿಕೆ–ಅಪನಂಬಿಕೆ, ಆಶಾವಾದ–ನಿರಾಶಾವಾದಗಳ ನಡುವೆ ನಿರಂತರವಾದ ಘರ್ಷಣೆ ನಡೆಯುತ್ತಲೇ ಇರುತ್ತದೆ. ಈ ಅಂತರ್ಯುದ್ಧದಲ್ಲಿ ಆ ವ್ಯಕ್ತಿಯು ತನ್ನ ಜೀವನವಿಡೀ ಸಂಧಿಗ್ಧತೆ–ಯಲ್ಲಿಯೇ ಹೊಯ್ದಾಡುತ್ತಿರುತ್ತಾರೆ. ನಿಜವಾದ ಗೆಲುವು ದೊರೆಯಬೇಕಾದರೆ, ನಮ್ಮ ಶ್ರದ್ಧೆಯು ಗಟ್ಟಿಯಾಗಿರಬೇಕು. ಹಲವು ಕಾರ್ಯಗಳಲ್ಲಿ ವಿಫಲಗೊಂಡ ಕೆಲವು ಜನರು ಹೇಳುತ್ತಿರುತ್ತಾರೆ, "ನಾನು ಬಯಸಿದ ಯಾವುದೂ ನನಗೆ ದೊರೆಯುವುದಿಲ್ಲ." ಎಂದು ತಮ್ಮನ್ನು ತಾವೇ ಹಳಿದುಕೊಳ್ಳುತ್ತಿರುತ್ತಾರೆ. ಆದರೆ, ಅವರ ಚ್ಯುತಿಗೆ ಅವರ ಆತ್ಮವಿಶ್ವಾಸದಲ್ಲಿರುವ ಕೊರತೆಯೇ ಕಾರಣವಾಗಿರುತ್ತದೆ. ಆತ್ಮವಿಶ್ವಾಸದ ಕೊರತೆಯೇ ಆಕಾಂಕ್ಷೆಯನ್ನು ವಿಫಲವಾಗಿಸುತ್ತದೆ. ಒಂದುವೇಳೆ ನಿಮ್ಮಲ್ಲಿ ಶ್ರದ್ಧೆಯು ಪೂರ್ಣ

ರೂಪದಲ್ಲಿ ಜಾಗೃತವಾಗಿದ್ದೇ ಆದಲ್ಲಿ ನೀವು ಯಾವ ಸಾಧನೆಯನ್ನೂ ಸಹ ಸುಲಭವಾಗಿ ಸಿದ್ಧಿಸಿಕೊಳ್ಳಬಹುದು. ಸಾಮಾನ್ಯವಾಗಿ ಮಕ್ಕಳಲ್ಲಿ ಈ ರೀತಿಯ ಪೂರ್ಣ ವಿಶ್ವಾಸವಿರುತ್ತದೆ. ಬರುಬರುತ್ತ ಹಿರಿಯರ ಕೀಳರಿಮೆಯಿಂದ ಈ ಮನೋಭಾವನೆಯು ನಿಧಾನವಾಗಿ ಕಡಿಮೆಯಾಗಲಾರಂಭಿಸುತ್ತದೆ. ಉದಾಹರಣೆಗೆ: ಮಗುವೊಂದು ಬಿದ್ದು ಒಂದು ಚಿಕ್ಕ ಗಾಯವನ್ನು ಮಾಡಿಕೊಂಡಾಗ, ಮಗುವಿಗೆ ಅದರ ಕುರಿತ ಯಾವುದೇ ಭಯವಿರುವದಿಲ್ಲ. ಅದಕ್ಕೆ ಆ ಗಾಯವು ತಾನಾಗೇ ಮಾಗುವುದು ಎಂಬ ಅರಿವಿರುತ್ತದೆ. ಆದರೆ, ಹಿರಿಯರು ಮಕ್ಕಳಲ್ಲಿ ಅಂತಹ ಗಾಯದ ಕುರಿತು ಭಯವನ್ನು ತುಂಬುತ್ತಾರೆ. ಆಗ ಸಹಜವಾಗಿಯೇ ಅವರಲ್ಲಿರುವ ಶ್ರದ್ಧೆಯು ಕಡಿಮೆಯಾಗುತ್ತದೆ.

ಶಕ್ತಿಯನ್ನು ಸಂಪಾದಿಸಲೆಂದು ಸಾಧನೆಯಲ್ಲಿ ತೊಡಗಿದ ಸಾಧಕನೋರ್ವನು, ಆ ದಿವ್ಯತೆಯಲ್ಲಿ ಶ್ರದ್ಧೆಯನ್ನಿಟ್ಟುಕೊಂಡು ತನ್ನ ಕಾರ್ಯವನ್ನು ಮಾಡುತ್ತಿರುತ್ತಾನೆ. ಕೊನೆಗೆ ಅವನಲ್ಲಿರುವ ಶ್ರದ್ಧೆಯೇ ಅವನಲ್ಲಿ ಶಕ್ತಿಸಂಚಯನವನ್ನು ಮಾಡುತ್ತದೆ. ಇದಕ್ಕೆ ಶ್ರದ್ಧೆಯೇ ಮೂಲಕಾರಣವಾಗಿರುತ್ತದೆ. ಶ್ರದ್ಧೆಯಿಂದ ವ್ಯಕ್ತಿಯ ಆಂತರ್ಯವು ತೆರೆದುಕೊಳ್ಳುತ್ತದೆ. ಆ ಊರ್ಧ್ವದ ಶಕ್ತಿಪಾತವನ್ನು ತನ್ನೊಳಗೆ ತುಂಬಿಸಿಕೊಳ್ಳಲು ಸಿದ್ಧವಾಗುತ್ತದೆ.

ಆ ಔನ್ನತ್ಯದ ವಲಯದಲ್ಲಿ ಚಿರಂತನವಾಗಿ ನೆಲೆಸಿರುವ ಶಕ್ತಿಯು ಇಳೆಗಿಳಿದು ಬಂದು ಸ್ಥಾಯಿಯಾಗಲು ಸದಾ ಸಿದ್ಧವಾಗಿರುತ್ತದೆ. ಆ ಶಕ್ತಿಪಾತವನ್ನು ನಮ್ಮೊಳಗೆ ತುಂಬಿಸಿಕೊಳ್ಳಲು ನಮ್ಮ ಆಂತರ್ಯವನ್ನು ಸದಾ ತೆರೆದುಕೊಂಡಿರಬೇಕು. ಶ್ರದ್ಧೆಯಿಂದ ಮಾತ್ರ ಇದು ಸಾಧ್ಯವಾಗುತ್ತದೆ. ಮಕ್ಕಳಲ್ಲಿ ಈ ಶ್ರದ್ಧೆಯಿರುವದರಿಂದ ಅವರು ಸುಲಭವಾಗಿಯೇ ಶಕ್ತಿಯನ್ನು ಸಂಪಾದನೆಗೈಯುತ್ತಾರೆ. ಆದರೆ, ಕಾಲಗಳೆದಂತೆ, ಹಿರಿಯರ ತಪ್ಪು ತಿಳುವಳಿಕೆಗಳಿಂದ ಮಕ್ಕಳಲ್ಲಿ ಆತ್ಮವಿಶ್ವಾಸವನ್ನು ಕುಂಠಿತಗೊಳಿಸಿ, ಅವರ ಆಂತರ್ಯದ ಬಾಗಿಲನ್ನು ಮುಚ್ಚಿಬಿಡುತ್ತಾರೆ.

ಇದೇ ಹಿರಿಯರಿಗೂ–ಕಿರಿಯರಿಗೂ ಇರುವ ವ್ಯತ್ಯಾಸ. ಆದರೆ, ಈ ವ್ಯತ್ಯಾಸವು ಬಾಹ್ಯ ರೂಪದಲ್ಲಿ ಇರುವದಿಲ್ಲ. ಎಲ್ಲರೂ ಏಕರೂಪಿಗಳೇ ಆಗಿರುತ್ತಾರೆ. ಎಲ್ಲರಿಗೂ ಒಂದೇ ರೀತಿಯ ಆಕಾಂಕ್ಷೆಯನ್ನು ಹೊಂದಿರುತ್ತಾರೆ. ಕೇವಲ ಅವರ ಆಂತರ್ಯದ ರೂಪದಲ್ಲಿ ಮಾತ್ರ ವ್ಯತ್ಯಯಗಳಿರುತ್ತವೆ. ಮಕ್ಕಳಲ್ಲಿ ಯಾವುದೇ ಗೊಂದಲಗಳಿರುವದಿಲ್ಲ. ಅವರು ಸದಾ ನಗುಮುಖದವರಾಗಿ ತಮಗೆ ಬೇಕಿರುವ ಎಲ್ಲವನ್ನೂ ಬಯಸುತ್ತಾರೆ. ಆ ದಿವ್ಯತೆಯು ತನ್ನ ಕರೆಯನ್ನು ಆಲಿಸುತ್ತಾನೋ

ಇಲ್ಲವೋ ಎಂಬ ಗೊಂದಲಗಳಿರುವದಿಲ್ಲ. ಮತ್ತು ತಮಗೆ ಬೇಕಿರುವ ಎಲ್ಲವನ್ನೂ ಅವರು ಪಡೆದುಕೊಳ್ಳುತ್ತಾರೆ ಎಂಬ ವಿಶ್ವಾಸವು ಅವರಲ್ಲಿರುತ್ತದೆ. ಅದಕ್ಕೆ ತಕ್ಕಂತೆ ಅವುಗಳು ಅವರಿಗೆ ದೊರಕಿಯೂ ಬಿಡುತ್ತದೆ. ಅದೇ ರೀತಿ ಹಿರಿಯರೂ ಸಹ ಮುಕ್ತ ಮನಸ್ಸಿನಿಂದ ಯಾವುದೇ ಅಪಶ್ರದ್ಧೆಗೆ ಒಳಗಾಗದೇ ಪೂರ್ಣ ವಿಶ್ವಾಸದಿಂದ ಆ ದಿವ್ಯತೆಯನ್ನು ಕುರಿತು ಪ್ರಾರ್ಥಿಸಿದ್ದೇ ಆದಲ್ಲಿ ಅವರು ಬಯಸಿದ ಎಲ್ಲವೂ ಅವರಿಗೆ ಆ ಔನ್ನತ್ಯದಿಂದ ದೊರೆಯುತ್ತದೆ. ಇದು ಖಂಡಿತ!

ನಮ್ಮಲ್ಲಿ ಶ್ರದ್ಧೆ ಇದ್ದರೆ ತ್ವರಿತವೂ, ಪ್ರಾಮಾಣಿಕವೂ, ಸಮರ್ಥನೀಯವೂ ಆದ ಫಲಿತಾಂಶಗಳು ಲಭಿಸುತ್ತವೆ. ಇದಕ್ಕೆ ವ್ಯತಿರಿಕ್ತವೆಂಬಂತೆ ನಮ್ಮಲ್ಲಿರುವ ವಿರೋಧಾಭಾಸಗಳೇ ಒಂದೊಮ್ಮೆ ನಮ್ಮ ಸರ್ವಸ್ವವನ್ನು ಹಾಳುಮಾಡಿಬಿಡುತ್ತವೆ. ಕಷ್ಟದಲ್ಲಿರುವ ಓರ್ವ ವ್ಯಕ್ತಿಯು ತನ್ನದೇ ವಿರೋಧಾಭಾಸದ ಕಲ್ಪನೆಯಲ್ಲಿ ಕೈಕಟ್ಟಿ ಕುಳಿತು, "ಓಹ್ ನನಗೆ ಅದನ್ನು ಮಾಡಲು ಸಾಧ್ಯವಿಲ್ಲ. ನಾನು ಈ ದುಃಖದಿಂದ ಪಾರಾಗಲು ಬೇರೆ ದಾರಿಯೇ ಇಲ್ಲ!" ಎಂದು ತಲೆ ಮೇಲೆ ಕೈ ಹೊತ್ತು ಕುಳಿತಿಕೊಳ್ಳುತ್ತಾನೆ. ಈ ಪ್ರಮೇಯವು ಕ್ರಮೇಣ ಉಲ್ಬಣಗೊಂಡು ವ್ಯಕ್ತಿಯನ್ನು ಕ್ರಿಯಾಹೀನನಾಗಿಸಿ ಬಿಡುತ್ತದೆ. ಕೊನೆಗೊಮ್ಮೆ ಆತ ಸೋಲಿನ ಪ್ರಪಾತದೊಳಗೆ ಜಾರುತ್ತಾ ಉದ್ವಸ್ಥಗೊಳ್ಳುತ್ತಾನೆ. ಇನ್ನೂ ಕೆಲವರು ತಾವು ಸಮರ್ಥರಾದರೂ ಸಹ ತಮ್ಮ ಮತ್ತು ಆ ಅತೀಂದ್ರೀಯತೆಯ ನಡುವೆ ಬಲಾಢ್ಯವಾದ ಗೋಡೆಯೊಂದನ್ನು ಕಟ್ಟಿಕೊಂಡು ಅದರಿಂದ ಸಂಪೂರ್ಣವಾಗಿ ತಮ್ಮ ಸಂಪರ್ಕವನ್ನು ಕಡಿತಗೊಳಿಸಿಕೊಂಡು ಬದುಕುತ್ತಿರುತ್ತಾರೆ. ಹೀಗೆ ದಿವ್ಯತೆಯ ಕರುಣಾಪ್ರಕಾಶದ ಸಂಪರ್ಕದಿಂದ ವಿಮುಖರಾದ ವ್ಯಕ್ತಿಗಳು ತಮ್ಮಿಡೀ ಜೀವನದಲ್ಲಿ ಸಾಧನೆಯಿಂದ ದೂರವಾಗಿಯೇ ಉಳಿದುಬಿಡುತ್ತಾರೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 6/403–04 – ಶ್ರೀಮಾತೆ**

---

ವಿರೋಧಾಭಾಸ ಮತ್ತು ನಿರಾತ್ಸಾಹಗಳೆಂಬ ಶಕ್ತಿವ್ಯಯದ ಅಂಶಗಳನ್ನು ನಿಮ್ಮೊಳಗೆ ಹರಿಯಲು ಬಿಡಬೇಡಿ. ದಿವ್ಯತೆಯ ಮೇಲೆ ಅಪಶ್ರದ್ಧೆ–ಅಪನಂಬಿಕೆಗಳನ್ನು ಇರಿಸಿಕೊಳ್ಳಬೇಡಿ. ನಿಮ್ಮ ಆಂತರ್ಯದಲ್ಲಿ–ಬಾಹ್ಯದಲ್ಲಿ ಯಾವುದೇ ತೊಂದರೆ–ದೌರ್ಬಲ್ಯಗಳಿದ್ದರೂ, ನಿಮ್ಮ ಶ್ರದ್ಧೆ ಮತ್ತು ಅಭೀಪ್ಸೆಗಳನ್ನು ಮಾತ್ರ ಗಟ್ಟಿಯಾಗಿ ಇರಿಸಿಕೊಳ್ಳಿ. ಯಾವುದಾದರೂ ಮಾರ್ಗದಲ್ಲಿ ಬರುವ ಆ ರಹಸ್ಯ ತೇಜೋರಾಶಿಯು ನಿಮ್ಮ ಕೈಹಿಡಿದು ನಡೆಸುತ್ತದೆ. ವಿರೋಧಾತ್ಮಕ ಶಕ್ತಿಗಳು ಬಂದು ನಿಮ್ಮನ್ನು

ತುಳಿಯಲು–ಹಳಿಯಲು–ಕುಗ್ಗಿಸಲು ಪ್ರಯತ್ನಿಸಿದರೂ, ಆ ಶಕ್ತಿಯ ಮೂಲವು ನಿಮ್ಮ ರಕ್ಷಕನಾಗಿ ನಿಲ್ಲುತ್ತದೆ. ಮುಚ್ಚಿದ ನಿಮ್ಮ ದಾರಿಯನ್ನು ಕಂಟಕಮುಕ್ತವಾಗಿಸುತ್ತದೆ. ನಿಮ್ಮ ಹೃದಯದ ಮೇಲೆ ಕಾರ್ಮೋಡವು ಕವಿದಿದ್ದರೆ, ಅದು ನಿಮ್ಮ ಮಾನಸವನ್ನು ದಿವ್ಯತೆಯ ಶಕ್ತಿಪಾತದಿಂದ ಮುಚ್ಚಿಬಿಡುತ್ತದೆ. ಹಾಗಾಗಿ ಆ ಆಂತರ್ಯದ ದ್ವಾರವನ್ನು ಮುಕ್ತವಾಗಿ ತೆರೆದಿಟ್ಟುಕೊಳ್ಳಲು ಪ್ರಯತ್ನಿಸಿರಿ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/101 – ಶ್ರೀ ಅರವಿಂದರು**

---

## ಮನೋಸಂಕಲ್ಪ ಮಾತ್ರ ಸಾಕಾಗದು – ಬೇರೆ ಏನೋ ಬೇಕಾಗಿದೆ

**– ಅನು: ಡಾ॥ ಮಹಾದೇವ ಸಕ್ರಿ, ವಿಜಯಪುರ**

*ಪ್ರ: ಶ್ರೀಮಾತೆಯವರೆ, ಉದಾಹರಣೆಗಾಗಿ, ನಮ್ಮ ಆರೋಗ್ಯ ಸರಿ ಇಲ್ಲದಿದ್ದಾಗ, ಔಷಧಿಯನ್ನು ತೆಗೆದುಕೊಳ್ಳಬಾರದು ಎನ್ನುವ ನಮ್ಮ ತೀರ್ಮಾನವನ್ನು, ನಮ್ಮ ಒಂದು ಮಾನಸಿಕ ಪ್ರಯತ್ನದಿಂದ, ಈ ಸಂಗತಿಯನ್ನು ದೇಹವು ತಿಳಿದುಕೊಳ್ಳುವಂತೆ ಮಾಡುವಲ್ಲಿ ನಾವು ಯಶಸ್ವಿಯಾಗಬಹುದೇ?*

ಅದು ಸಾಕಾಗುವುದಿಲ್ಲ. ಮಾನಸಿಕ ಸಂಕಲ್ಪವು ಸಾಕಾಗುವುದಿಲ್ಲ, ಇಲ್ಲ. ಮಾನಸಿಕ ಸಂಕಲ್ಪವನ್ನು ಅನುಸರಿಸದೆ ಇರುವಂಥ ಸೂಕ್ಷ್ಮ ಪ್ರತಿಕ್ರಿಯೆಗಳು ನಿಮ್ಮ ದೇಹದಲ್ಲಿವೆ, ಆದ್ದರಿಂದ ಅದು ಸಾಕಾಗುವುದಿಲ್ಲ. ಬೇರೆ ಸಂಗತಿಯ ಅಗತ್ಯವಿದೆ.

ಅನ್ಯ ಕ್ಷೇತ್ರಗಳನ್ನು(ಭಾಗಗಳನ್ನು) ಸಂಪರ್ಕಿಸಲೇಬೇಕು. ಮನಸ್ಸಿನ ಪ್ರಭಾವಕ್ಕಿಂತ ಉನ್ನತವಾದ ಪ್ರಭಾವದ ಅಗತ್ಯವಿದೆ.

ಈ ದೃಷ್ಟಿಕೋನದಿಂದ, ಮನಸ್ಸಿನಲ್ಲಿ ಇರುವುದೆಲ್ಲವೂ, ಯಾವಾಗಲೂ ಆಂತರಿಕ ಆಕ್ಷೇಪಣೆಗೆ ಒಳಗಾಗಿರುತ್ತದೆ. ನೀವು ಒಂದು ಸಂಕಲ್ಪವನ್ನು ಮಾಡುವಿರಿ, ಆದರೆ ಬಹುಶಃ ಈ ಸಂಕಲ್ಪವನ್ನು ಮುಕ್ತವಾಗಿ ಎದುರಿಸದೇ ಇದ್ದರೂ ಅದರ ಪರಿಣಾಮಕಾರಿತ್ವವನ್ನು ಪ್ರಶ್ನಿಸುವಂಥ ಬೇರೆ ಯಾವುದೋ ಸಂಗತಿಯು ಯಾವಾಗಲೂ ಮಧ್ಯೆ ಪ್ರವೇಶಿಸುತ್ತದೆ ಎನ್ನುವುದರ ಬಗ್ಗೆ ನೀವು ಖಚಿತವಾಗಿರುತ್ತೀರಿ.

ನೋಡಿ, ಸಂಕಲ್ಪದ ಅರ್ಧ ಪ್ರಭಾವವನ್ನು ಕಳೆದುಕೊಳ್ಳಲು ಅಲ್ಪ ಅನುಮಾನಕ್ಕೆ ಒಳಗಾಗಲು ಇದು ಸಾಕಾಗುತ್ತದೆ. ನೀವು "ನಾನು ಬಯಸುತ್ತೇನೆ" ಎಂದು

ಹೇಳುವ ಅದೇ ಸಮಯದಲ್ಲಿ, ಹಿಂಬದಿಯಲ್ಲಿ ಎಲ್ಲೋ ಮೌನವಾಗಿ ಅಡಗಿರುವ ಯಾವದೋ ಸಂಗತಿಯು ಇದ್ದು, "ಪರಿಣಾಮ ಏನಾಗುತ್ತದೆ?" ಎಂದು ತನ್ನನ್ನು ತಾನೇ ಕೇಳಿಕೊಂಡರೆ, ಅದು ಎಲ್ಲವನ್ನೂ ನಾಶಪಡಿಸಲು ಸಾಕಾಗುತ್ತದೆ.

ಮನಸ್ಸಿನ ಚಟುವಟಿಕೆಯ ಈ ಆಟವು ಅತ್ಯಂತ ಸೂಕ್ಷ್ಮವಾಗಿದೆ ಮತ್ತು ಸಾಧಾರಣ ಮನುಷ್ಯ ವಿಧಾನವು ಅದನ್ನು ಸಂಪೂರ್ಣವಾಗಿ ನಿಯಂತ್ರಿಸುವಲ್ಲಿ ಸಫಲವಾಗಲಾರದು. ಉದಾಹರಣೆಗೆ, ಯೋಗಾಭ್ಯಾಸವನ್ನು ಮಾಡುವಂಥ ಹಾಗೂ ತಮ್ಮ ದೇಹವನ್ನು ನಿಯಂತ್ರಿಸಬೇಕೆಂದು ಬಯಸುವ ಜನರಿಗೆ ಇದು ಚನ್ನಾಗಿ ಗೊತ್ತಿರುವ ಸಂಗತಿಯಾಗಿದೆ: ಒಂದು ವೇಳೆ ಸತತ ಯೋಗಾಭ್ಯಾಸದ ಮುಖಾಂತರ ಅವರು ತಮ್ಮಲ್ಲಿ ಏನಾದರೊಂದನ್ನು ನಿಯಂತ್ರಿಸಿಕೊಳ್ಳುವಲ್ಲಿ ಯಶಸ್ವಿಯಾದರೆ – ದೇಹದ ಒಂದು ನಿರ್ದಿಷ್ಟವಾದ ಬಲಹೀನತೆ, ಒಂದು ಖಚಿತವಾದ ಅಸಮತೋಲನಕ್ಕೆ ತೆರೆದುಕೊಳ್ಳುವಿಕೆ – ಒಂದು ವೇಳೆ ಇದನ್ನು ಮಾಡಲು ಯಶಸ್ವಿಯಾದರೆ ಮತ್ತು ಫಲಿತಾಂಶವನ್ನು ಹೊಂದಿದರೆ (ಉದಾಹರಣೆಗೆ, ದೀರ್ಘ ಸಮಯದವರೆಗೆ, ವರ್ಷಗಳವರೆಗೆ ಈ ಅಸಮತೋಲನದ ಕಣ್ಮರೆಯಾಗುವಿಕೆ), ಒಂದು ದಿನ ಒಂದು ಖಚಿತವಾದ ಕ್ಷಣದಲ್ಲಿ, ಇದ್ದಕ್ಕಿದ್ದಂತೆ "ಆಹ್! ಈಗ ಇದು ಕೈಗೂಡಿದೆ", ಎನ್ನುವ ವಿಚಾರವು ಅವರ ಮನಸ್ಸಿನಲ್ಲಿ ಹರಿದರೆ, ಮುಂದಿನ ಕ್ಷಣದಲ್ಲಿ ಅದು ಮರಳುತ್ತದೆ. ಏಕೆಂದರೆ, ದುರ್ಬಲವಾದ ಒಂದು ಸ್ತರದ ಮೇಲೆ, ಚಿಂತನೆಯ ಸ್ತರದ ಮೇಲೆ, ಅವುಗಳು ತ್ಯಜಿಸಿದಂಥ ಸಂಗತಿಯ ಕಂಪನಗಳ ಸಂಪರ್ಕದಲ್ಲಿ ಅವುಗಳು ಬಂದಿರುವುದನ್ನು ಮತ್ತು ಯಾವುದೋ ಕಾರಣಕ್ಕೆ ಅಥವಾ ಬಲಗಳ (ಸತ್ವಗಳ) ಆಟಗಳಲ್ಲಿನ ಕಾರಣಕ್ಕೆ, ಅವುಗಳು ಮುಕ್ತ, ಮತ್ತು ಅದು ತಿರುಗಿ ಬರುತ್ತದೆ ಎನ್ನುದನ್ನು ಇದು ಸಾಬೀತುಪಡಿಸುತ್ತದೆ.

ಇದು ಯೋಗದಲ್ಲಿ ಚನ್ನಾಗಿ ಗೊತ್ತಿರುವಂಥ ಸಂಗತಿಯಾಗಿದೆ. ನಾವು ಸಂಪಾದಿಸಿದ ಯಶಸ್ಸನ್ನು ಗಮನಿಸುವ ಸರಳ ಸಂಗತಿ – ಅದನ್ನು ಮಾನಸಿಕವಾಗಿ ಗಮನಿಸುವುದು, ಅದರ ಬಗ್ಗೆ ಯೋಚಿಸುವುದು – ಇವುಗಳೆಲ್ಲವೂ ಹಲವು ವರ್ಷಗಳಿಂದ ಅಸ್ತಿತ್ವದಲ್ಲಿರಬಹುದಾದ ಯೋಗದ ಪರಿಣಾಮವನ್ನು ನಾಶಮಾಡಲು ಸಾಕಾಗುತ್ತದೆ.

ಇಲ್ಲ, ಮಾನಸಿಕ ಕ್ಷೇತ್ರದಲ್ಲಿ ಯಶಸ್ಸುಗಳು ಗೆಲ್ಲಲ್ಪಡುವುದಿಲ್ಲ. ಅದು ಅಸಾಧ್ಯ. ಇದು ಎಲ್ಲಾ ಪ್ರಭಾವಗಳಿಗೆ, ಎಲ್ಲಾ ವಿರೋಧಾತ್ಮಕ ಸೆಳೆತಗಳಿಗೆ ಮುಕ್ತವಾಗಿದೆ. ನಾವು ಮಾಡಿಕೊಳ್ಳುವಂಥ ಎಲ್ಲ ಮಾನಸಿಕ ರಚನೆಗಳು ತಮ್ಮದೇ ಆದ

ವಿರೋಧಾಭಾಸವನ್ನು ಹೊಂದಿರುತ್ತವೆ. ನಾವು, ಅದನ್ನು ತಳ್ಳಿಹಾಕಲು ಅಥವಾ ಸಾಧ್ಯವಾದಷ್ಟು ನಿರುಪದ್ರವಾಗಿಸಲು ಪ್ರಯತ್ನಿಸಬಹುದು, ಆದರೆ ಅದು ಅಸ್ತಿತ್ವದಲ್ಲಿರುತ್ತದೆ, ಅದು ಅಲ್ಲಿದೆ, ಮತ್ತು ಮತ್ತು ಚಿಕ್ಕದಾದ ಒಂದು ದೌರ್ಬಲ್ಯ ಅಥವಾ ಜಾಗರೂಕತೆಯ ಕೊರತೆಯಿಂದ ಅಥವಾ ಅಜಾಗರೂಕತೆಯಿಂದ, ಅದು ಪ್ರವೇಶಿಸುತ್ತದೆ ಮತ್ತು ಎಲ್ಲ ಕೆಲಸಗಳನ್ನು ನಾಶಪಡಿಸುತ್ತದೆ. ಮಾನಸಿಕವಾಗಿ, ಕೆಲವು ಫಲಿತಾಂಶಗಳನ್ನು ನಾವು ಹೊಂದಬಹುದು, ಅವುಗಳು ಯಾವಾಗಲೂ ಮಿಶ್ರ ಫಲಿತಾಂಶಗಳಾಗಿರುತ್ತವೆ. ಇಲ್ಲಿ ಬೇರೆ ಯಾವುದೋ ಸಂಗತಿಯ ಅಗತ್ಯವಿದೆ. ಸುರಕ್ಷತೆಯೊಂದಿಗೆ ಕಾರ್ಯ ನಿರ್ವಹಿಸಲು ನಾವು ಮನಸ್ಸಿನ ಕ್ಷೇತ್ರದಿಂದ ನಂಬಿಕೆಯ ಕ್ಷೇತ್ರಕ್ಕೆ ಅಥವಾ ಉನ್ನತ ಪ್ರಜ್ಞೆಗೆ ಸಾಗಬೇಕು.

ಶರೀರದ ಮೇಲೆ ಕೆಲಸ ಮಾಡಲು ಇರುವಂಥ ಅತ್ಯಂತ ಪ್ರಭಾವಿ ಸಾಧನವು ನಂಬಿಕೆಯಾಗಿದೆ ಎನ್ನುವುದು ಸ್ಪಷ್ಟ. ಸರಳ ಹೃದಯವನ್ನು ಹೊಂದಿದ, ಸಂಕೀರ್ಣ ಮನಸ್ಸನ್ನು ಹೊಂದದ, ಅತಿ ಶ್ರೇಷ್ಠವಾದ, ಅತಿ ಸಂಕೀರ್ಣವಾದ ಮಾನಸಿಕ ವಿಕಾಸವನ್ನು ಹೊಂದದ ಆದರೆ ಆಳವಾದ ನಂಬಿಕೆಯನ್ನು ಹೊಂದಿದ, ತಮ್ಮ ದೇಹದ ಮೇಲೆ ಕಾರ್ಯದ ಅಪಾರ ಪ್ರಭಾವವನ್ನು ಹೊಂದಿದ ಜನರು ಸರಳ ಜನರು. ಅದಕ್ಕಾಗಿಯೇ ನಾವು ಕೆಲವೊಮ್ಮೆ ಸಾಕಷ್ಟು ಆಶ್ಚರ್ಯಚಕಿತರಾಗುತ್ತೇವೆ: “ಇಲ್ಲಿ ಮಹಾ ಸಾಕ್ಷಾತ್ಕಾರ ಹೊಂದಿದ, ಅಸಾಧಾರಣವಾದ ವ್ಯಕ್ತಿಯೊಬ್ಬನಿದ್ದಾನೆ, ಆದರೆ ಅವನು ಎಲ್ಲ ಸಣ್ಣ ಭೌತಿಕ ವಿಷಯಗಳ ಗುಲಾಮನಾಗಿದ್ದಾನೆ. ಆದರೆ ಈ ಮನುಷ್ಯನು ತುಂಬಾ ಸರಳ ಮತ್ತು ತುಂಬಾ ಒರಟಾಗಿ ಕಾಣಿಸುತ್ತಾನೆ, ಮತ್ತು ಅವನು ಶ್ರೇಷ್ಠವಾದ ನಂಬಿಕೆಯನ್ನು ಹೊಂದಿದ್ದಾನೆ, ಮತ್ತು ಒಬ್ಬ ವಿಜಯಶಾಲಿಯಂತೆ ತೊಂದರೆಗಳನ್ನು ಮತ್ತು ಅಡೆತಡೆಗಳನ್ನು ಎದುರಿಸುತ್ತಾನೆ!”

ಒಬ್ಬ ಹೆಚ್ಚು ಸುಸಂಸ್ಕೃತನಾದ ಮನುಷ್ಯನು ನಂಬಿಕೆಯನ್ನು ಹೊಂದಿರಲಾರನೆಂದು ನಾನು ಹೇಳಲಾರೆ, ಆದರೆ ಇದು ಹೆಚ್ಚು ಕಷ್ಟ, ಏಕೆಂದರೆ ಯಾವಾಗಲೂ ವಿರೋಧಿಸುವಂಥ, ಚರ್ಚಿಸುವಂಥ, ಅರ್ಥಮಾಡಿಕೊಳ್ಳಲು ಪ್ರಯತ್ನಿಸುವಂಥ ಈ ಮಾನಸಿಕ ಅಂಶವು ಯಾವಾಗಲೂ ಅಲ್ಲಿರುತ್ತದೆ, ಇದನ್ನು ಒಪ್ಪಿಸುವುದು ಕಷ್ಟ, ಇದಕ್ಕೆ ಪುರಾವೆಗಳು ಬೇಕಾಗುತ್ತವೆ. ಅವನ ನಂಬಿಕೆಯು ಕಡಿಮೆ ಶುದ್ಧವಾಗಿರುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 9/124–25** **– ಶ್ರೀಮಾತೆ**

## ಶುದ್ಧ (ಪೂರ್ಣ) ವಿಶ್ವಾಸ ಎಂದರೇನು

ಮಹದಾಸೆಯಿಂದ, ಪ್ರತಿಷ್ಠೆಯಿಂದ, ದುರಭಿಮಾನದಿಂದ, ಮಾನಸಿಕ ದುರಹಂಕಾರದಿಂದ, ಪ್ರಾಣಿಕ ಸ್ವ–ಬಯಕೆಯಿಂದ, ವ್ಯಕ್ತಿಗತ ಬೇಡಿಕೆಯಿಂದ, ನಿಮ್ನ ಸ್ವಭಾವದ ಕ್ಷುಲ್ಲಕ ತೃಪ್ತಿಗಳ ಬಯಕೆಯಿಂದ ಮಲಿನಗೊಂಡ ಮಾನಸಿಕ ಮತ್ತು ಪ್ರಾಣ ಪುರುಷನಲ್ಲಿನ ಅಹಂಕಾರಯುಕ್ತ ನಂಬಿಕೆಯು ಕೆಳಮಟ್ಟದ ಮತ್ತು ಹೊಗೆಯಿಂದ ಮಸುಕಾದ ಪ್ರಭೆಯಾಗಿದ್ದು ಅದು ಸ್ವರ್ಗದ ಕಡೆಗೆ ಮೇಲಕ್ಕೆ ಉರಿಯಲು ಸಾಧ್ಯವಿಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/8 – ಶ್ರೀ ಅರವಿಂದರು**

*ಪ್ರ: "ಮಾನಸಿಕ ಪುರುಷನಲ್ಲಿ ಒಂದು ಅಹಂಕಾರಯುಕ್ತ ನಂಬಿಕೆಯು" ಇರೋದು ಹೇಗೆ ಸಾಧ್ಯ?*

ಅವರು ಅದನ್ನು ಬಹಳೇ ಚನ್ನಾಗಿ ವಿವರಿಸಿದ್ದಾರೆ: "ಮಹದಾಸೆಯಿಂದ ಮಲಿನಗೊಂಡ", ಇತ್ಯಾದಿ. ನೀವದನ್ನು ಬೇರೆ ರೀತಿಯಾಗಿ ಹೇಳಿದರೆ, ಅದು ಹೆಚ್ಚು ನಿಜ ಎಂದು ನಾನು ಭಾವಿಸುತ್ತೇನೆ. ಯಾವುದೇ ನಂಬಿಕೆಯಲ್ಲಿ ಸ್ವಲ್ಪವಾದರೂ ಇವೆಲ್ಲ ಇಲ್ಲವೇ? ಏಕೆಂದರೆ, ನಂಬಿಕೆಯು ಒಂದು ವೇಳೆ ಶುದ್ಧವಾಗಿದ್ದರೆ, ... ಮಾಡುವ ಸಾಮರ್ಥ್ಯವುಳ್ಳದ್ದಾಗಿದ್ದರೆ, ಅದನ್ನು ಯಾವುದೂ ವಿರೋಧಿಸುವುದಿಲ್ಲ ಎನ್ನುವ ಮಾತನ್ನು ಮತ್ತೆ ಮತ್ತೆ ಹೇಳಲಾಗಿದೆ. ಇದರರ್ಥ, ಎಲ್ಲ ವಿಷಯಗಳಿಂದ ಕಳಂಕಿತವಾಗದ, ಒಂದು ನಿಜವಾದ ನಂಬಿಕೆ, ಸಂಪೂರ್ಣವಾದ ಶುದ್ಧ ನಂಬಿಕೆಯನ್ನು ನಾವು ಹೊಂದಿದ್ದರೆ, ಯಾವುದೂ ಅಸಾಧ್ಯವಲ್ಲವೆಂದು ಹೇಳೋಣ.

ಒಂದು ಶುದ್ಧ ನಂಬಿಕೆಯು ಸರ್ವಶಕ್ತ ಮತ್ತು ಎದುರಿಸಲಾಗದಂಥ ಸಂಗತಿಯಾಗಿದೆ. ಸರ್ವಶಕ್ತವಾದ ಮತ್ತು ಎದುರಿಸಲಾಗದಂಥ ಸತ್ಯವನ್ನು ನಾವು ಹೆಚ್ಚಾಗಿ ಕಾಣುವುದಿಲ್ಲ, ಮತ್ತು ಇದು ಸಂಪೂರ್ಣವಾಗಿ ಶುದ್ಧವಾಗಿಲ್ಲ ಎನ್ನುವುದನ್ನು ತೋರಿಸುತ್ತದೆ. ಈ ಪ್ರಶ್ನೆಯನ್ನು ಈ ರೀತಿಯಾಗಿ ಕೇಳಬೇಕು: ನಾವು ಪ್ರತಿಯೊಬ್ಬರೂ ಒಂದು ನಂಬಿಕೆಯನ್ನು ಹೊಂದಿದ್ದೇವೆ, ಉದಾಹರಣೆಗೆ, ಯಾವುದೋ ಒಂದು ಸಂಗತಿಯಲ್ಲಿನ ನಂಬಿಕೆ, ನಮ್ಮೊಳಗಿನ ದೈವೀ ಉಪಸ್ಥಿತಿಯ ಮೇಲಿನ ಒಂದು ನಂಬಿಕೆ. ಒಂದು ವೇಳೆ ನಮ್ಮ ನಂಬಿಕೆಯು ಶುದ್ಧವಾಗಿದ್ದರೆ, ನಮ್ಮೊಳಗಿರುವ ದೈವೀ ಉಪಸ್ಥಿತಿಯ ಬಗ್ಗೆ ನಾವು ತಕ್ಷಣವೇ ಅರಿತುಕೊಳ್ಳುತ್ತೇವೆ. ಈ ಉದಾಹಣೆಯು

ತಿಳಿದುಕೊಳ್ಳಲು ಬಹಳೇ ಸುಲಭ. ನೀವು ನಂಬಿಕೆಯನ್ನು ಹೊಂದಿದ್ದೀರಿ, ಅದು ನಿಮ್ಮೊಳಗಿದೆ, ಆದರೆ ನಿಮಗೆ ಅದರ ಅನುಭವವಿಲ್ಲ. ಏಕೆ? ಏಕೆಂದರೆ ನಂಬಿಕೆಯು ಶುದ್ಧವಾಗಿಲ್ಲ. ಒಂದು ವೇಳೆ ನಂಬಿಕೆಯು ಪೂರ್ತಿ ಶುದ್ಧವಾಗಿದ್ದರೆ, ತಕ್ಷಣವೇ ಆ ಕಾರ್ಯ ನೆರವೇರುತ್ತಿತ್ತು. ಇದು ತುಂಬಾ ಸತ್ಯವಾದ ಮಾತು. ಹಾಗಾಗಿ, ನೀವು ಆ ಸಂಗತಿಯು ತಕ್ಷಣಕ್ಕೆ ಸಂಗತಿಯ ಅರಿವು ಆಗಿಲ್ಲವೆಂದು ನಿಮಗೆ ತಿಳಿದಾಗ, "ಆದರೆ ಅದರ ಅರಿವು ಏಕಾಗಿಲ್ಲ? ನನ್ನ ನಂಬಿಕೆಯಲ್ಲಿ ಏನಿದೆ?" ಎಂದು ಯೋಚಿಸಲು ನೀವು ಆರಂಭಿಸಬೇಕು. ಮತ್ತು ನೀವು ಅದೇ ಪ್ರಾಮಾಣಿಕತೆಯಿಂದ ನೋಡುತ್ತ ಹೋದರೆ, ಅದರಲ್ಲಿ ಹಲವು ಸಣ್ಣ ವಿಷಯಗಳಿವೆ ಎನ್ನುವುದನ್ನು ನೀವು ಕಾಣುತ್ತೀರಿ, ಅನೇಕ ಸಣ್ಣ ವಿಷಯಗಳು – ದೊಡ್ಡದಲ್ಲದ, ಇದರಷ್ಟು ದೊಡ್ಡದಲ್ಲದ, ಹೇವರಿಕೆ ಉಂಟುಮಾಡುವಂಥ ಸಂಗತಿಗಳು. ಅನೇಕ ಬಾರಿ ಸ್ವಲ್ಪ ಅಜ್ಞಾತವು ಬರುತ್ತದೆ, ಮತ್ತು ನಂತರ ತುಂಬಾ ಹಿಂಸಾತ್ಮಕವಲ್ಲ ಒಂದು ಬಯಕೆ ಬರುತ್ತದೆ – ಅದು ತನ್ನಷ್ಟಕ್ಕೆ ತಾನು ಹೆಚ್ಚು ತೋರಿಕೊಳ್ಳುವುದಿಲ್ಲ. ಅದು ನಿಮಗೆ ನೀಡುವ ಪ್ರಾಮುಖ್ಯತೆ, ಅದು ನಿಮಗೆ ನೀಡುವ ಶಕ್ತಿ ಮತ್ತು ಅದು ನಿಮಗೆ ನೀಡುವ ತೃಪ್ತಿಯು...

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 15/319–20**

ನಮ್ಮ ಆಲೋಚನೆಯಲ್ಲಿ ಅನುಮಾನಿಸುವ ಮತ್ತು ವಾಗ್ವಾದ ಮಾಡುವಂಥ ಚಿಕ್ಕ ಮೂಲೆಯೊಂದು ಯಾವಾಗಲೂ ಇರುತ್ತದೆ. ಹಾಗಾಗಿ ಅದು ಎಲ್ಲವನ್ನೂ ಹಾಳುಮಾಡುತ್ತದೆ. ನಾವೊಂದು ಸ್ಪಷ್ಟವಾದ ಸಂದಿಗ್ಧ ಪರಿಸ್ಥಿತಿಯಲ್ಲಿದ್ದಾಗ, ಏನನ್ನೂ ಮಾಡಲು ಸಾಧ್ಯವಿಲ್ಲವೆಂದು ಮನಸ್ಸಿಗೆ ತಿಳಿದಾಗ, ಅದು ಮೂರ್ಖನಂತೆ ಹಾಗೂ ಅಸಮರ್ಥನಂತೆ ಅಲ್ಲಿ ನಿಂತಾಗ, ಆಗ, ಆ ಕ್ಷಣದಲ್ಲಿ ನಾವು ಉನ್ನತ ಸಹಾಯವನ್ನು ಬಯಸಿದರೆ, ಹತಾಶೆಯಿಂದ ಬರುವಂಥ ಆ ರೀತಿಯ ತೀವ್ರತೆಯನ್ನು ಅಭೀಪ್ಸೆಯು ನಿಖರವಾಗಿ ಹೊಂದಿರುತ್ತದೆ, ಮತ್ತು ಅದು ಪರಿಣಾಮವನ್ನು ಬೀರಲು ಆರಂಭಿಸುತ್ತದೆ. ಆದರೆ ನಿಮ್ಮ ಆಲೋಚನೆಯು ವಾದ ಮಾಡುವುದನ್ನು ಮುಂದುವರೆಸಿ ಅದು ಹೀಗೆ ಹೇಳಿದರೆ: "ಹೌದು, ಹೌದು, ನಾನು ಆಶಿಸಿದ್ದೇನೆ, ನಾನು ಪ್ರಾರ್ಥಿಸಿದ್ದೇನೆ, ಆದರೆ, ಈ ಕ್ಷಣವಾಗಿದ್ದರೆ, ಅದು ಬರುವುದೇ ಮತ್ತು ಇದು ಸಾಧ್ಯವೇ ಎನ್ನುವುದು ದೇವರಿಗೆ ಗೊತ್ತು," ಸರಿ, ಆಗ ಎಲ್ಲವೂ ಮುಗಿದಂತೆ, ಅದು ಕೆಲಸ ಮಾಡುವುದಿಲ್ಲ. ಇದು ಅತ್ಯಂತ ಸಾಮಾನ್ಯ ಸಂಗತಿಗಳಲ್ಲಿ ಒಂದಾಗಿದೆ, "ನೀನು ಯೋಗದಲ್ಲಿ ಮುಂದುವರೆಯಬೇಕಾದರೆ, ನಿನ್ನಲ್ಲಿ ಬಯಕೆಗಳಿರಬಾರದು,"

ಎಂದು ಜನರಿಗೆ ಹೇಳಲ್ಪಟ್ಟಿದೆ. ಇನ್ನೂ ಸ್ವಲ್ಪ ಮುಂದುವರೆದು, "ನೀವು ಯಾವುದೇ ಬೇಡಿಕೆಗಳನ್ನು ಹೊಂದಿರಲೇಬಾರದು," ಎಂದು ಹೇಳುತ್ತಾರೆ. ಇನ್ನೂ ಸ್ವಲ್ಪ ಮುಂದುವರೆದು "ದೇವರಿಂದ ಎಂದಿಗೂ ಏನನ್ನೂ ಕೇಳಬೇಡ" ಎಂದು ಹೇಳುತ್ತಾರೆ. ನೂರರಲ್ಲಿ ತೊಂಬತ್ತೊಂಬತ್ತು ಸಾರಿ ಜನರ ಪ್ರತಿಕ್ರಿಯೆ ಹೀಗಿರುತ್ತದೆ: "ಆಹ್! ಒಂದು ವೇಳೆ ನಾನು ಏನನ್ನೂ ಕೇಳದಿದ್ದರೆ, ನನಗೆ ಬೇಕಾಗಿದ್ದನ್ನು ನಾನು ಹೊಂದಲಾರೆ." ಈ ಸಂಪೂರ್ಣ ಕ್ರಿಯೆಯನ್ನು ಅವರು ಬುಡದಲ್ಲಿಯೇ ಕತ್ತರಿಸುತ್ತಾರೆ ಎನ್ನುವುದು ಅವರಿಗೆ ಗೊತ್ತಿಲ್ಲ! ಅವರು ನಂಬಿಕೆಯನ್ನು ಹೊಂದಿಲ್ಲ. "ನನಗೆ ಇದು ಬೇಕು...."

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 5/366–367 – ಶ್ರೀಮಾತೆ**

## ವೈಯಕ್ತಿಕ ಸಾಧನೆ – ವಿಶ್ವಾಸದ ವೃದ್ಧಿ

ನಿಶ್ಚಿತವಾಗಿ, ನಂಬಿಕೆ ಎನ್ನುವುದು, ದೈವೀ ಅನುಗ್ರಹವು ನಮಗೆ ನೀಡಿದಂಥ ಒಂದು ಉಡುಗೊರೆಯಾಗಿದೆ. ಅದು ಶಾಶ್ವತ ಸತ್ಯದ ಮೇಲೆ ಇದ್ದಕ್ಕಿದ್ದಂತೆ ತೆರೆಯುವ ಬಾಗಿಲಿನಂತೆ, ಮತ್ತು ನಾವು ಅದರ ಮೂಲಕ ಅದನ್ನು ನೋಡಬಹುದು, ಬಹುಶಃ ಸ್ಪರ್ಶಿಸಲೂಬಹುದು.

ಮಾನವೀಯತೆಯ ಆರೋಹಣದಲ್ಲಿರುವ ಎಲ್ಲ ಸಂಗತಿಯಂತೆ, ವೈಯಕ್ತಿಕ ಪ್ರಯತ್ನದ ಅವಶ್ಯಕತೆ ಇದೆ – ವಿಶೇಷವಾಗಿ ಆರಂಭದಲ್ಲಿ. ಕೆಲವು ಅಸಾಧಾರಣ ಸಂದರ್ಭಗಳಲ್ಲಿ, ನಮ್ಮ ಬುದ್ಧಿವಂತಿಕೆಯನ್ನು ಸಂಪೂರ್ಣವಾಗಿ ತಪ್ಪಿಸುವ ಕಾರಣಗಳಿಗಾಗಿ, ಬಹುತೇಕ ಆಕಸ್ಮಿಕವಾಗಿ, ಸಾಕಷ್ಟು ಅನಿರೀಕ್ಷಿತವಾಗಿ, ಬಹುತೇಕ ಎಂದಿಗೂ ಭಿನ್ನವಿಸಿಕೊಳ್ಳದೆ, ಆದರೆ ಹಂಬಲಕ್ಕೆ, ಅಗತ್ಯತೆಗೆ, ಆಕಾಂಕ್ಷೆಗೆ, ಪುರುಷನಲ್ಲಿನ ಬಯಸುವ ಮತ್ತು ಹಾತೊರೆಯುವ ಯಾವುದೋ ಸಂಗತಿಗೆ (ಪ್ರಜ್ಞಾಪೂರ್ವಕ ಮತ್ತು ವ್ಯವಸ್ಥಿತ ರೀತಿಯಲ್ಲಿ ಅಲ್ಲದೇ ಇದ್ದರೂ ಸಹ) ನಂಬಿಕೆಯು ಒಂದು ಉತ್ತರವಾಗಿರುವ ಸಾಧ್ಯತೆಯಾಗಿದೆ. ಆದರೆ ಯಾವುದೇ ಸಂದರ್ಭದಲ್ಲಿ, ನಂಬಿಕೆಯು ದಯಪಾಲಿಸಲ್ಪಟ್ಟಾಗ, ಆಂತರಿಕ ಹಠಾತ್ ಜ್ಞಾನೋದಯವನ್ನು ನಾವು ಹೊಂದಿದಾಗ, ಅದನ್ನು ನಿರಂತರವಾಗಿ ಕಾಪಾಡುವ ಸಲುವಾಗಿ ಕ್ರಿಯಾಶೀಲ ವ್ಯಕ್ತಿಗತ ಪ್ರಯತ್ನವು ಸಂಪೂರ್ಣವಾಗಿ ಅನಿವಾರ್ಯವಾಗಿದೆ. ನಾವು ನಮ್ಮ ನಂಬಿಕೆಗೆ ಅಂಟಿಕೊಂಡಿರಬೇಕು, ನಮ್ಮ ನಂಬಿಕೆಯನ್ನು ಆಶಿಸಬೇಕು; ನಾವು ಅದನ್ನು ಬಯಸಲೇಬೇಕು, ಅದನ್ನು ಪೋಷಿಸಲೇಬೇಕು, ಅದನ್ನು ರಕ್ಷಿಸಲೇಬೇಕು.

ಮನುಷ್ಯನ ಮನಸ್ಸಿನಲ್ಲಿ, ಸಂಶಯದ, ವಾದದ, ಸಂಶಯಮನೋವೃತ್ತಿಯ ಒಂದು ಜಾಡ್ಯದ ಮತ್ತು ಶೋಕಿಸಬಹುದಾದ ಅಭ್ಯಾಸವಿದೆ. ಮಾನವನು ತನ್ನ ಪ್ರಯತ್ನವನ್ನು ಮಾಡಬೇಕಾಗಿರುವುದು ಇಲ್ಲಿಯೇ: ಅವುಗಳನ್ನು ಪ್ರವೇಶಿಸಲು ನಿರಾಕರಿಸುವುದು, ಅವುಗಳನ್ನು ಕೇಳಲು ನಿರಾಕರಿಸುವುದು ಮತ್ತು ಇನ್ನೂ ಮೇಲಾಗಿ ಅವುಗಳನ್ನು ಅನುಸರಿಸಲು ನಿರಾಕರಿಸುವುದು. ಸಂದೇಹ ಮತ್ತು ಸಂಶಯ ಮನೋವೃತ್ತಿಯೊಂದಿಗೆ ಮಾನಸಿಕವಾಗಿ ಆಡುವ ಆಟಕ್ಕಿಂತ ಹೆಚ್ಚು ಅಪಾಯಕಾರಿಯಾದ ಆಟವಿಲ್ಲ, ಅವರುಗಳು ಶತ್ರುಗಳು ಮಾತ್ರವಲ್ಲದೆ, ಅವುಗಳು ಭಯಾನಕ ಖೆಡ್ಡಗಳು ಮತ್ತು ಒಮ್ಮೆ ನಾವು ಅವುಗಳಲ್ಲಿ ಬಿದ್ದರೆ, ಅವುಗಳಿಂದ ಹೊರಬರುವುದು ಭಾರಿ ಕಠಿಣವಾಗುತ್ತದೆ.

ಕಲ್ಪನೆಗಳೊಂದಿಗೆ ಆಟವಾಡುವುದನ್ನು, ಅವುಗಳೊಂದಿಗೆ ಚರ್ಚಿಸುವುದನ್ನು, ಅವುಗಳ ನಂಬಿಕೆಯನ್ನು ವಿರೋಧಿಸುವಿಕೆಯನ್ನು ಶ್ರೇಷ್ಠ ಮಾನಸಿಕ ಸೊಬಗೆಂದು ಕೆಲವು ಜನರು ಯೋಚಿಸುತ್ತಾರೆ; ಇದು ಅವರಿಗೆ ಉನ್ನತ ಮನೋವೃತ್ತಿಯನ್ನು ನೀಡುತ್ತದೆ ಎಂದು ಅವರು ಯೋಚಿಸುತ್ತಾರೆ, ಈ ರೀತಿಯಾಗಿ ಅವರು "ಮೂಢ ನಂಬಿಕೆ" ಮತ್ತು "ಅಜ್ಞಾನದ" ಮೇಲಿರುವವರೆಂದು ಯೋಚಿಸುತ್ತಾರೆ; ಆದರೆ ಸಂಶಯ ಮತ್ತು ಸಂಶಯ ಮನೋವೃತ್ತಿಯ ಸಲಹೆಗಳನ್ನು ನೀವು ಕೇಳಿದರೆ, ನೀವು ಶಾಶ್ವತವಾದ ಅಜ್ಞಾನದಲ್ಲಿ ಬೀಳುವಿರಿ ಮತ್ತು ಸರಿಯಾದ ಮಾರ್ಗದಿಂದ ದೂರ ಸರಿಯುವಿರಿ (ದಾರಿ ತಪ್ಪುವಿರಿ). ನೀವು ಗೊಂದಲದ, ತಪ್ಪಾದ, ಪ್ರತಿರೋಧಗಳ ಒಂದು ಅವ್ಯವಸ್ಥೆಯನ್ನು ಪ್ರವೇಶಿಸುವಿರಿ ... ನೀವು ಅದರಿಂದ ಹೊರಗಡೆ ಬರಲು ಸಾಧ್ಯವೆಂದು ನಿಮಗೆ ಖಚಿತತೆ ಇರುವುದಿಲ್ಲ. ಆಂತರಿಕ ಸತ್ಯದಿಂದ ಬಹು ದೂರ ಹೋಗುವಿರಿ. ಹಾಗೆ ಮಾಡುವುದರಿಂದ ನೀವು ಅದರಿಂದ ಕಣ್ಮರೆಯಾಗುವಿರಿ ಮತ್ತು ಕೆಲವೊಮ್ಮೆ ನಿಮ್ಮ ಆತ್ಮದೊಂದಿಗಿನ ಸಾಧ್ಯವಾದ ಎಲ್ಲ ಸಂಬಂಧಗಳನ್ನೂ ಕೂಡ ಕಳೆದುಕೊಳ್ಳುವಿರಿ.

ನಮ್ಮ ನಂಬಿಕೆಯನ್ನು ಉಳಿಸಿಕೊಳ್ಳಲು, ಆಂತರಿಕವಾಗಿ ಅದು ಬೆಳೆಯಲು ವೈಯಕ್ತಿಕ ಪ್ರಯತ್ನವು ನಿಶ್ಚಿತವಾಗಿ ಬೇಕಾಗುತ್ತದೆ. ತರುವಾಯ – ತೀರಾ ನಂತರದಲ್ಲಿ, ಒಂದು ದಿನ, ಹಿಂದೆ ನೋಡಿದಾಗ, ಸಂಭವಿಸಿದ ಘಟನೆಗಳೆಲ್ಲವೂ, ನಮಗೆ ಕೆಟ್ಟದಾಗಿ ತೋರಿದ ಘಟನೆಗಳೂ ಸಹ, ದೈವೀ ಮಾರ್ಗದ ಮೇಲೆ ನಮ್ಮನ್ನು ಮುಂದೆ ಸಾಗುವಂತೆ ಮಾಡಿರುವುದು ದೈವೀ ಅನುಗ್ರಹವಾಗಿತ್ತು ಎನ್ನುವುದನ್ನು ನಾವು ಕಾಣಬಹುದು; ಆಗ, ವೈಯಕ್ತಿಕ ಪ್ರಯತ್ನವೂ ಸಹ

ಅನುಗ್ರಹವಾಗಿತ್ತು ಎನ್ನುವುದರ ಅರಿವು ನಮಗಾಗುತ್ತದೆ. ಆದರೆ, ಆ ಹಂತವನ್ನು ತಲುಪುವ ಮೊದಲೇ, ನಾವು ಹೆಚ್ಚು ಪ್ರಗತಿ ಹೊಂದಿರಬೇಕು, ಹೆಚ್ಚು ಹೋರಾಡಬೇಕು, ಕೆಲವೊಮ್ಮೆ ಹೆಚ್ಚಿನದನ್ನೂ ಅನುಭವಿಸಲೂ ಸಹ.

ಜಡ ನಿಷ್ಕ್ರಿಯತೆಯಲ್ಲಿ ಕುಳಿತು, "ನಾನು ನಂಬಿಕೆಯನ್ನು ಹೊಂದಲು ಬಯಸಿದರೆ, ಅದನ್ನು ಹೊಂದುತ್ತೇನೆ, ದೈವವು ಅದನ್ನು ನನಗೆ ಅನುಗ್ರಹಿಸುತ್ತದೆ," ಇದು ಸೋಮಾರಿತನದ, ಸುಪ್ತಾವಸ್ಥೆಯ ಮತ್ತು ಬಹತೇಕ ಕೆಟ್ಟ ಬಯಕೆಯ ಮನೋಭಾವವಾಗಿದೆ.

ಆಂತರಿಕ ಜ್ವಾಲಯು ಬೆಳಗಲು, ನಾವು ಅದನ್ನು ಪೋಷಿಸಲೇಬೇಕು; ನಾವು ಆ ಜ್ವಾಲೆಯನ್ನು ಗಮನಿಸಬೇಕು, ನಾವು ಮುಕ್ತಿ ಹೊಂದಬೇಕೆಂದು ಬಯಸುವ ಎಲ್ಲಾ ದೋಷಗಳ ಇಂಧನವನ್ನು, ಪ್ರಗತಿಯನ್ನು ಕುಂಠಿತಗೊಳಿಸುವ ಎಲ್ಲವನ್ನೂ, ಆ ಪಥವನ್ನು ಕತ್ತಲಾಗಿಸುವ ಎಲ್ಲವನ್ನೂ ಅದರಲ್ಲಿ ಎಸೆಯಬೇಕು. ನಾವು ಆ ಜ್ವಾಲೆಗೆ ಆಹಾರವನ್ನು ನೀಡದಿದ್ದರೆ, ಅದು ನಮ್ಮ ಸುಪ್ತಾವಸ್ಥೆಯ ಮತ್ತು ಜಡತ್ವದ ಚಿತಾಭಸ್ಮದ ಕೆಳಗೆ ಚುರುಕಾಗಿರುತ್ತದೆ, ಮತ್ತು ನಂತರ, ನಾವು ಗುರಿಯನ್ನು ತಲುಪುವ ಮೊದಲೇ (ವರ್ಷಗಳಲ್ಲ) ಜನ್ಮಾಂತರಗಳು, ಶತಮಾನಗಳು ಕಳೆದುಹೋಗುತ್ತವೆ.

ಅತ್ಯಂತ ಅಮೂಲ್ಯವಾದ ಸಂಗತಿಯ ಹುಟ್ಟನ್ನು ಗಮನಿಸುವಂತೆ, ನಾವು ನಮ್ಮ ನಂಬಿಕೆಯನ್ನು ಗಮನಿಸಲೇಬೇಕು, ಮತ್ತು ಅದನ್ನು ಕುಂದಿಸಬಹುದಾದ ಎಲ್ಲದರಿಂದಲೂ ಅತ್ಯಂತ ಎಚ್ಚರಿಕೆಯಿಂದ ರಕ್ಷಿಸಬೇಕು.

ಆದಿಯ (ಆರಂಭದ) ಅಜ್ಞಾನ ಹಾಗೂ ಅಂಧಕಾರದಲ್ಲಿ, ನಂಬಿಕೆ ಎನ್ನುವುದು, ಹೋರಾಡಲು ಮತ್ತು ಜಯಿಸಲು ಬರುವಂಥ ದೈವೀ ಪ್ರಭಾವದ ನೇರ ಅಭಿವ್ಯಕ್ತಿಯಾಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 9/351–52 – ಶ್ರೀಮಾತೆ**

**ನಂಬಿಕೆಯನ್ನು ಪಡೆದುಕೊಳ್ಳುವ ಮಾರ್ಗ**

ನಂಬಿಕೆಯನ್ನು ಮತ್ತು ಬೇರೆಯದೆಲ್ಲವನ್ನು ಪಡೆಯುವ ಮಾರ್ಗವೆಂದರೆ ಅವುಗಳನ್ನು ಹೊಂದಬೇಕೆನ್ನುವ ಪಟ್ಟು ಮತ್ತು ಅವುಗಳನ್ನು ಹೊಂದುವವರೆಗೂ ನಾವು ಹತಾಶೆಯನ್ನು ನಿರಾಕರಿಸುವುದು ಅಥವಾ ಬಿಟ್ಟುಕೊಡಲು ನಿರಾಕರಿಸುವುದು – ಈ ಕಷ್ಟಕರವಾದ ಪ್ರಪಂಚವು ಆಲೋಚಿಸುವ ಮತ್ತು ಹಂಬಲಿಸುವ ಜೀವಿಗಳನ್ನು

ಹೊಂದಲು ಪ್ರಾರಂಭಿಸಿದಾಗಿನಿಂದ ಎಲ್ಲವನ್ನೂ ಪಡೆದುಕೊಳ್ಳುವಂಥ ವಿಧಾನವು ಇದಾಗಿದೆ. ನಾವು ಯಾವಾಗಲೂ ಬೆಳಕಿಗೆ (ಜ್ಞಾನಕ್ಕೆ) ಮುಕ್ತವಾಗಿರಬೇಕು ಮತ್ತು ಕತ್ತಲೆಯಿಂದ ದೂರ ಸರಿಯಬೇಕು. ಇದು, "ನಿಮಗೆ ಸಾಧ್ಯವಿಲ್ಲ, ನಿಮ್ಮಿಂದಾಗದು, ನೀವು ಅಸಮರ್ಥರಾಗಿದ್ದೀರಿ, ನೀವು ಕನಸಿನ ಕೈಗೊಂಬೆ" ಎಂದು ನಿರಂತರವಾಗಿ ಮೊರೆ ಇಡುವ ಧ್ವನಿಗಳನ್ನು ತಿರಸ್ಕರಿಸುವುದಾಗಿದೆ – ಏಕೆಂದರೆ ಈ ಧ್ವನಿಗಳು ಶತ್ರುವಿನ ಧ್ವನಿಗಳಾಗಿವೆ, ಅವುಗಳ ಕರ್ಕಶವಾದ ಗದ್ದಲದಿಂದ ಬರುವಂಥ ಫಲಿತಾಂಶದಿಂದ ಅವುಗಳು ದೂರ ಉಳಿಯುತ್ತವೆ ಮತ್ತು ನಂತರದಲ್ಲಿ ಅವುಗಳ ಸಿದ್ಧಾಂತಗಳ ಪ್ರಮಾಣವಾಗಿ ಪರಿಣಾಮದ ನಿಸ್ಸಾರತೆಯ ಕಡೆಗೆ ಬೊಟ್ಟು ಮಾಡುತ್ತವೆ. ಪರಿಶ್ರಮದ ತೊಂದರೆಯು ತಿಳಿದಿರುವ ವಿಷಯವಾಗಿದೆ, ಆದರೆ ಕಷ್ಟಕರವಾದದ್ದು ಅಸಾಧ್ಯವಲ್ಲ – ಕಷ್ಟಕರವಾದದ್ದನ್ನು ಯಾವಾಗಲೂ ಸಾಧಿಸಲ್ಪಟ್ಟಿದೆ ಮತ್ತು ತೊಂದರೆಗಳ ವಿಜಯವು ಭೂಮಿಯ ಇತಿಹಾಸದಲ್ಲಿ ಅಮೂಲ್ಯವಾದ ಎಲ್ಲವನ್ನೂ ಮಾಡುತ್ತದೆ. ಆಧ್ಯಾತ್ಮಿಕ ಪ್ರಯತ್ನದಲ್ಲಿಯೂ ಸಹ ಅದು ಹಾಗೇ ಇರುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/100**

## ನೀವು ವೃದ್ಧಿಪಡಿಸಿಕೊಳ್ಳಬೇಕಾದ ನಂಬಿಕೆ

ನೀವು ವೃದ್ಧಿಪಡಿಸಿಕೊಳ್ಳಬೇಕಾದ ನಂಬಿಕೆಯು ಇದಾಗಿದೆ, – ಕಾರಣ ಮತ್ತು ಸಾಮಾನ್ಯ ಜ್ಞಾನಕ್ಕೆ ಅನುಗುಣವಾದ ಇರುವ ನಂಬಿಕೆಯು ಇದಾಗಿದೆ – ದೈವೀ ಶಕ್ತಿಯು ಅಸ್ತಿತ್ವದಲ್ಲಿದ್ದರೆ ಮತ್ತು ಅದು ನಿಮ್ಮನ್ನು ದೈವೀ ಮಾರ್ಗಕ್ಕೆ ಕರೆದರೆ, ಆಗ ಅದರ ಹಿಂದೆ ದೈವೀ ಮಾರ್ಗದರ್ಶನವು ಸ್ಪಷ್ಟವಾಗಿ ಇರಲೇಬೇಕು. ಎಲ್ಲ ತೊಂದರೆಗಳ ಹೊರತಾಗಿಯೂ ಆ ಮಾರ್ಗದೆಡೆಗೆ ನೀವು ಬರುವಿರಿ. ವೈಫಲ್ಯವನ್ನು ಸೂಚಿಸುವಂಥ ಪ್ರತಿಕೂಲ ಧ್ವನಿಗಳಿಗೆ ಅಥವಾ ಅವುಗಳನ್ನು ಪ್ರತಿಧ್ವನಿಸುವ ಅಸಹನೆಯ ಪ್ರಾಣಿಕ ಆತುರದ ಧ್ವನಿಗಳಿಗೆ ಕಿವಿಗೊಡಬಾರದು, ಭಾರೀ ತೊಂದರೆಗಳು ಅಲ್ಲಿರುವುದರಿಂದ ಅದನ್ನು ನಂಬಬಾರದು, ಯಶಸ್ಸು ಅಲ್ಲಿ ಇರಲಿಕ್ಕಿಲ್ಲ ಅಥವಾ ದೇವರು ತನ್ನನ್ನು ತಾನು ಇನ್ನೂ ತೋರ್ಪಡಿಸಿಕೊಳ್ಳದೇ ಇರುವುದರಿಂದ ಅವನು ಎಂದಿಗೂ ತೋರ್ಪಡಿಸಿಕೊಳ್ಳುವುದಿಲ್ಲ. ಆದರೆ, ಅವನು ತನ್ನ ಮನಸ್ಸನ್ನು ಒಂದು ಶ್ರೇಷ್ಠ ಹಾಗೂ ಕಠಿಣ ಉದ್ದೇಶದ ಮೇಲೆ ಸ್ಥಿರಗೊಳಿಸಿದಾಗ ಪ್ರತಿಯೊಬ್ಬರೂ ತೆಗೆದುಕೊಳ್ಳುವಂಥ ಸ್ಥಾನವನ್ನು ತೆಗೆದುಕೊಂಡಾಗ, "ಯಶಸ್ಸನ್ನು ಸಾಧಿಸಲು ನಾನು ಮುಂದೆ ಸಾಗುತ್ತೇನೆ ಮತ್ತು ಎಂತಹದೇ ತೊಂದರೆಗಳಿರಲಿ ನಾನು

ಯಶಸ್ವಿಯಾಗುತ್ತೇನೆ." ದೇವರಲ್ಲಿ ನಂಬಿಕೆ ಉಳ್ಳವನು, "ದೇವರಿದ್ದಾನೆ, ಆತನ ಅಸ್ತಿತ್ವವಿರುವುದರಿಂದ, ನಾನು ಆತನನ್ನು ಅನುಸರಿಸುವಿಕೆಯು ವಿಫಲವಾಗುವುದಿಲ್ಲ. ಆತನನ್ನು ಕಂಡುಕೊಳ್ಳಲು ನಾನು ಎಲ್ಲದರ ಮುಖಾಂತರ ಹಾದು ಹೋಗುತ್ತೇನೆ," ಎಂದು ಹೇಳುತ್ತಾನೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/94 – ಶ್ರೀ ಅರವಿಂದರು**



ಎಲ್ಲ ತೊಂದರೆಗಳಿಗೆ ಪರಿಹಾರವಿದೆ, ಆದರೆ ಒಂದು ಮಾತ್ರ ... ಸಾಧನೆಯ ಅತ್ಯಂತ ಪರಿಪೂರ್ಣ ಬಗೆಯ ದೊಡ್ಡ ರಹಸ್ಯವಾದಂಥ ಪರಿಪೂರ್ಣ ನಿರ್ಭರತೆಯ ಮನೋಭಾವ.

"ನಿರ್ಭರ" ಎಂದರೆ ದೇವರ ಮೇಲೆ ಅವಲಂಬನೆ, ಯಾವುದೇ ಪರಸ್ಥಿತಿ ಅಥವಾ ತೊಂದರೆಗಳಿರಲಿ. ಎಲ್ಲವೂ ಸರಿಯಾಗಿದ್ದಾಗ, "ನಿರ್ಭರ"ತೆಯು ಅಷ್ಟೊಂದು ಗಣನೆಗೆ ಬರುವುದಿಲ್ಲ. ಅದು, ನಾವು ತೆಗೆದುಕೊಳ್ಳಬೇಕಾದ ಒಂದು ನಿಲುವು (ಸಮಚಿತ್ತತೆ) ಮತ್ತು ಅದರಲ್ಲಿ ನಾವು ಬೆಳೆಯಬಹುದು....

*ಶ್ರೀ ಅರವಿಂದರೊಡನೆ ನಿರೋದಬರಣ ಅವರ ಪತ್ರ ವ್ಯವಹಾರ*
*ಸಂಪುಟ ಎರಡು, (1984 ರ ಆವೃತ್ತಿ) ಪುಟಗಳು: 650–57*

## ಪರಮಾತಿಪರಮ ವಿಶ್ವಾಸ

ಎಲ್ಲದರಲ್ಲೂ ದೇವರನ್ನು ಕಾಣುವಂಥದ್ದು ಸರ್ವೋಚ್ಚ ನಂಬಿಕೆಯಾಗಿದೆ ಮತ್ತು ಅದರ ದೃಷ್ಟಿಗೆ ಪ್ರಕಟವಾಗುವ ಮತ್ತು ಪ್ರಕಟವಾಗದೇ ಇರುವ ಸಂಗತಿಗಳು ಒಂದೇ ದೈವ ಸ್ವರೂಪಗಳಾಗಿವೆ. ಪ್ರತಿಕ್ಷಣವೂ, ಪ್ರತಿಯೊಂದು ಕ್ರಿಯೆಯಲ್ಲಿ ಮತ್ತು ಪ್ರಕೃತಿಯ ಸಮಗ್ರತೆಯೊಂದಿಗೆ ದೇವರನ್ನು ಸಂಧಿಸುವುದು ಪರಿಪೂರ್ಣ ಒಂದಾಗುವಿಕೆಯಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 19/400**

....ಈ ಯೋಗದ ಅಭ್ಯಾಸವು, ಪ್ರಮುಖವಾದ ವಿಮುಕ್ತಗೊಳಿಸುವ ಜ್ಞಾನದ ಒಂದು ನಿರಂತರವಾದ ಆಂತರಿಕ ಸ್ಮರಣೆಯನ್ನು ಕೋರುತ್ತದೆ ಮತ್ತು ಕೃತಿಗಳಲ್ಲಿ ಅದನ್ನು ಒಂದು ನಿರಂತರವಾದ ಕ್ರಿಯಾಶೀಲ ಬಾಹ್ಯೀಕರಿಸುವಿಕೆಯು ಕೂಡ ಸ್ಮರಣೆಯನ್ನು ತೀವ್ರಗೊಳಿಸಲು ಬರುತ್ತದೆ. ಎಲ್ಲದರಲ್ಲೂ ಇರುವುದು ಚೈತನ್ಯವಾಗಿದೆ, ದೇವನೊಬ್ಬನು ಎಲ್ಲವೂ ಆಗಿದ್ದಾನೆ; ಎಲ್ಲರೂ ದೇವನಲ್ಲಿದ್ದಾರೆ, ಎಲ್ಲರೂ ದೈವೀ ಸ್ವರೂಪಗಳಾಗಿದ್ದಾರೆ ಮತ್ತು ವಿಶ್ವದಲ್ಲಿರುವುದು ಮತ್ತೇನೂ ಅಲ್ಲ, – ಅದು ಕಾರ್ಯಕರ್ತನ ಪ್ರಜ್ಞೆಯ ಸಂಪೂರ್ಣ ಸಾಧನವಾಗುವವರೆಗೆ ಈ ಯೋಚನೆ ಅಥವಾ ನಂಬಿಕೆಯು ಸಂಪೂರ್ಣ ಹಿನ್ನೆಲೆಯಾಗಿರುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 23–24/112**

ಆತನ ಮೇಲೆ ಕೇಂದ್ರೀಕರಿಸುವ ಸಂಕಲ್ಪವು ಅವನಿರುವಂಥ ಬೌದ್ಧಿಕ ರೂಪದಲ್ಲಿ ಮಾತ್ರ ಅರ್ಥಮಾಡಿಕೊಳ್ಳಬಾರದು, ಅಥವಾ ಆತನನ್ನು ಒಂದು ಅಮೂರ್ತವೆಂಬಂತೆ, ತಾರ್ಕಿಕ ಅವಶ್ಯಕತೆ ಎಂಬಂತೆ ಗ್ರಹಿಸಬಾರದು; ಅದು, ಎಲ್ಲರಲ್ಲೂ ಇರುವ ಒಬ್ಬ ನಿವಾಸಿಯನ್ನಾಗಿ ಇಲ್ಲಿ ಭೇಟಿಯಾಗಲು, ನಮ್ಮಲ್ಲಿ ಆತನನ್ನು ಅರಿತುಕೊಳ್ಳಲು, ಆತನ ಬಲಗಳನ್ನು ನೋಡಲು ಮತ್ತು ಅವುಗಳ ಚಲನೆಗಳ ಮೇಲೆ ಹಿಡಿತ ಸಾಧಿಸಲು ಸಾಧ್ಯವಾಗುವ ಒಂದು ಆಲೋಕಿಸುವ ಸಂಕಲ್ಪವಾಗಬೇಕು.

ಅವನೊಬ್ಬ ನಿಜಸ್ಥಿತಿಯಾಗಿದ್ದಾನೆ: ಅವನು, ಎಲ್ಲ ವಸ್ತುಗಳನ್ನು ನಿಯೋಜಿಸುವ ಮತ್ತು ಅವುಗಳನ್ನು ಮೀರುವ ಒಬ್ಬ ಮೂಲ ಹಾಗೂ ಅಪರಿಮಿತ

ಪರಮಾನಂದ ಪುರುಷನಾಗಿದ್ದಾನೆ: ಅವನು, ಎಲ್ಲ ಪ್ರಜ್ಞೆಗಳನ್ನು ಜೋಡಿಸುವ ಮತ್ತು ಅವುಗಳ ಎಲ್ಲ ಚಲನೆಗಳನ್ನು ಅರಹುವ ಅನಂತ ಪ್ರಜ್ಞೆಯಾಗಿದ್ದಾನೆ: ಎಲ್ಲ ಕ್ರಿಯೆ ಮತ್ತು ಅನುಭವವನ್ನು ಪೋಷಿಸುವ ಒಬ್ಬ ಅಸಮಾನ್ಯ ಪುರುಷನಾಗಿದ್ದಾನೆ: ಅವನ ಇಚ್ಛೆಯು, ವಸ್ತುಗಳ ವಿಕಾಸವನ್ನು, ಇನ್ನೂ ಅರಿತುಕೊಳ್ಳದ ಆದರೆ ತಪ್ಪಿಸಲಾಗದ ಗುರಿಯ ಹಾಗೂ ಪೂರ್ಣತೆಯ ಕಡೆಗೆ ದಾರಿಯನ್ನು ತೋರಿಸುತ್ತದೆ.

ಅವನಿಗೆ ಹೃದಯವು ತನ್ನಷ್ಟಕ್ಕೆ ತಾನು ಸಮರ್ಪಿಸಿಕೊಳ್ಳುತ್ತದೆ, ಶ್ರೇಷ್ಠ ಪ್ರಿಯತಮನಂತೆ ಅವನನ್ನು ಸಮೀಪಿಸುತ್ತದೆ, ಪ್ರೇಮದ ಅಪರಿಮಿತ ಮಾಧುರ್ಯದಲ್ಲಿರುವಂತೆ ಮತ್ತು ಅತ್ಯಾನಂದದ ಸಾಗರದಲ್ಲಿರುವಂತೆ ಅವನಲ್ಲಿ ಸ್ಪಂದಿಸುತ್ತದೆ ಮತ್ತು ಚಲಿಸುತ್ತದೆ. ಏಕೆಂದರೆ, ಅವನು ಅತ್ಮನನ್ನು ಅದರ ಎಲ್ಲ ಹಿನ್ನೆಲೆಗಳಲ್ಲಿ ಸಮರ್ಥಿಸುವಂಥ ಗುಪ್ತ ಆನಂದನಾಗಿದ್ದಾನೆ ಮತ್ತು ಅದರ ಎಲ್ಲ ಅಗ್ನಿ ಪರೀಕ್ಷೆಗಳಲ್ಲಿ ಮತ್ತು ಹೆಣಗಾಟಗಳಲ್ಲಿ, ಎಲ್ಲ ದುಃಖ ಮತ್ತು ಯಾತನೆ ನಿಲ್ಲುವವರೆಗೆ ಅಪಮಾರ್ಗಿಯಾದ ಅಹಂಭಾವವನ್ನೂ ಸಹ ನಿರ್ವಹಿಸುತ್ತಾನೆ. ಅವನದು, ಅವನ ಸಂತೋಷದ ಏಕತೆಯ ಕಡೆಗೆ ತಮ್ಮದೇ ಆದ ಮಾರ್ಗದಿಂದ ಎಲ್ಲವನ್ನೂ ಸೆಳೆಯುತ್ತಿರುವ ಅನಂತ ದೈವೀ ಪ್ರೇಮಿಯ ಪ್ರೀತಿ ಮತ್ತು ಆನಂದವಾಗಿದೆ.

ಅವನ ಮೇಲೆ ಇಚ್ಛೆಯು ಅದನ್ನು ಮಾರ್ಗದರ್ಶಿಸುವ ಮತ್ತು ಪೂರೈಸುವ ಅದೃಶ್ಯ ಶಕ್ತಿಯಾಗಿ ಮತ್ತು ಅದರ ಶಕ್ತಿಯ ಮೂಲವಾಗಿ ಬದಲಾಯಿಸಲಾಗದಂತೆ ಸರಿಪಡಿಸಬಹುದು.

ಒಬ್ಬ ಅನ್ವೇಷಕನು ತನ್ನ ಅನ್ವೇಷಣೆಯನ್ನು ಮತ್ತು ಪ್ರಯತ್ನವನ್ನು ಪ್ರಾರಂಭಿಸುವ ನಂಬಿಕೆಯು ಇದಾಗಿದೆ; ಇಲ್ಲಿಯ ಅವನ ಎಲ್ಲ ಪ್ರಯತ್ನಗಳಿಗಾಗಿ, ಆದರೆ ಅತಿ ಹೆಚ್ಚು ಕಾಣದ ಕಡೆಗಿನ ಅವನ ಪ್ರಯತ್ನದಲ್ಲಿ, ಬೌದ್ಧಿಕ ಮನುಷ್ಯನು ಕಡ್ಡಾಯವಾಗಿ ನಂಬಿಕೆಯಿಂದ ಮುಂದುವರೆಯಬೇಕು. ಸಾಕ್ಷಾತ್ಕಾರವಾದಾಗ, ದೈವಿಕವಾಗಿ ಪೂರೈಸಿದ ಮತ್ತು ಪೂರ್ಣಗೊಂಡ ನಂಬಿಕೆಯನ್ನು ಜ್ಞಾನದ ಶಾಶ್ವತ ಜ್ವಾಲೆಯಾಗಿ ಪರಿವರ್ತಿಸಲಾಗುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 23/83 – ಶ್ರೀ ಅರವಿಂದರು**

ಪ್ರತಿಯೊಂದು ಹಂತದಲ್ಲೂ, ನೀನು ದೇವರಿಗೆ ಸಂಬಂಧಿಸಿದವನೆಂದು ಭಾವಿಸು; ನೀನು ಏನನ್ನೇ ಯೋಚಿಸು ಅಥವಾ ಏನನ್ನೇ ಮಾಡು, ನಿನ್ನ ಮುಖಾಂತರ ಯಾವಾಗಲೂ ಅಲ್ಲಿ ಕಾರ್ಯ ನಿರ್ವಹಿಸುವುದು ದೈವೀ ಪ್ರಜ್ಞೆಯಾಗಿದೆ ಎನ್ನುವ ನಿರಂತರವಾದ ಅನುಭವವನ್ನು ನೀನು ಹೊಂದಿರಬೇಕು. ನಿನ್ನ ಸ್ವಂತದ್ದೆಂದು ಹೇಳಿಕೊಳ್ಳಬಹುದಾದ ಯಾವುದನ್ನೂ ನೀನು ಹೊಂದಿಲ್ಲ; ಎಲ್ಲವೂ ದೇವರಿಂದ ಬರುತ್ತಿರುವಂತೆ ಅನುಭವವಾಗುತ್ತದೆ, ಮತ್ತು ನೀನು ಅದನ್ನು ಮರಳಿ ಅದರ ಮೂಲಕ್ಕೆ ಅರ್ಪಿಸಬೇಕು.

ದೈವೀ ಸನ್ನಿಧಿಯಲ್ಲಿ ನಿರಂತರವಾಗಿ ವಾಸಿಸು; ನಿನ್ನನ್ನು ಪ್ರಚೋದಿಸುವಂಥದ್ದು ಮತ್ತು ನೀನು ಮಾಡುವ ಎಲ್ಲವನ್ನೂ ಮಾಡುವಂಥದ್ದು ಈ ಉಪಸ್ಥಿತಿಯಾಗಿದೆ ಎನ್ನುವ ಭಾವನೆಯಲ್ಲಿ ವಾಸಿಸು. ನಿನ್ನ ಕ್ರಿಯೆಗಳನ್ನು ಅದಕ್ಕರ್ಪಿಸು, ಪ್ರತಿಯೊಂದು ಬೌದ್ಧಿಕ ಕ್ರಿಯೆ ಮಾತ್ರವಲ್ಲದೆ, ಪ್ರತಿಯೊಂದು ಯೋಚನೆ ಹಾಗೂ ಭಾವನೆಯನ್ನಲ್ಲದೆ ಅತ್ಯಂತ ಸಾಮಾನ್ಯವಾದ ಬಾಹ್ಯ ಕ್ರಿಯೆಗಳನ್ನೂ ಸಹ (ಉದಾ: ತಿನ್ನುವುದು) ಅರ್ಪಿಸು; ನೀನು ಏನನ್ನಾದರೂ ತಿಂದಾಗ, ನಿನ್ನ ಮುಖಾಂತರ ತಿನ್ನುತ್ತಿರುವವನು ದೇವರು ಎಂದು ನೀನು ಭಾವಿಸಬೇಕು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/24–25 – ಶ್ರೀಮಾತೆ**

## ಇದು ನಿಮಗೆ ತಿಳಿದಿದೆಯೇ?

(ನಂಬಿಕೆ ಎನ್ನುವುದು ರಹಸ್ಯವಾಗಿ ಹಾಗೂ ಮುಕ್ತವಾಗಿ ಎಲ್ಲ ಪರಿಶ್ರಮದ ಮತ್ತು ಕ್ರಿಯೆಯ ಆಧಾರವಾಗಿದೆ)

ಜಗತ್ತು ವಿವೇಕದ ಬೆಳಕಿನಿಂದ ಚಲಿಸುತ್ತದೆ ಎಂದು ಭಾವಿಸುತ್ತದೆ ಆದರೆ ಅದು ನೀವಾಗಿಯೂ ಅದರ ನಂಬಿಕೆಗಳಿಂದ ಮತ್ತು ಸಹಜಗುಣಗಳಿಂದ ಚಲಿಸಲ್ಪಡುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 12/458**

ವಿವೇಕವು ತನ್ನಷ್ಟಕ್ಕೆ ತಾನು ನಂಬಿಕೆಗೆ ಹೊಂದಿಕೊಳ್ಳುತ್ತದೆ ಅಥವಾ ಸಹಜ ಗುಣಗಳ ಪ್ರತಿಪಾದನೆಯನ್ನು ಚರ್ಚಿಸುತ್ತದೆ (ಒಂದು ನಿರ್ಣಯಕ್ಕೆ ಬರಲು),

ಆದರೆ ಅದು ಪ್ರೇರಣೆಯನ್ನು ಸುಪ್ತ ಪ್ರಜ್ಞೆಯಿಂದ ಪಡೆದುಕೊಳ್ಳುತ್ತದೆ; ಆದ್ದರಿಂದ ಅವರು ತರ್ಕಬದ್ಧವಾಗಿ ವರ್ತಿಸುತ್ತಾರೆಂದು ಮನುಷ್ಯರು ಭಾವಿಸುತ್ತಾರೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 12/458**

(ಮನುಷ್ಯನಲ್ಲಿನ ಯಾವುದೋ ಒಂದು ಅವನ ನಂಬಿಕೆಗೆ ಅಂಟಿಕೊಳ್ಳುತ್ತದೆ:) ಅದು ಹಾಗಾಗದಿದ್ದರೆ, ಮನುಷ್ಯನು ಬದಲಾಗುತ್ತಿರುವ ಮನಸ್ಸಿನ ಅಥವಾ ಸನ್ನಿವೇಶಗಳ ವಿನೋದದ ಆಟಿಕೆಯಾಗುತ್ತಾನೆ.

**SABCL (ಶ್ರೀ ಅರವಿಂದೋ ಜನ್ಮ ಶತಾಬ್ದಿ ಸಂಪುಟ) 23/616**

ಈ ಆಳವಾದ (ಅಂತರ್ಗತ) ನಂಬಿಕೆಯು, ಅದರ ಯಾವುದೋ ಸ್ವರೂಪದಲ್ಲಿ, ಅಸ್ತಿತ್ವದ ಕ್ರಿಯೆಗೆ ಅನಿವಾರ್ಯವಾಗಿದೆ ಮತ್ತು ಅದಿಲ್ಲದೆ ಮನುಷ್ಯನು ಜೀವನದಲ್ಲಿ ಒಂದು ಹೆಜ್ಜೆಯೂ ಕೂಡ ಮುಂದೆ ಸಾಗಲಾರ, ಇನ್ನೂ ಸಾಕ್ಷಾತ್ಕಾರಗೊಳ್ಳದ ಪರಿಪೂರ್ಣತೆಯ ಕಡೆಗಿನ ಅವನ ಯಾವುದೇ ನಡಿಗೆಯು ಬಹಳೇ ಕಡಿಮೆ. ಅದು ಎಷ್ಟು ಪ್ರಮುಖ ಮತ್ತು ಅನುವಾರ್ಯವಾದ ಸಂಗತಿ ಎಂದರೆ, ಗೀತೆಯು* ಅದರ

---

* ... ಗೀತೆಯಲ್ಲಿನ ಒಂದು ಅಪೂರ್ವವಾದ ಸಂದೇಶವು ನಮಗೆ ಹೀಗೆ ಹೇಳುತ್ತದೆ: ಈ ಪುರುಷ, ಮನುಷ್ಯನಲ್ಲಿನ ಈ ಆತ್ಮವು, ಅದಿದ್ದಂತೆ ಶ್ರದ್ಧೆಯಿಂದ, ನಂಬಿಕೆಯಿಂದ, ಹಾಗಿರುವ ಬಯಕೆಯಿಂದ, ತನ್ನಲ್ಲಿನ ಒಂದು ವಿಶ್ವಾಸ ಹಾಗೂ ಅಸ್ತಿತ್ವದಿಂದ ರೂಪಿತವಾಗಿದೆ, ಮತ್ತು ಆ ಬಯಕೆಯು ಏನೇ ಅಗಿರಲಿ, ನಂಬಿಕೆ ಅಥವಾ ಅವನಲ್ಲಿ ವಿಶ್ವಾಸದ ಸ್ಥಾಪನೆ, ಅವನು ಅದಾಗಿದ್ದಾನೆ ಮತ್ತು ಅದು ಅವನಾಗಿದ್ದಾನೆ. ಶ್ರದ್ಧಾಮಯೋಽಯಂ ಪುರುಷೋ ಯೋ ಯಚ್ಛ್ರದ್ಧಃ ಸ ಏವ ಸಃ (ಭಗವದ್ಗೀತೆ: 17.3) ಅಂದರೆ, ಈ ಪುರುಷನು ಶ್ರದ್ಧಾಮಯನಾಗಿದ್ದಾನೆ ಮತ್ತು ಯಾವ ಪುರುಷನು ಎಂತಹ ಶ್ರದ್ಧೆಯುಳ್ಳವನೋ ಅವನು ಕೂಡ ಅದೇ ಸ್ವಭಾವದವನಾಗಿದ್ದಾನೆ. ನಾವು ಈ ಭಾವಗರ್ಭಿತ ಸಂದೇಶವನ್ನು ಸ್ವಲ್ಪ ಸೂಕ್ಷ್ಮವಾಗಿ ಗಮನಿಸಿದರೆ, ಈ ಒಂದು ಸಾಲು ಅದರ ಕೆಲವು ಬಲವಾದ ಪದಗಳಲ್ಲಿ ವಾಸ್ತವಿಕವಾದದ ಆಧುನಿಕ ಸುವಾರ್ತೆಯ ಸಂಪೂರ್ಣ ಸಿದ್ಧಾಂತವನ್ನು ಸೂಚಿಸುತ್ತದೆ ಎನ್ನುವುದನ್ನು ನಾವು ಕಂಡುಕೊಳ್ಳುತ್ತೇವೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 19/482**

ಬಗ್ಗೆ ಹೇಳುವುದೇನೆಂದರೆ: ಒಬ್ಬ ಮನುಷ್ಯನ ಶ್ರದ್ಧೇ ಏನೇ ಇರಲಿ, ಆತ ಅದಾಗಿದ್ದಾನೆ, ನಮ್ಮ ಶ್ರದ್ಧೆ ಏನೇ ಇರಲಿ, ನಾವು ಹಾಗಿರುತ್ತೇವೆ (ಯೋ ಯಚ್ಛ್ರದ್ಧಃ ಸ ಏವ ಸಃ – ಭಗವದ್ಗೀತೆ –17.3). ತನ್ನಲ್ಲಿರುವುದನ್ನು ಸಾಧ್ಯವಾದಷ್ಟು ನೋಡಲು ಮತ್ತು ಅದಕ್ಕಾಗಿ ಶ್ರಮಿಸಲು ಏನಾದರೂ ಶ್ರದ್ಧೆಯನ್ನು ಹೊಂದಿರಲಿ, ಅದನ್ನು ಅವನು ಸೃಷ್ಟಿಸುತ್ತಾನೆ ಮತ್ತು ಹಾಗಾಗುತ್ತಾನೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 24/771 – ಶ್ರೀ ಅರವಿಂದರು**

## ವಿಶ್ವಾಸವಿಲ್ಲದಿದ್ದರೆ..

ಶ್ರದ್ಧೆಯು ಅವಶ್ಯವಾಗಿ ಬೇಕು: ಒಂದು ವೇಳೆ ಶ್ರದ್ಧೆಯು ಇರದಿದ್ದರೆ, ಬಾಹ್ಯ ವಾಸ್ತವಾಂಶಗಳನ್ನು ಒಪ್ಪಿಕೊಳ್ಳುವಂಥ ಮತ್ತು ಅಸೂಯೆಯು ಬಹಿರಂಗಪಡಿಸುವ ಜ್ಞಾನವನ್ನು ಪ್ರಶ್ನಿಸುವಂಥ ನಿರ್ಣಾಯಕ ಬುದ್ಧಿಶಕ್ತಿಗೆ ಹೊಣೆಗಾರಿಕೆಯನ್ನು ನೀಡಿದರೆ, ಅದು ಕಣ್ಣಿಗೆ ಕಾಣುವ ಸ್ವಭಾವದ ಮತಭೇದಗಳೊಂದಿಗೆ ಹಾಗೂ ಕೊರತೆಗಳೊಂದಿಗೆ ಹೊಂದಿಕೆಯಾಗುವುದಿಲ್ಲ ಮತ್ತು ಅದನ್ನು ಮೀರುತ್ತಿರುವಂತೆ ತೋರುತ್ತದೆ ಮತ್ತು ನಮ್ಮ ಈಗಿನ ಇರುವಿಕೆಯ ಮೊದಲ ವಾಸ್ತವಿಕ ಅಂಶಗಳ, ಅದರ ವ್ಯಥೆಯ, ಅದರ ನೋವಿನ, ಕೆಟ್ಟತನದ, ದೋಷದ, ದೈವಿಕವಲ್ಲದ ತಪ್ಪು ಹಾಗೂ ಮುಗ್ಗರಿಸುವಿಕೆಯ ಆಚೆಗೆ ನಮ್ಮನ್ನು ಕರೆದೊಯ್ಯುವ ಬಗ್ಗೆ ಹೇಳುತ್ತದೆ, ಆಗ ಆ ಶ್ರೇಷ್ಠವಾದ ಜ್ಞಾನವನ್ನು ತಡೆದುಕೊಳ್ಳುವ ಸಾಧ್ಯತೆಯು ಇರುವುದಿಲ್ಲ. ಉನ್ನತವಾದ ಸತ್ಯ ಹಾಗೂ ವಿಧಿಯಲ್ಲಿ ಶ್ರದ್ಧೆಯನ್ನು ಪಡೆದುಕೊಳ್ಳುವಲ್ಲಿ ವಿಫಲವಾಗುವ ಆತ್ಮನು, ಸಾವು, ತಪ್ಪು ಮತ್ತು ಕೆಟ್ಟ ಸಂಗತಿಗಳಿಗೆ ಒಳಪಟ್ಟ ಸಾಮಾನ್ಯವಾದ ಮನುಷ್ಯ ಜೀವನದ ಮಾರ್ಗಕ್ಕೆ ತಿರುಗಿ ಬರಲೇಬೇಕು: ಅದು ಅಲ್ಲಗಳೆಯುವ ದೈವೀ ಸ್ವರೂಪದಲ್ಲಿ ಅದು ಬೆಳೆಯಲಾರದು. ಏಕೆಂದರೆ ಇದು ಬದುಕಿರಬೇಕಾದ ಸತ್ಯವಾಗಿದೆ, – ಮತ್ತು ಆತ್ಮದ ವಿಕಸಿಸುವ ಬೆಳಕಿನಲ್ಲಿ ವಾಸಿಸುವ, ಮನಸ್ಸಿನ ಅಂಧಕಾರದಲ್ಲಿ ವಾದಿಸಲಾಗದ ಸತ್ಯವು ಇದಾಗಿದೆ. ನಾವು ಅದರಲ್ಲಿ ಬೆಳೆಯಬೇಕು, ನಾವು ಅದಾಗಬೇಕು, – ಅದನ್ನು ಪರಿಶೀಲಿಸುವ ಏಕೈಕ ಮಾರ್ಗವು ಅದಾಗಿದೆ. ನಮ್ಮ ಕೆಳ–ಸ್ತರವನ್ನು ಮೀರುವ ಮೂಲಕ ಮಾತ್ರ ನಾವು ನಿಜವಾದ ದೈವೀ ಹಂತಕ್ಕೆ ಏರಬಹುದು ಮತ್ತು ನಮ್ಮ ಆಧ್ಯಾತ್ಮಿಕ ಅಸ್ತಿತ್ವದ ಸತ್ಯವನ್ನು ಜೀವಿಸಬಹುದು. ನಾವು ಅದನ್ನು ವಿರೋಧಿಸಬಹುದಾದ ಎಲ್ಲಾ ಸ್ಪಷ್ಟ ಸತ್ಯಗಳು

ನಿಮ್ಮ ಸ್ವಭಾವದ ತೋರಿಕೆಗಳಾಗಿವೆ. ದುಷ್ಟತನದಿಂದ ಹಾಗೂ ದೋಷಗಳಿಂದ ನಿಮ್ಮ ಸ್ವಭಾವದ ಬಿಡುಗಡೆಯು ಉನ್ನತ ಜ್ಞಾನವನ್ನು ಸ್ವೀಕರಿಸುವ ಮೂಲಕ ಮಾತ್ರ ಬರಬಹುದು. ಅದರಲ್ಲಿ ಈ ಎಲ್ಲ ಮೇಲ್ನೋಟದ ದುಷ್ಟತನವು ಅವಾಸ್ತವಿಕವೆಂದು ಮನವರಿಕೆಯಾಗುತ್ತದೆ, ಅದು ನಮ್ಮ ಅಜ್ಞಾನದ ಸೃಷ್ಟಿ ಎನ್ನುವುದನ್ನು ತೋರಿಸುತ್ತದೆ. ಆದರೆ ದೈವೀ ಸ್ವಾತಂತ್ರ್ಯದಲ್ಲಿ ಹೀಗೆ ಬೆಳೆಯಲು, ನಮ್ಮ ಪ್ರಸ್ತುತ ಸೀಮಿತ ಸ್ವಭಾವದ ಒಳಗೆ ಅಡಗಿರುವ ದೈವೀ ಸ್ವರೂಪದ ರಹಸ್ಯವನ್ನು ನಾವು ಸ್ವೀಕರಿಸಬೇಕು ಮತ್ತು ನಂಬಬೇಕು.... ಸಂಪೂರ್ಣ ನಂಬಿಕೆಯಿಂದ ಮತ್ತು ಅಹಂಭಾವ ಇಲ್ಲದೆ ನಾವು ನಂಬುವ ಮತ್ತು ಅವನ ಇಚ್ಛೆಯಿಂದ ಪ್ರೇರಿತರಾಗಿ, ನಮ್ಮೊಳಗಿನ ದೇವರು ಖಂಡಿತವಾಗಿಯೂ ಅದನ್ನು ನೆರವೇರಿಸುತ್ತಾನೆ. ಆದರೆ, ಈಗ ಸ್ಪಷ್ಟವಾಗಿ ಅಹಂಕಾರಿ ಮನಸ್ಸು ಹಾಗೂ ಜೀವನವಾಗಿರುವ ನಾವು, ಮೊದಲು ನಮ್ಮೊಳಗಿರುವ ಆಂತರಿಕ ರಹಸ್ಯವಾದ ದೈವೀಕತೆಯ ಕೈಗಳಲ್ಲಿ ಸ್ವಭಾವ ಪರಿವರ್ತನೆಗಾಗಿ ತನ್ನನ್ನು ತಾನು ಒಪ್ಪಿಸಿಕೊಳ್ಳಬೇಕು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 19/309–10 – ಶ್ರೀ ಅರವಿಂದರು**

## ದೈವೀ ಕಾರ್ಯ

....ಈ ಮಾರ್ಗದಲ್ಲಿ ಅಗತ್ಯವಾದ ನಂಬಿಕೆ, ಶರಣಾಗತಿ, ಧೈರ್ಯ ಇವೆಲ್ಲ ಅಹಂಕಾರದಿಂದ ಆವೃತವಾದ ಆತ್ಮಕ್ಕೆ ಸುಲಭವಲ್ಲ. ದೈವೀ ಕಾರ್ಯವು ಅಹಂಕಾರಿ ಮನಸ್ಸು ಬಯಸುವ ಅಥವಾ ಒಪ್ಪುವ ಕಾರ್ಯವಲ್ಲ; ಏಕೆಂದರೆ ಅದು ಸತ್ಯಕ್ಕೆ ತಲುಪಲು ದೋಷವನ್ನು ಬಳಸುತ್ತದೆ, ಆನಂದಕ್ಕೆ ತಲುಪಲು ಯಾತನೆಯನ್ನು ಬಳಸುತ್ತದೆ, ಪರಿಪೂರ್ಣತೆಗೆ ತಲುಪಲು ಅಪರಿಪೂರ್ಣತೆಯನ್ನು ಬಳಸುತ್ತದೆ. ಅದು ಎಲ್ಲಿಗೆ ಕರೆದೊಯ್ಯಲ್ಪಡುತ್ತಿದೆ ಎನ್ನುವುದು ಅಹಂಕಾರಕ್ಕೆ ಕಾಣುವುದಿಲ್ಲ; ಅದು ನಿರ್ದೇಶಿಸುವವನ ವಿರುದ್ಧ ದಂಗೆ ಏಳುತ್ತದೆ, ಆತ್ಮವಿಶ್ವಾಸವನ್ನು ಕಳೆದುಕೊಳ್ಳುತ್ತದೆ, ಧೈರ್ಯವನ್ನು ಕಳೆದುಕೊಳ್ಳುತ್ತದೆ. ಈ ವೈಫಲ್ಯಗಳು ಗಣನೆಗೆ ಬರುವುದಿಲ್ಲ; ಯಾಕೆಂದರೆ ನಮ್ಮೊಳಗಿನ ದೈವೀ ಮಾರ್ಗದರ್ಶನವು ನಮ್ಮ ಪ್ರತಿಭಟನೆಯಿಂದ ಅಹಿತಕ್ಕೆ ಒಳಗಾಗುವುದಿಲ್ಲ, ನಮ್ಮ ನಂಬಿಕೆಯ ಕೊರತೆಯಿಂದ ನಿರುತ್ಸಾಹಗೊಳ್ಳುವುದಿಲ್ಲ ಅಥವಾ ನಮ್ಮ ದುರ್ಬಲತೆಯಿಂದ ದೂರವಾಗುವುದಿಲ್ಲ; ಅವನಲ್ಲಿ ತಾಯಿಯ ಸಂಪೂರ್ಣ ಪ್ರೀತಿ ಮತ್ತು ಶಿಕ್ಷಕನ ಸಂಪೂರ್ಣ ತಾಳ್ಮೆ ಇದೆ.

ಆದರೆ ಮಾರ್ಗದರ್ಶನದಿಂದ ನಮ್ಮ ಒಪ್ಪಿಗೆಯನ್ನು ಹಿಂತೆಗೆದುಕೊಳ್ಳುವ ಮೂಲಕ, ನಾವು ಅದರ ಪ್ರಯೋಜನಗಳ ಬಗ್ಗೆ ಅರಿವನ್ನು ಕಳೆದುಕೊಳ್ಳುತ್ತೇವೆ, ಎಲ್ಲವೂ ವಾಸ್ತವಿಕ ಅಲ್ಲದಿದ್ದರೂ – ಯಾವುದೇ ಸಂದರ್ಭದಲ್ಲಿ, ಯಾವುದೇ ಸಂಭವನೀಯತೆಯಲ್ಲಿ. ನಾವು ನಮ್ಮ ಉನ್ನತ ಚೇತನವನ್ನು (ತನ್ನ ಸ್ವಯಂ ಪ್ರಕಟನೆಗಾಗಿ ಸಿದ್ಧಗೊಳ್ಳುತ್ತಿರುವ) ನಿಮ್ನ ಚೇತನದಿಂದ ಬೇರ್ಪಡಿಸಲು ವಿಫಲವಾಗುವುದರಿಂದ ನಾವು ನಮ್ಮ ಸಮ್ಮತಿಯನ್ನು ಹಿಂದೆತೆಗೆದುಕೊಳ್ಳುತ್ತೇವೆ. ಜಗತ್ತಿನಲ್ಲಿರುವಂತೆ, ಹಾಗೆಯೇ ನಮ್ಮಲ್ಲಿಯೂ, ದೇವರ ಕ್ರಿಯೆಗಳ ಕಾರಣ ನಾವು ಅವನನ್ನು ನೋಡಲು ಸಾಧ್ಯವಿಲ್ಲ, ವಿಶೇಷವಾಗಿ ಅವನು ನಮ್ಮಲ್ಲಿ ನಮ್ಮ ಸ್ವಭಾವದ ಮೂಲಕ ಕೆಲಸ ಮಾಡುತ್ತಾನೆಯೆ ಹೊರತು ಸತತವಾದ ಅನಿಯಂತ್ರಿತ ಪವಾಡಗಳ ಅನುಕ್ರಮದಿಂದಲ್ಲ. ಮನುಷ್ಯನು ನಂಬಿಕೆಯನ್ನು ಹೊಂದಲು ಪವಾಡಗಳು ಬೇಕೆಂದು ಆಗ್ರಹಿಸುತ್ತಾನೆ; ನೋಡಲು ಸಾಧ್ಯವಾಗುವಂತೆ ಅವನು ಬೆರಗುಗೊಳ್ಳಬೇಕೆಂದು ಬಯಸುತ್ತಾನೆ. ನಾವು ದೈವೀ ಮಾರ್ಗದರ್ಶನದ ವಿರುದ್ಧ ತಿರುಗಿ ಬಂಡಾಯ ಮಾಡಿ, ನಮ್ಮ ಉದ್ವೇಗಗಳಿಗೆ ಮತ್ತು ಬಯಕೆಗಳಿಗೆ ಹೆಚ್ಚು ತೃಪ್ತಿದಾಯಕವಾಗಿರುವ ಇನ್ನೊಂದು ವಿಕೃತಗೊಳಿಸುವ ಶಕ್ತಿಯನ್ನು ಕರೆದು, ಅದಕ್ಕೆ ನಮ್ಮನ್ನು ಮಾರ್ಗದರ್ಶನ ಮಾಡಲು ಹೇಳಿ, ಅದಕ್ಕೆ ದೈವೀ ಹೆಸರನ್ನು ಕೊಟ್ಟರೆ, ಈ ಅಸಹನೆ, ಈ ಅಜ್ಞಾನವು ಒಂದು ದೊಡ್ಡ ಅಪಾಯವಾಗಿ ಮತ್ತು ಅನಾಹುತವಾಗಿ ಬದಲಾಗಬಹುದು.

*

ಎಲ್ಲ ವಸ್ತುಗಳ ಪ್ರಭುವಿನ ಮತ್ತು ಎಲ್ಲ ಜೀವಿಗಳ ಸ್ನೇಹಿತನ ಕರೆಗಳಿಗೆ ಒಪ್ಪಿಸಿಕೊಳ್ಳಲು ನಾವು ನಂಬಿಕೆ ಹಾಗೂ ಧೈರ್ಯವನ್ನು ಹೊಂದಿರದಿದ್ದರೆ ಮತ್ತು ನಮ್ಮ ಮಾನಸಿಕ ಮಿತಿಗಳನ್ನು ಹಾಗೂ ಪರಿಮಾಣಗಳನ್ನು ಸಂಪೂರ್ಣವಾಗಿ ನಮ್ಮ ಹಿಂದೆ ಬಿಟ್ಟುಬಿಡದಿದ್ದರೆ, ನಿತ್ಯ ಹಾಗೂ ಅನಂತದ ಆಧ್ಯಾತ್ಮಿಕ ಸತ್ಯದಲ್ಲಿ ಸಂಪೂರ್ಣವಾಗಿ ಪ್ರವೇಶಿಸಲು ಸಾಧ್ಯವಾಗುವುದಿಲ್ಲ. ಒಂದು ಕ್ಷಣದಲ್ಲಿ ನಾವು ಯಾವುದೇ ಹಿಂಜರಿಕೆ, ಸಂಕೋಚ, ಭಯ ಅಥವಾ ಸಂದೇಹ ಇಲ್ಲದೆ ಮುಕ್ತ, ಅನಂತ, ಸಂಪೂರ್ಣವಾದ ಸಾಗರದಲ್ಲಿ ಮುಳುಗಬೇಕು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 23/64, 208 – ಶ್ರೀ ಅರವಿಂದರು**

# ಶ್ರೀ ಅರವಿಂದರ
# 'ಗೀತಾ ಪ್ರಬಂಧಗಳು'

**– ಅನು: ಜಾನ್ವಿ**

## 36

## ಎರಡನೆಯ ಸರಣಿ:
## ಅಧ್ಯಾಯ – 3
## ಪರಮೇಶ್ವರ

ಏಳನೇಯ ಅಧ್ಯಾಯದಲ್ಲಿ ಈಗಾಗಲೇ ಏನು ಹೇಳಲಾಗಿದೆಯೋ ಅದು ನಮಗೆ ಹೊಸದಾದ ಪೂರ್ಣತರ ನಿಸ್ಸಂದಿಗ್ಧವಾದ, ಸರಿಯಾದ ನಿಲುವು ತಂದು ಕೊಡುತ್ತದೆ. ಒಟ್ಟಾರೆ ಸಂಕ್ಷಿಪ್ತವಾಗಿ ಅದು ಹೇಳುವುದೇನೆಂದರೆ, ನಾವು ಆಂತರಿಕವಾಗಿ ಹಿರಿದಾದ ಪ್ರಜ್ಞೆಯೆಡೆಗೆ, ಪರಮೋಚ್ಚ ಅಸ್ತಿತ್ವದೆಡೆಗೆ ಚಲಿಸಬೇಕಾಗಿದೆ. ಆದರೆ ಹಾಗೆ ಚಲಿಸುವಾಗ ನಮ್ಮ ಈಗಿನ ವಿಶ್ವಾತ್ಮಕ ಪ್ರಕೃತಿಯನ್ನು ತ್ಯಜಿಸುವಂತಿಲ್ಲ, ಬದಲಾಗಿ ಸದ್ಯಕ್ಕೆ ನಾವೇನಿದ್ದೇವೆಯೋ ಅಲ್ಲಿ ಹಿರಿದಾದ ಆಧ್ಯಾತ್ಮಿಕ ಅರ್ಥವನ್ನು, ಸಾರ್ಥಕತೆಯನ್ನು ತಂದು ತುಂಬಿಸಬೇಕಾಗಿದೆ. ನಮ್ಮ ಸದ್ಯದ ಮರಣಾಧೀನ ಅಪರಿಪೂರ್ಣತೆಯು ರೂಪಾಂತರ ಹೊಂದಿ ದೈವೀ ಪರಿಪೂರ್ಣತೆಯಾಗಿ ಬದಲಾಗಬೇಕಾಗಿದೆ. ಈ ಪರಿಕಲ್ಪನೆಗೆ, ಇದರ ಸಾಧ್ಯತೆಗೆ ಮೂಲ ಆಧಾರವೇನೆಂದರೆ ಮಾನವನಲ್ಲಿರುವ ವೈಯಕ್ತಿಕ ಆತ್ಮವು ತನ್ನ ಮೂಲ ಶಾಶ್ವತ ಸತ್ವದಲ್ಲಿ, ಸತ್ಯದಲ್ಲಿ, ಮೂಲ ಶಕ್ತಿಯಲ್ಲಿ ಭಗವಂತನ ಕಿರಣವೇ ಆಗಿದೆ, ಅವನ ಅಂಶವೇ ಆಗಿದೆ. ಇಲ್ಲಿ, ಈ ಜಗದಲ್ಲಿನ ಪ್ರಕಟನೆಯು ಆ ಪರಮೇಶ್ವರನ ಪ್ರಚ್ಛನ್ನ ರೂಪವಾಗಿದೆ. ಅವನ ಸತ್ತೆಯ ಅಂಶವೇ ಆಗಿದೆ, ಅವನ ಪ್ರಜ್ಞೆಯ ಪ್ರಜ್ಞಾರೂಪವೇ ಆಗಿದೆ, ಅವನ ಪ್ರಕೃತಿ, ಅವನ ಧರ್ಮವೇ ಇದಾಗಿದೆ. ಆದರೆ ವೈಯಕ್ತಿಕ ಮಾನಸಿಕ ಮತ್ತು ಭೌತಿಕ ಅಸ್ತಿತ್ವದಲ್ಲಿ ಸ್ವ–ವಿಸ್ಮೃತಿಯಾಗಿದೆ, ಇದೇ ಏಕೈಕ ಅಡ್ಡಿಯಾಗಿದೆ, ತನ್ನ ಮೂಲ ಸತ್ಯವನ್ನು, ಸತ್ವವನ್ನು, ಪ್ರಕೃತಿಯನ್ನು ಸಂಪೂರ್ಣ ಮರೆತಿದೆ, ಇದೇ ಮುಖ್ಯ ಅಡಚಣೆಯಾಗಿದೆ. ಎರಡನೇಯ ಪರಿಕಲ್ಪನೆ ಏನೆಂದರೆ, ಭಗವಂತನು ವಿಶ್ವದಲ್ಲಿ ಪ್ರಕಟವಾಗುವಾಗ ಎರಡು ಸ್ವರೂಪ ತಾಳಿದ್ದಾನೆ, ಎರಡಾಗಿ ತೋರುತ್ತಾನೆ. ತನ್ನ ಮೂಲ ಪ್ರಕೃತಿಯಲ್ಲಿ ಅವನು ತನ್ನ ನಿಜವಾದ ಆಧ್ಯಾತ್ಮಿಕ ಸತ್ತೆಯ ಜೊತೆ ಒಂದಾಗಿದ್ದಾನೆ ಮತ್ತು ಎರಡನೆಯ ಸ್ವರೂಪದಲ್ಲಿ ಅಹಂ ಪ್ರವೃತ್ತಿಯ ಗೊಂದಲ ಮತ್ತು ಅವಿದ್ಯೆಗೆ ಅಧೀನನಾಗಿ ವರ್ತಿಸುತ್ತಾನೆ. ಈ ಎರಡನೆಯ, ಅಂದರೆ ಅಹಂ ಪ್ರವೃತ್ತಿಗೆ

ದಾಸನಾಗಿರುವ ಅಂಶವು ಇದನ್ನೆಲ್ಲ ತ್ಯಜಿಸಿ, ಆಂತರಿಕವಾಗಿ ಆಧ್ಯಾತ್ಮಿಕತೆಯನ್ನು ಪುನಃ ಸಂಪಾದಿಸಿ, ಅದನ್ನು ಸಕ್ರಿಯ ಹಾಗೂ ಕ್ರಿಯಾಶೀಲ ಗೊಳಿಸಬೇಕಾಗಿದೆ. ನಾವು ಆಂತರಿಕ ಸಾರ್ಥಕತೆಯ ಮೂಲಕ, ಹೊಸದಾದ ಸ್ಥಿತ್ಯಂತರ ಹೊಂದುವುದರ ಮೂಲಕ ಹಾಗೂ ಹೊಸ ಶಕ್ತಿಯಲ್ಲಿ ಜನ್ಮ ತಾಳುವುದರ ಮೂಲಕ ನಮ್ಮ ಆತ್ಮ ಸ್ಥಿತಿಗೆ ಮರಳಬಲ್ಲೆವು, ಆಗ ಮತ್ತೆ ಭಗವಂತನ ಅಂಶವಾಗಿ ನಿಲ್ಲಬಲ್ಲೆವು. ಯಾವ ಭಗವಂತನಿಂದ ದೂರವಾಗಿ ಈ ಮರಣಾಧೀನ ಜಗದಲ್ಲಿ ಇಳಿದು ಬಂದಿರುವೆವೋ ಪುನಃ ಅಲ್ಲಿಗೇ ಹೋಗಿ ಮತ್ತೆ ಅವನೇ ಆಗಿ ನಿಲ್ಲಬಲ್ಲೆವು.

ಈ ಪರಿಕಲ್ಪನೆಯು ಅಥವಾ ವಿಚಾರಧಾರೆಯು ಭಾರತೀಯ ಸಾಮಾನ್ಯ ಪರಿಕಲ್ಪನೆಗಿಂತ (Social Psychology) ಸ್ವಲ್ಪ ಭಿನ್ನವಾಗಿದೆ, ಇದರಲ್ಲಿ ಅಷ್ಟು ತೀವ್ರ ನಕಾರಾತ್ಮಕ ಭಾವ ಇಲ್ಲ, ಹೆಚ್ಚಿನ ವಿಧಾಯಕ ಅಥವಾ ಸಕಾರಾತ್ಮಕ ಭಾವ ಇದೆ. ಸಾಮಾನ್ಯ ಮನೋಭಾವದಲ್ಲಿರುವ ವೈರಾಗ್ಯ ಅಥವಾ ತನ್ನನ್ನೇ ಅಲ್ಲಗಳೆಯುವ ಮಟ್ಟಕ್ಕೆ ಹೋಗುವ ಬದಲು ಒಂದು ಪರಿಹಾರವನ್ನು ಕಂಡು ಹಿಡಿಯುವ ಪ್ರಯತ್ನ ಇಲ್ಲಿದೆ, ಪ್ರಕೃತಿಯಲ್ಲಿ ಆತ್ಮ ಸಾರ್ಥಕತೆಯನ್ನು, ಕೃತಾರ್ಥತೆಯನ್ನು ಕಾಣುವ ಪ್ರಯತ್ನ ಇಲ್ಲಿ ಎದ್ದು ಕಾಣುತ್ತದೆ. ಅಷ್ಟೇ ಅಲ್ಲ, ಗೀತೋತ್ತರ ಕಾಲದಲ್ಲಿ ಬೆಳೆದು ಬಂದ ತೀವ್ರ ಭಕ್ತಿ ಪಂಥದ ಪೂರ್ವ ಸುಳಿವು ಕೂಡ ಇಲ್ಲಿ ಸಿಕ್ಕುತ್ತದೆ. ನಾವು ಸದ್ಯಕ್ಕೆ ನಮ್ಮ ಅಹಂ ವ್ಯಕ್ತಿತ್ವದಲ್ಲಿ ಜೀವಿಸಿರುವುದಂತೂ ಸರ್ವವಿದಿತ; ಅದರಾಚೆಗಿರುವ ನಮ್ಮ ಸಹಜ ಸ್ಥಿತಿಯು ಅಹಂ ವ್ಯಕ್ತಿತ್ವದಿಂದ ಮುಚ್ಚಲ್ಪಟ್ಟಿದೆ. ಆ ಸಹಜ ಸ್ಥಿತಿಯ ಪ್ರಪ್ರಥಮ ಅನುಭವವು ನಮ್ಮನ್ನು ಅತ್ಯಂತ ವಿಶಾಲವಾದ, ನಿಷ್ಪಕ್ಷಪಾತ ಆತ್ಮ ಸ್ಥಿತಿಯವರೆಗೆ ಒಯ್ಯುವುದು; ಆ ಸ್ಥಿತಿಯಲ್ಲಿ ನಮ್ಮೆಲ್ಲ ಅಹಂ ಪ್ರೇರಿತ ವೃತ್ತಿಗಳು ಬಿದ್ದು ಹೋಗುವುವು. ಅಲ್ಲಿರುವ ಅತ್ಯಂತ ನೀರವ ಮೌನ, ಶಾಂತ, ಸಮತ್ವದ ಶುದ್ಧ ಸ್ಥಿತಿಯ ಬೋಧವಾಗುವುದು. ಅಲ್ಲಿ ನಮ್ಮ ಯಾವ ಸಂಕುಚಿತ, ಕ್ಷುಲ್ಲಕ ಆಶೆಗಳೂ, ಉದ್ವೇಗಗಳೂ ಇರುವುದಿಲ್ಲ. ಅದು ಅತ್ಯಂತ ಶಾಂತ ಸ್ಥಿತಿಯಾಗಿರುವುದು. ಆದರೆ ಅದರ ಎರಡನೆಯ ಅನುಭವವು ನಾವು ಅನಂತತೆಯಲ್ಲಿ ಜೀವಿಸುತ್ತಿರುವುದರ ಉದ್ದೇಶದ ಮತ್ತು ಅಗತ್ಯದ ಅರಿವು ಮೂಡಿಸಿಕೊಡುವುದು. ಅಮೇಯನಾದ, ಅಪ್ರಮೇಯನಾದ ಈಶ್ವರ ಸತ್ತೆಯಿಂದ ನಾವು ಬಂದಿದ್ದೇವೆ, ನಾವೆಲ್ಲ ಆ ಈಶ್ವರನಿಗೇ ಸಂಬಂಧಪಟ್ಟವರು, ಅವನ ಮೇಲೆಯೇ ಅವಲಂಬಿತರಾಗಿರುವವರು, ಎಲ್ಲರೂ ಅದೇ ಪ್ರಕೃತಿ, ಅದೇ ಜಗತ್ತು, ಅದೇ ಆತ್ಮ ಚೈತನ್ಯಕ್ಕೇನೇ ಸಂಬಂಧಿಸಿದವರಾಗಿದ್ದೇವೆ. ನಾವು ಆ ಪರಮೇಶ್ವರನ ಜೊತೆಗೆ ಒಂದಾದಾಗ ನಮ್ಮತನ, ನಮ್ಮ ಅಸ್ತಿತ್ವ

ಕಳೆದುಕೊಳ್ಳುವುದಿಲ್ಲ, ಬದಲಾಗಿ ಅವನಲ್ಲಿ ನಮ್ಮ ನಿಜವಾದ ಅಸ್ತಿತ್ವವನ್ನು ಕಂಡುಕೊಳ್ಳುತ್ತೇವೆ. ಅವನ ಅನಂತತೆಯಲ್ಲಿ, ಪರಿಶುದ್ಧ ಸಮತೆಯಲ್ಲಿ ಸ್ಥಿತರಾಗಿರುತ್ತೇವೆ ಮತ್ತು ಇದು ಏಕಕಾಲಕ್ಕೆ ಮೂರು ಚಲನೆಗಳಿಂದ ಕೂಡಿರುವುದು – ಒಂದು, ನಮ್ಮ ಆಧ್ಯಾತ್ಮಿಕ ಪ್ರಕೃತಿ ಹಾಗೂ ಪರಮೇಶ್ವನಲ್ಲಿ ಭಕ್ತಿಯಿರಿಸಿ ನಾವು ಮಾಡುವ ಕರ್ಮಗಳ ಮೂಲಕ ಪಡೆಯಬಹುದಾದ ಸಮಗ್ರ ಆತ್ಮ–ಸಾಕ್ಷಾತ್ಕಾರ. ಎರಡನೇಯದು, ಎಲ್ಲವೂ ಅವನೇ ಆಗಿರುವ, ಎಲ್ಲೆಲ್ಲೂ ಅವನೇ ವ್ಯಾಪಿಸಿರುವ ಭಗವಂತನ ಸಮಗ್ರ ಜ್ಞಾನ ಸಂಪಾದಿಸುವುದರ ಮೂಲಕ ಅವನೇ ಆಗಿಬಿಡುವುದು ಮತ್ತು ಮೂರನೆಯದು, ಸಮಗ್ರ ಅಸ್ತಿತ್ವದ ಹಾಗೂ ಅದರ ಚಲನೆಯ ಪ್ರಭುವಾಗಿರುವ ನಿಯಾಮಕನಾಗಿರುವ ಪರಮೇಶ್ವರನಿಗೆ ನಮ್ಮನ್ನು ನಾವು ಸಂಪೂರ್ಣವಾಗಿ ಅರ್ಪಿಸಿಕೊಳ್ಳುವುದು. ನಮ್ಮ ಕರ್ಮಗಳ ಒಡೆಯನಾದ ನಮ್ಮ ಹೃದಯಗಳಲ್ಲಿ ವಾಸಿಸುವ, ಸಮಸ್ತ ಜಾಗೃತ ಅಸ್ತಿತ್ವದ ಆಧಾರವಾಗಿರುವ ಪರಮೇಶ್ವರನೆಡೆಗೆ ಆಕರ್ಷಿತರಾಗಿ, ಅವನಿಗೆ ಉನ್ಮುಖರಾಗಿ ಅವನಿಗೆ ನಮ್ಮನ್ನು ನಾವು ಸಂಪೂರ್ಣವಾಗಿ ಒಪ್ಪಿಸಿಕೊಳ್ಳುವುದು ಇದೇ ಸಮಗ್ರ ಸಮರ್ಪಣೆ. ಈ ರೀತಿಯ ಸಂಪೂರ್ಣ ಸಮರ್ಪಣೆಯಿಂದ ಅವನ ಸಮಸ್ತ ಜ್ಞಾನವೆಲ್ಲ ನಮ್ಮದಾಗುತ್ತದೆ. ನಮ್ಮ ಕರ್ಮಗಳು ಅವನ ಶಕ್ತಿಯ ಪ್ರಕಟನೆಗಳಾಗುತ್ತವೆ. ನಮ್ಮ ಆತ್ಮಾರ್ಪಣೆಯ ಪ್ರೇಮವು ಅವನ ಗಭೀರತಮ ಹೃದಯ ರಹಸ್ಯವನ್ನು ನಮಗೆ ತೆರೆದು ತೋರಿಸುತ್ತದೆ. ಭಗವಂತನೆಡೆಗಿನ ಪ್ರೇಮವು ಯಜ್ಞದ ತ್ರಿಸೂತ್ರವನ್ನು ಪೂರ್ಣಗೊಳಿಸುತ್ತದೆ. ಪರಮ ರಹಸ್ಯದ ತ್ರಿವಿಧ ಬೀಗದ ಕೈಯನ್ನು ನಮಗೆ ನೀಡುತ್ತದೆ. 'ಉತ್ತಮಂ ರಹಸ್ಯಮ್'.

ನಮ್ಮ ಆತ್ಮ ಸಮರ್ಪಣೆಯಲ್ಲಿ ಸಂಪೂರ್ಣ ಜ್ಞಾನ ನಮಗಿರಬೇಕು. ಇದು ಪ್ರಪ್ರಥಮ ನಿಯಮ. ಆದ್ದರಿಂದ ನಾವು ಈ ಪುರುಷನನ್ನು ಅವನ ಸಮಸ್ತ ಶಕ್ತಿಗಳನ್ನು, ತತ್ತ್ವಗಳನ್ನು ದೈವೀ ಅಸ್ತಿತ್ವದ ಅರ್ಥವನ್ನು ತಿಳಿದಿರಬೇಕು, ಎಲ್ಲದರ ಜೊತೆಗಿನ ಸಾಮರಸ್ಯದ ಬಗೆಗೂ ಅರಿವಿರಬೇಕು. ದೈವೀ ಅಸ್ತಿತ್ವ, ಶಾಶ್ವತವಾದ ಸಾರಭೂತ ತತ್ತ್ವ ಮತ್ತು ಅದನ್ನು ವ್ಯವಹಾರದಲ್ಲಿ ಅಳವಡಿಸಿಕೊಳ್ಳುವ ಬಗ್ಗೆ ಎಲ್ಲವನ್ನು ಅರಿತಿರಬೇಕು. ಪುರಾತನ ಶಾಸ್ತ್ರದ ಪ್ರಕಾರ ಈ ಜ್ಞಾನದ ಮೌಲ್ಯವೇನೆಂದರೆ, ತತ್ತ್ವಜ್ಞಾನದ ಬೆಲೆ ಏನೆಂದರೆ ನಮ್ಮ ಮರ್ತ್ಯದ ನಿಮ್ನ ಸ್ಥಿತಿಯಲ್ಲಿ ಆ ಎಲ್ಲ ಶಕ್ತಿಯನ್ನುಪಯೋಗಿಸಿಕೊಂಡು ದಿವ್ಯ ಜೀವನದ ಅಮರತ್ವವನ್ನು ಪಡೆಯುವುದೇ ಆಗಿದೆ. ಅಂತೆಯೇ ಗೀತೆ ಮುಂದುವರಿದು ಮುಕ್ತಿಯೂ ಕೂಡ ತನ್ನ ಚರಮ

ಅವಸ್ಥೆಯಲ್ಲಿ ಆತ್ಮ ಸಾಕ್ಷಾತ್ಕಾರದ ಸಾಧನವೆಂಬುದನ್ನು ಮತ್ತು ಅಂತಿಮ ಫಲವಾಗಿದೆ ಎಂಬುದನ್ನು ತೋರಿಸಿಕೊಡುತ್ತದೆ. "ಪುರುಷೋತ್ತಮನ ಜ್ಞಾನವೆಂದರೆ ಬ್ರಹ್ಮನ ಪೂರ್ಣ ಜ್ಞಾನ". ಅಂತರಾತ್ಮನೇ ತಮ್ಮ ಪ್ರದೀಪ್ತ ಜ್ಯೋತಿ, ತಮ್ಮ ಉದ್ಧಾರಕನೂ ಆತನೇ. ಯಾರು ನಂಬಿ, ಸಾಧನ ಮಾಡುವುರೋ, "ನನ್ನನ್ನೇ ಆಶ್ರಯಿಸಿ" ಮುಪ್ಪು, ಮರಣ, ದುಃಖ, ಕ್ಲೇಶಗಳಿಂದ ಪಾರಾಗಲು ನನ್ನನ್ನು ಆಶ್ರಯಿಸುವುರೋ ಅವರು ಆ ಬ್ರಹ್ಮನನ್ನು ಪೂರ್ಣವಾಗಿ ಆಧ್ಯಾತ್ಮಿಕ ಪ್ರಕೃತಿಯ ಏಕಾತ್ಮಕತೆಯನ್ನು ಮನಗಂಡು ನನ್ನನ್ನು (ಕೃಷ್ಣನನ್ನು) ಆರಾಧಿಸುವುರೋ, ಅವರು ಅಸ್ತಿತ್ವದ ಭೌತಿಕ ಮತ್ತು ದಿವ್ಯ ಪ್ರಕೃತಿಯನ್ನು ಅರಿತು, ಈಶ್ವರನ ಸತ್ಯ ಜ್ಞಾನವನ್ನು ಪಡೆಯುತ್ತಾರೆ. ಅಂಥವರು ತಮ್ಮ ದೇಹಾವಸಾನದ ಕೊನೆಯ ಕ್ಷಣದಲ್ಲಿ ಕೂಡ ನನ್ನನ್ನು ಮರೆಯದೇ ಸ್ಮರಿಸುತ್ತಾರೆ. ಅವರ ದೇಹಾವಸಾನದ ನಂತರ ಅವರ ಅಖಂಡ ಚೇತನವು ನನ್ನೊಡನೆ ಒಂದಾಗುವುದು. ಅವರು ನನ್ನನ್ನೇ ಹೊಂದುತ್ತಾರೆ. ಮರ್ತ್ಯ ಜೀವನದಿಂದ ಮುಕ್ತರಾಗಿ ಪರಬ್ರಹ್ಮ ಪದವಿಯನ್ನು ಪಡೆಯುತ್ತಾರೆ. ಈ ಸ್ಥಿತಿಯು ನಿರ್ವ್ಯೆಯಕ್ತಿಕ ಅಕ್ಷರ ಬ್ರಹ್ಮನಲ್ಲಿ ತಮ್ಮ ಪ್ರತ್ಯೇಕ ಅಸ್ತಿತ್ವವನ್ನು ವಿಲಯನಗೊಳಿಸುವಷ್ಟೇ ಪರಿಣಾಮಕಾರಿಯಾಗಿರುತ್ತದೆ (7/29–30).

ಗೀತೆಯು ಏಳನೆಯ ಅಧ್ಯಾಯವನ್ನು ಈ ರೀತಿ ಮುಕ್ತಾಯಗೊಳಿಸುತ್ತದೆ. ಇಲ್ಲಿ ನಮಗೆ ಕೆಲವೊಂದು ಸುಳಿವು ಸಿಕ್ಕುತ್ತವೆ. ಈ ವಿಶ್ವದಲ್ಲಿ ಪರಮಾತ್ಮನು ಪ್ರಕಟನಾಗಿರುವ ಸತ್ಯವನ್ನು ಸಾಬೀತು ಪಡಿಸುವಲ್ಲಿ ಇವು ಫಲಕಾರಿಯಾಗಿವೆ. ಪರಮಾತ್ಮನ ಪ್ರಕಟನೆಯ ಮೂಲಭೂತ ಹಾಗೂ ಪರಿಣಾಮಕಾರಿ ಸಾಕ್ಷ್ಯಗಳು ಅಲ್ಲಿವೆ, ಆತ್ಮವು (ಪ್ರತ್ಯೇಕ ವೃಥಕ್) ಪುನಃ ಸಮಗ್ರ ಆತ್ಮ ಜ್ಞಾನದ ಕಡೆಗೆ ತಿರುಗುವುದರ ಸಂಪೂರ್ಣ ವಿವರ ಅಲ್ಲಿದೆ. ಮೊದಲನೆಯದು "ತದ್ ಬ್ರಹ್ಮ". ಎರಡನೆಯದು "ಆಧ್ಯಾತ್ಮ". ಪ್ರಕೃತಿಯಲ್ಲಿ ಆತ್ಮನ ಇರುವಿಕೆಯ ತತ್ತ್ವ. ಆನಂತರ "ಅಧಿಭೂತ ಮತ್ತು ಅಧಿದೈವ". ಇದು ಸತ್ತೆಯ ವ್ಯಕ್ತಿನಿಷ್ಠ ಮತ್ತು ವಸ್ತುನಿಷ್ಠ ಸಂಗತಿ. ಕೊನೆಯದಾಗಿ "ಅಧಿಯಜ್ಞ". ಇದು ವಿಶ್ವಾತ್ಮಕ ಕಾರ್ಯದ ರಹಸ್ಯ. ಕೃಷ್ಣನು ಹೇಳುವಂತೆ: ವಿದ್ವಜ್ಜನರೆಲ್ಲರೂ ಹೇಳುವಂತೆ ನಾನು, ಪುರುಷೋತ್ತಮನು, ಇವೆಲ್ಲವುಗಳನ್ನು ಮೀರಿ ಆಚೆಗೆ ಇದ್ದೇನೆ. ಆದರೆ ನನ್ನನ್ನು ತಿಳಿಯಬೇಕಾದರೆ ಇವೆಲ್ಲವುಗಳ ಮೂಲಕವೇ ಸಾಧ್ಯ, ಈ ಎಲ್ಲ ಸಾಪೇಕ್ಷ ಸಂಬಂಧಗಳ ವಸ್ತುಗಳ ಪ್ರಪಂಚದಿಂದಲೇ ನನ್ನನ್ನು ಅರಿಯಲು ಸಾಧ್ಯವಿದೆ. ಮಾನವನ ಬುದ್ಧಿಗೆ, ಅವನ ಪ್ರಜ್ಞೆಗೆ ಇದೊಂದೇ ಪರಿಪೂರ್ಣ ದಾರಿ. ಮಾನವನ ಪ್ರಜ್ಞೆಯು ಮರಳಿ

ಪುರುಷೋತ್ತಮನಾದ ನನ್ನೆಡೆಗೆ ಮರಳಿ ಬರಲು ಬಯಸುತ್ತದೆ. ಅದು ಸ್ವಾಭಾವಿಕ, ಅದಕ್ಕಾಗಿ ಇದೇ ಏಕೈಕ ಮಾರ್ಗ (7/20). ಆದರೆ ಈ ಯಾವ ಪದಗಳೂ, ಶಬ್ದಗಳೂ ಬೇಗನೇ ಅರ್ಥವಾಗುವುದಿಲ್ಲ. ಅವುಗಳು ಅನೇಕ ಅರ್ಥ ನೀಡುವ ಸಾಧ್ಯತೆ ಇರುವುದರಿಂದ ಅನೇಕ ರೀತಿಯ ಸರಿಯಾದ, ತಪ್ಪಾದ ಅರ್ಥಾಂತರಗಳು ಜನ ಮಾನಸದಲ್ಲಿದೆ. ಅವೆಲ್ಲವನ್ನೂ ಒಂದೆಡೆ ಸಂಗ್ರಹಿಸಿ, ಸರಿಪಡಿಸುವ ಕಾರ್ಯವಾಗಬೇಕಾಗಿದೆ. ಅಂತೆಯೇ ಅರ್ಜುನನು ಸ್ಪಷ್ಟತೆಯನ್ನು ಬಯಸಿ ಕೃಷ್ಣನನ್ನು ಬಗೆ ಬಗೆಯಾಗಿ ಪ್ರಶ್ನಿಸುತ್ತಾನೆ. ಆದರೆ ಗೀತೆಯು ಎಲ್ಲಿಯೂ ಕೇವಲ ತಾತ್ವಿಕ ಚಿಂತನೆಯ ಮೇಲೆ ಬಹುಕಾಲ ವ್ಯಾಖ್ಯಾನ ಮಾಡುತ್ತ ನಿಲ್ಲುವುದಿಲ್ಲ. ಕೃಷ್ಣನು ಸಂಕ್ಷಿಪ್ತವಾಗಿ ಉತ್ತರಿಸುತ್ತಾನೆ, ನಾವು (ಅಥವಾ ನಮ್ಮ ಅಂತರಾತ್ಮ) ಆ ಮಾತುಗಳನ್ನು ಹಿಡಿದುಕೊಂಡು ಅನುಭವದವರೆಗೂ ಹೋಗಲು ಸಾಧ್ಯವಿದೆ, ಕ್ಲುಪ್ತವಾಗಿ ಹೇಳಿದರೂ ಕೃಷ್ಣನು ಹೇಳುವ ಮಾತುಗಳು ಸ್ಪಷ್ಟತೆ ಹಾಗೂ ಖಚಿತತೆಯಿಂದ ಕೂಡಿವೆ. ಬ್ರಹ್ಮ ಎಂಬ ಪದವನ್ನು ಉಪನಿಷತ್ತುಗಳಲ್ಲಿ ಅನೇಕ ಬಾರಿ ಉಪಯೋಗಿಸಲಾಗಿದೆ. ಬ್ರಹ್ಮವು ಸ್ವಯಂಭೂ, ಅದರು ನಶ್ವರ ದೃಶ್ಯ ಪ್ರಪಂಚದ ಹಾಗಲ್ಲ. ಅದು ಅನಂತ, ಶಾಶ್ವತ: ಅವಿಕಾರಿಯಾದ ಸ್ವಯಂ ನಿರಾಲಂಬ ಅಸ್ತಿತ್ವವೇ ಪರಮಾತ್ಮನ ಅತ್ಯುನ್ನತ ಅಭಿವ್ಯಕ್ತಿ. ಆ ಅಭಿವ್ಯಕ್ತಿಯ ಮೇಲೆಯೇ ಸಕಲ ಸೃಷ್ಟಿ ನಿಂತಿದೆ. ಅದು ಅವಿಕಾರಿಯೂ ಹೌದು, ಶಾಶ್ವತವೂ ಹೌದು, ಏನೆಲ್ಲ ಚಲಿಸುವುದೋ, ವಿಕಾಸ ಹೊಂದುವುದೋ ಅದೆಲ್ಲವೂ ಈ ಪರಮೋಚ್ಚ ನಿರಾಲಂಬ ಶಾಶ್ವತ ಬ್ರಹ್ಮನನ್ನೇ ಆಧರಿಸಿದೆ ಎಂದು ಗೀತೆ ಹೇಳುತ್ತದೆ. “ಅಕ್ಷರಂ ಪರಮಂ” ಎಂದು ತೋರುತ್ತದೆ. ಆಧ್ಯಾತ್ಮ ಎಂದರೆ ಸ್ವಭಾವ, ಆತ್ಮದ ಅಸ್ತಿತ್ವದ ನಿಯಮ ಅಥವಾ ಪ್ರಕೃತಿಯಲ್ಲಿ ಅದು ಇರುವ ಸ್ಥಿತಿ, ಅದು ಜೀವಾತ್ಮನ ಆತ್ಮ ಧರ್ಮ. ಗೀತೆಯ ಪ್ರಕಾರ ಕರ್ಮವೆಂದರೆ ಸೃಜನಶೀಲ ಶಕ್ತಿಯ ಸ್ಪಂದನ ಅಥವಾ ಮಿಡಿತ, “ವಿಸರ್ಗ” ಎಂದರೆ ಸ್ವಯಂ ವಿಕಾಸದ ಕ್ರಿಯೆಯಲ್ಲಿ ತನ್ನಿಂದ ಅದು ಹೊರ ಹೊಮ್ಮಿಸುವ (ಸೃಷ್ಟಿ ಎಂದು ಅರ್ಥ). ಇದು ಬ್ರಹ್ಮದ ಸ್ವಭಾವ, ಸ್ವಧರ್ಮ, ಕಾರ್ಯ, ಪರಿಣಾಮ, ಇದರ ಮೂಲಕವೇ ಪ್ರಕೃತಿಯಲ್ಲಿನ ವಿಶ್ವ ಸಂಭೂತಿಯು (cosmic becoming) ಸಂಪನ್ನವಾಗುವುದು “ಅಧಿಭೂತ” ಅಂದರೆ ಈ ವಿಕಾರ ಹೊಂದುವ ಸಂಭೂತಿಯ ಪರಿಣಾಮ ಎಂದು ಅರ್ಥ. “ಕ್ಷರೋಭಾವ” “ಅಧಿದೈವ” ಅಂದರೆ ಪುರುಷ ಪ್ರಕೃತಿಸ್ಥ ಆತ್ಮ, ತನ್ನ ಪ್ರಜ್ಞೆಗೆ ವಿಷಯವಾಗಿರುವ ಎಲ್ಲವನ್ನೂ ಅನುಭವಿಸುವ ಆನಂದಿಸುವ ವ್ಯಕ್ತಿಗತ ಪುರುಷ ಎಂದು ಅರ್ಥ. ಈ ಪ್ರಪಂಚದಲ್ಲಿ ಏನೆಲ್ಲ ವಿಕಾರ ಹೊಂದುವ ಬದಲಾವಣೆ ಹೊಂದುವ ಸಂಭೂತಿ ಇದೆಯೋ becoming

ಪರಮಾತ್ಮನ ಸತ್ತೆಯಿಂದಲೇ ಮೂಡಿ ಬಂದಿದೆ, ಇದು ಕರ್ಮ ನಿಮಿತ್ತ ಅಥವಾ ಸರ್ಗದ ಕರ್ಮ ಅಥವಾ ಕ್ರಿಯೆಯಿಂದ ಮೂಡಿ ಬರುವುದು. "ಅಧಿಯಜ್ಞ" ಅಂದರೆ ಕರ್ಮಗಳ ಪ್ರಭು, ಯಜ್ಞದ ಯಜಮಾನ. ಇದನ್ನು ವಿವರಿಸುತ್ತ ಕೃಷ್ಣನು ಹೇಳುತ್ತಾನೆ, "ಪುರುಷೋತ್ತಮನಾದ ನಾನು ಈ ಸಮಸ್ತ ಜೀವರಾಶಿಗಳಲ್ಲಿ ವಾಸವಾಗಿದ್ದೇನೆ. ವಿಶ್ವದಲ್ಲಿ ಏನಿದೆಯೋ ಅದೆಲ್ಲವೂ ಈ ಸೂತ್ರದಲ್ಲಿ ಅಡಕವಾಗಿದೆ" (8/3,4).

ಏಳನೆಯ ಅಧ್ಯಾಯದ ಕೊನೆಯ ಶ್ಲೋಕದಲ್ಲಿ ಕ್ಲುಪ್ತವಾಗಿ ಹೇಳಿದ ವಿಚಾರವನ್ನು, ಸಂಕ್ಷಿಪ್ತವಾಗಿ ಹೇಳಿರುವುದನ್ನು ಅಂದರೆ ಜ್ಞಾನದಿಂದ ಲಭಿಸುವ ಮೋಕ್ಷವನ್ನು ಕುರಿತು ವಿವರಿಸಿದ ತಕ್ಷಣ ವಿಸ್ತಾರವಾಗಿ ತಿಳಿ ಹೇಳುವ ದೃಷ್ಟಿಯಿಂದ ಎಂಟನೆಯ ಅಧ್ಯಾಯವನ್ನು ಅದೇ ಪರಿಕಲ್ಪನೆಯೊಂದಿಗೆ ಆರಂಭ ಮಾಡಲಾಗುತ್ತದೆ. ಇಲ್ಲಿಂದ ಮುಂದೆ ಆಂತರಿಕ ಸಾಕ್ಷಾತ್ಕಾರ ಮತ್ತು ಕರ್ಮಯೋಗಕ್ಕಾಗಿ ಅವಶ್ಯವಿರುವ ಕಾರ್ಯ ಮಾಡಲು ಅನುವಾಗುವಂತೆ ಅದರ ಮೇಲೆ ಪ್ರಫುಲ್ಲ ಪ್ರಕಾಶವನ್ನು ಬೀರುತ್ತದೆ. ಆದರೆ ಅದಕ್ಕಿಂತ ಮೊದಲು ಈ ತತ್ತ್ವಗಳು, ಏನನ್ನು ಹೇಳುತ್ತವೆ? ಈ ಪದಗಳು ನಿರ್ದಿಷ್ಟವಾಗಿ ಏನನ್ನು ಸೂಚಿಸುತ್ತವೆ? ಇದೆಲ್ಲದ ವಿವೇಚನೆಯಲ್ಲಿ ತೊಡಗುವ ಪೂರ್ವದಲ್ಲಿ, ಈ ಶ್ಲೋಕಗಳು ಮತ್ತು ಅವುಗಳಿಗಿಂತ ಮೊದಲು ಹೇಳಿದುದನ್ನು ನಾವು ಹೇಗೆ ಅರ್ಥೈಸಿಕೊಂಡಿದ್ದೇವೆ ಮತ್ತು ಅದಕ್ಕೂ ಈ ತತ್ತ್ವಗಳಿಗೂ ಯಾವ ಸಂಬಂಧವಿದೆ ಎಂಬುದನ್ನು ತಿಳಿದುಕೊಳ್ಳಬೇಕಾಗುತ್ತದೆ. ಏಕೆಂದರೆ ಗೀತೆಯು ಇಲ್ಲಿ ವಿಶ್ವದ ಹುಟ್ಟು ಮತ್ತು ವಿಕಾಸದ ಕ್ರಮವನ್ನು ಹೇಳುತ್ತಿದೆ. ಮೊದಲು ಇರುವ ತತ್ತ್ವ (ಅಥವಾ ವಸ್ತು) ಅಂದರೆ ಬ್ರಹ್ಮ, ಇವನು ಪರಮೋಚ್ಚ, ಸ್ವಯಂಭೂ, ಅವಿಕಾರಿ ಸತ್ತೆಯಾಗಿದ್ದು ವಿಶ್ವದ ಸಮಸ್ತ ಚಲನೆಯ ಹಿಂದೆ ಅವಶ್ಯವಾಗಿ ಸ್ಥಿತವಾಗಿದ್ದಾನೆ. ದೇಶ ಕಾಲ ಮತ್ತು ಕಾರಣಗಳ ಲೀಲಾ ವ್ಯವಸ್ಥೆಯಲ್ಲಿ ಇವನು ಅವಶ್ಯವಾಗಿ ಇದ್ದೇ ಇರುತ್ತಾನೆ (ದೇಶ, ಕಾಲ, ನಿಮಿತ್ತ). ಈ ಬ್ರಹ್ಮನಿದ್ದಾನೆ ಅಂತಲೇ ಅವನನ್ನು ಆಧರಿಸಿ ದೇಶ, ಕಾಲ ಮತ್ತು ನಿಮಿತ್ತಗಳು ಇರಲು ಸಾಧ್ಯವಾಗಿದೆ. ಇದಿಲ್ಲದೇ ಹೋದರೆ, ಸರ್ವವ್ಯಾಪಿಯೂ, ಅವಿಭಾಜ್ಯವೂ ಆಗಿರುವ ಈ ಅವಿಕಾರಿಯಾದ ಬ್ರಹ್ಮ ವಸ್ತುವಿಲ್ಲದೇ ಹೋದರೆ ಈ ದೇಶ, ಕಾಲ, ನಿಮಿತ್ತಗಳೆಂಬ ವಿಭಾಗ, ವ್ಯತ್ಯಾಸವೇ ಇರುವುದಿಲ್ಲ. ಆದರೆ ಅವಿಕಾರಿಯಾದ ಈ ಬ್ರಹ್ಮನು ಏನನ್ನೂ ಮಾಡುವುದಿಲ್ಲ. ಯಾವುದರ ಕಾರಣನೂ ಅಲ್ಲ, ನಿರ್ಧಾರಕ ತತ್ತ್ವ ಅಲ್ಲ, ಅವನು ಯಾವ ವಿಭಜನೆ, ನಿರ್ದಿಷ್ಟತೆಯನ್ನು ಕಲ್ಪಿಸುವುದಿಲ್ಲ. ಅವನು ನಿಷ್ಪಕ್ಷಪಾತಿ, ಸಮನು, ಎಲ್ಲವನ್ನೂ ಅವನು ಆಧರಿಸಿದೆಲ್ಲವನ್ನು ಪುರುಷೋತ್ತಮನ ಅಂತರ್ದೃಷ್ಟಿಯ

ಆಶ್ರಯದಲ್ಲಿ ಪ್ರಕಟಿಸುವ ಕಾರ್ಯ ಕೈಕೊಳ್ಳುವುದು. ಈ ಸ್ಥಿರ ಸ್ವಭಾವದ ಪ್ರಕೃತಿಯಿಂದ, ಜೀವಿಯ, ಪ್ರತಿ ಸತ್ತೆಯ ಆಂತರಿಕ ಸತ್ಯ ತತ್ವದಿಂದ ಅದರ ಸಂಭೂತಿಯನ್ನು, ಆಗುವಿಕೆಯನ್ನು ಪ್ರಕೃತಿ ಸಾಧ್ಯವಾಗಿಸುತ್ತದೆ. ಅನೇಕ ವಿಧದ ನಾಮ ರೂಪಗಳ ಮೂಲಕ ಜೀವಿಗಳ ಆಂತರಿಕ ಸತ್ಯವನ್ನು ಪ್ರಕೃತಿಯು ಪ್ರಕಟಿಸುವ ಕೆಲಸ ಮಾಡುತ್ತದೆ. ಅಂತೆಯೇ ಅವಸ್ಥಾಂತರಗಳು, ಬದಲಾವಣೆಗಳು, ರೂಪಾಂತರಗಳು ನಿರೂಪಿತವಾಗುತ್ತವೆ. ದೇಶ ಕಾಲಗಳ ನಿಯಮಕ್ಕೆ ಬದ್ಧವಾಗಿ, ಅವುಗಳು ನಿರೂಪಿತವಾಗುತ್ತವೆ. ದೇಶ ಕಾಲಗಳ ನಿಯಮಕ್ಕೆ ಬದ್ಧವಾಗಿ, ಅವುಗಳ ನಿಯಮಕ್ಕನುಗುಣವಾಗಿ ಆಯಾ ಪ್ರಕೃತಿ ಅಥವಾ ಸ್ವಭಾವವು ಪ್ರಕಟವಾಗುವುದು. ಇದನ್ನೇ ನಿಮಿತ್ತ ಎಂದು ಕರೆಯುತ್ತಾರೆ.

ಈ ರೀತಿ ನಿರಂತರವಾಗಿ ಬದಲಾವಣೆಯೊಂದಿಗೆ, ಅವಸ್ಥಾಂತರದೊಂದಿಗೆ ಪ್ರಕಟವಾಗುವುದು ದೈವೀ ಶಕ್ತಿಯ ಮೂಲಕವೇ, ದೈವೀ ಪ್ರಕೃತಿಯ ಕಾರ್ಯವೇ ಅದು. ಪ್ರಕೃತಿ ಎನ್ನುವುದು ಪರಮೇಶ್ವರ ಶಕ್ತಿಯೇ. ಅದನ್ನೇ ನಾವು 'ಕರ್ಮ ದೇವತೆ' ಎಂದು ಕರೆಯುತ್ತೇವೆ. ಮೊದಲು "ಸ್ವಭಾವದಿಂದ" ಹೊರ ಹೊಮ್ಮುವ ಸೃಜನಶೀಲ ಶಕ್ತಿ ಕಾರ್ಯವನ್ನೇ "ವಿಸರ್ಗ" ಎಂದು ಕರೆಯುವುದು. ಸೃಷ್ಟಿ ಅಂದರೆ ಸಂಭೂತಿಯಲ್ಲಿ ಚಲನೆಯಲ್ಲಿ, ಆಗುವಿಕೆಯಲ್ಲಿ, ಸಂಭೂತಿಯಲ್ಲಿ becoming ನಿರಂತರ ಬದಲಾವಣೆ ಹೊಂದುತ್ತ ಹೋಗುವುದು. ಇದು "ಭೂತಕರ" ಎನಿಸುವುದು. ಎಲ್ಲವನ್ನು ಒಟ್ಟಾಗಿ ಸೇರಿಸಿ ಮಾತನಾಡುವುದಾದರೆ, ಒಂದೊಂದೂ ವ್ಯಕ್ತಿ ನಿಷ್ಠವಾಗಿ "ಭಾವ ಕರವಾಗಿ" ಅಂದರೆ ವೈಯಕ್ತಿಕ ಜೀವಿಯ ಅಥವಾ ವಸ್ತು – ಸಂಗತಿಯ ನಿರಂತರ ಚಲನೆ, "ಕಾಲದಲ್ಲಿ" ನಿರಂತರ ಬದಲಾವಣೆಯೊಂದಿಗೆ ಪ್ರಕಟವಾಗುವುದು. ಇದು ಉದ್ಭವ ಇದರ ಹಿಂದಿರುವ ತತ್ತ್ವವೇ "ಕರ್ಮ"ವಾಗಿದ್ದು, ನಮಗಿದನ್ನು ಗ್ರಹಿಸಲು ಕೆಲವೊಂದಿಷ್ಟು ವೇಳೆ ಅಗತ್ಯವಾಗಿ ಬೇಕು. ನಶ್ವರವಾದ ಅಥವಾ ಕ್ಷರ ಸೃಷ್ಟಿಯು becoming ನಿರ್ಮಾಣವಾಗುವುದು ಪ್ರಕೃತಿಯ ಶಕ್ತಿಗಳ ಸಂಯೋಗದಿಂದ. ಇದು "ಅಧಿಭೂತ"ವೆನಿಸಿದ್ದು ಇದೇ ಜಗದ ನಿರ್ಮಾಣಕ್ಕೆ ಕಾರಣವಾಗಿದೆ. ಅಷ್ಟೇ ಅಲ್ಲ ಜೀವಿಯ ಪ್ರಜ್ಞೆಯ ಗುರಿ ಅಥವಾ ಉದ್ದೇಶ ಕೂಡ ಇದೇ ಆಗಿದೆ. ಈ ಅಧಿಭೂತದಲ್ಲಿಯೇ ಜೀವಿಯು ಎಲ್ಲ ವಿಧದ ಭೋಗಗಳನ್ನು ಅನುಭವಿಸುವುದು. ಪ್ರಕೃತಿಯಲ್ಲಿರುವ ಈಶ್ವರನನ್ನು ಕೂಡ ನೋಡುವ ವಸ್ತು object ಇದೇ ಆಗಿದೆ. ದೈವೀ ಶಕ್ತಿಗಳಾದ ಮನಸ್ಸು, ಸಂಕಲ್ಪ, ಇಂದ್ರಿಯಗಳು ಎಲ್ಲವು ಪ್ರಜ್ಞಾಯುಕ್ತ ಜೀವಿಯ being ಶಕ್ತಿಗಳಾಗಿದ್ದು, ಇವುಗಳ ಮೂಲಕವೇ

ಜೀವಿಯು ಕೆಲಸ ಮಾಡುತ್ತಿರುವುದರಿಂದ ಇವೇ ಅಧಿದೇವತೆಗಳೆಂದೆನಿಸುತ್ತವೆ. "ಅಧಿದೈವಗಳು" ಎಲ್ಲದಕ್ಕೂ ಬ್ರಹ್ಮನೇ ಆಧಾರ, ಆದರೂ ಅವನು ಇಂಥದು, ಅಂಥದು ಎಂದು ಆಯ್ಕೆ ಮಾಡುವುದಿಲ್ಲ. ಏನನ್ನೂ ಆರಂಭ ಮಾಡುವುದಿಲ್ಲ. ಹಾಗಾದರೆ ಈ ವಿಶ್ವಕ್ಕೆ ಕಾರಣ ಯಾರು? ಏನು? ಇದನ್ನೆಲ್ಲ ವಿಭಜಿಸಿ ವಿಂಗಡಣೆ ಮಾಡುವವರು ಯಾರು? ಪರಾತ್ಪರ ಪ್ರೇರಣೆ ಎಂಬುದೆಲ್ಲ ಏನು? ಅದು ಎಲ್ಲಿಂದ ಬರುತ್ತದೆ ಮತ್ತು ಯಾರಿಗೆ ಬರುತ್ತದೆ? ಕರ್ಮವನ್ನು ನಿಯಮನ ಮಾಡುವ ಸೂತ್ರಧಾರ ಯಾರು? ಶಾಶ್ವತವಾದ ಸತ್ತೆಯ ಮೂಲಕ ಈ ಕಾಲಚಕ್ರದಲ್ಲಿನ ಸಂಭೂತಿಯನ್ನು becoming ನಿರೂಪಿಸುವವರು ಯಾರು? ಇವೇ ಮುಂತಾದ ಪ್ರಶ್ನೆಗಳು ಸುಲಭವಾಗಿ ಮೈದೋರುತ್ತವೆ. ಇದು ಪ್ರಕೃತಿಯಿಂದ ಸಾಧ್ಯವಾಗುತ್ತದೆ, ಇದನ್ನು ನಾವು ಸ್ವಭಾವ ಎಂದು ಕರೆಯುತ್ತೇವೆ. ಪುರುಷೋತ್ತಮ ಅಥವಾ ಸರ್ವೇಶ್ವರನಾದ ಈಶ್ವರನಂತೂ ಇದ್ದೇ ಇದ್ದಾನೆ, ಅವನೇ ತನ್ನ ಶಾಶ್ವತ ಅವಿಕಾರಿತ್ವದ ಮೂಲಕ ಉನ್ನತ (ಆಧ್ಯಾತ್ಮಿಕ) ಶಕ್ತಿಯ ಕಾರ್ಯವನ್ನು ಬೆಂಬಲಿಸುತ್ತಾನೆ. ಆ ಪುರುಷೋತ್ತಮನೇ ತನ್ನ ದಿವ್ಯ ಸತ್, ದಿವ್ಯ ಚಿತ್, ಶಕ್ತಿ ಸಂಕಲ್ಪ ಶಕ್ತಿಯನ್ನು ಪ್ರಕಟಿಸುತ್ತಾನೆ "ಯಯೇದಂ ಧಾರ್ಯತೇ ಜಗತ್" ಇದನ್ನೇ ನಾವು ಪರಾ ಪ್ರಕೃತಿ ಎಂದು ಕರೆಯುತ್ತೇವೆ. ಪರಾಪ್ರಕೃತಿಯಲ್ಲಿರುವ ಪರಮಾತ್ಮನು ತನ್ನ ಅಜ್ಞಾನದ ಮೂಲಕ ನೋಡದೇ ಈ ಪ್ರಕೃತಿಯ ಆತ್ಮ-ಜ್ಞಾನದ ಮೂಲಕ ವೀಕ್ಷಿಸುತ್ತಾನೆ. ಚಲನಾತ್ಮಕವಾದ ಸಂಗತಿಯನ್ನು, ಚಲನೆಯನ್ನು, ತಾನು ಏನೆಲ್ಲವನ್ನು ವಿಂಗಡಿಸಿ ಅಂದರೆ ದೇಶ, ಕಾಲ ಮತ್ತು ನಿಮಿತ್ತಗಳ ಮೂಲಕ ಏನೆಲ್ಲ ಭಾಗಗಳನ್ನು ಕಲ್ಪಿಸಿದ್ದಾನೋ ಅದೆಲ್ಲದರ ನೈಜ ಸತ್ಯವನ್ನು ಪ್ರಕೃತಿಯಲ್ಲಿಯೇ ಪ್ರಕಟಿಸುತ್ತಾನೆ. ಅದೇ ಜೀವದ ಆಧ್ಯಾತ್ಮಿಕ ಸ್ವಭಾವವಾಗಿರುವುದು. ಪ್ರತಿಯೊಂದು ಜೀವದ ಆಂತರಿಕ ಸತ್ಯವಾದ ಆತ್ಮವನ್ನು ಪ್ರಕಟಿಸುವುದೇ ವಿಶ್ವ ಪ್ರಕಟನೆಯ ಉದ್ದೇಶವಾಗಿದೆ; ಪ್ರತಿಯೊಂದು ಜೀವಿಯಲ್ಲಿನ ಆಂತರಿಕ ದೈವೀ ಸ್ವಭಾವವು ಒಂದೇ ರೀತಿಯಾಗಿರುವುದು, ಒಂದೇ ಆಗಿರುವುದು. ಅದು ಎಲ್ಲ ಸ್ಥಿತಿಗಳಲ್ಲಿಯೂ ಒಂದೇ ಆಗಿರುವುದು, ಎಲ್ಲ ಬದಲಾವಣೆಗಳಲ್ಲಿ, ವಿಕಾರಗಳಲ್ಲಿ, ಅವಸ್ಥಾಂತರಗಳಲ್ಲಿ ಎಲ್ಲ ರೀತಿಯಿಂದಲೂ ಸ್ಥಿರವಾಗಿರುತ್ತದೆ, ಅದೇ ಜೀವಿಯ ಸ್ವಭಾವವಾಗಿದೆ, ದೈವೀ ಸ್ವಭಾವವಾಗಿದೆ, ಏನೆಲ್ಲ ಸ್ವಭಾವದಲ್ಲಿ ಇದೆಯೋ ಅದೆಲ್ಲವೂ ಜೀವದ ಆಧ್ಯಾತ್ಮಿಕ ಪ್ರಕೃತಿಯಲ್ಲಿ ಪ್ರಕಟವಾಗುವುದು, ಅದೆಲ್ಲವೂ ವಿಶ್ವ ಪ್ರಕೃತಿಯ ಅಧೀನಕ್ಕೆ ಒಳಪಟ್ಟಿರುವುದು, ಪ್ರಕೃತಿಯ ಅದೇ ಈ ಪ್ರಕೃತಿಯಿಂದ ಪಾರಾಗಿ ಮರಳಿ ಬ್ರಹ್ಮನಲ್ಲಿ ಹೋಗಿ ಸ್ಥಿತನಾದ ಆತ್ಮವೇ "ಅಕ್ಷರ ಪುರುಷ" ಇವನು ಅವಿಕಾರಿ, ಪರಮ ಪುರುಷನ ನೀರವ ಶಾಂತಿಯಲ್ಲಿ ನೆಲೆಸುತ್ತಾನೆ.

ಆದರೆ ನಶ್ವರವಾದ, ನಿರಂತರ ಬದಲಾವಣೆ ಹೊಂದುವ ಶರೀರದಲ್ಲಿರುವ ಕ್ಷರ ಪುರುಷನ ಹಿಂದೆ ಪುರುಷೋತ್ತಮನಿರುತ್ತಾನೆ. ಅವನಲ್ಲಿ ಎರಡೂ ಇರುತ್ತವೆ, ಅವಿಕಾರಿಯಾದ ಸತ್ತೆಯ ನೀರವ ಶಾಂತಿಯೂ ಇರುತ್ತದೆ, ಅದೇ ಕಾಲಕ್ಕೆ ಬದಲಾವಣೆ ಹೊಂದುವ ರೂಪದಲ್ಲಿರುವ ಕಾರ್ಯವೂ ಇರುತ್ತದೆ. ಅಂಥ ಪುರುಷೋತ್ತಮನೇ ಮಾನವನ ಅಸ್ತಿತ್ವದ ಹಿಂದೆ ಇರುತ್ತಾನೆ. ಅವನು ನಮ್ಮಿಂದ ಬಹು ದೂರದಲ್ಲೂ ಇದ್ದಾನೆ, ನಮ್ಮ ಸ್ಥಿತಿಯನ್ನು ಮೀರಿದ ಉನ್ನತ ಸ್ಥಿತಿಯಲ್ಲಿಯೂ ಇದ್ದಾನೆ, ಅದೇ ಕಾಲಕ್ಕೆ ಇಲ್ಲಿ ಪ್ರತಿ ಜೀವಿಯ ಶರೀರದಲ್ಲೂ ಇದ್ದಾನೆ, ಹೃದಯದಲ್ಲಿಯೂ ಪ್ರಕೃತಿಯಲ್ಲಿಯೂ ಇದ್ದಾನೆ. ಪ್ರಕೃತಿಯ ಎಲ್ಲ ಕಾರ್ಯಗಳನ್ನು ವ್ಯವಹಾರಗಳನ್ನು ಯಜ್ಞ ರೂಪದಲ್ಲಿ ಸ್ವೀಕರಿಸಿ, ಮಾನವನ ಪ್ರಜ್ಞಾಯುಕ್ತ ಸಂಪೂರ್ಣ ಸಮರ್ಪಣೆಗಾಗಿ ಕಾಯುತ್ತಿರುತ್ತಾನೆ. ಆದರೆ ಅವನು ಯಾವಾಗಲೂ, ಯಾವಾಗಲೂ ಅಂದರೆ ಸದಾ ಕಾಲದಲ್ಲೂ (ಸರ್ವಾವಸ್ಥಾಸು ಸರ್ವದಾ), ಮಾನವನ ಅಜ್ಞಾನ–ಅಹಂಕಾರದಲ್ಲೂ ಮಾನವ ಜೀವಿನ ಸ್ವಭಾವದ ಈಶ್ವರನಾಗಿಯೂ, ಕಾರ್ಯಗಳ ಪ್ರಭುವಾಗಿಯೂ ಇರುತ್ತಾನೆ. ಪ್ರಕೃತಿ ಮತ್ತು ಕರ್ಮ ಎರಡೂ ಅವನ ಆಧೀನದಲ್ಲಿಯೇ ಇರುತ್ತವೆ. ಅವನ ಮೂಲಕವೇ ಜೀವವು (ಜೀವಾತ್ಮನು) ಪ್ರಕೃತಿಯ ನಶ್ವರ ಲೀಲೆಯಲ್ಲಿ ಬಂದಿದೆ ಮತ್ತು ಅವಿಕಾರಿಯಾದ ಸ್ವಯಂಭೂ ಅಸ್ತಿತ್ವದ ಮೂಲಕ ಪರಮಧಾಮಕ್ಕೆ ಪರಮಾತ್ಮನ ಅತ್ಯುನ್ನತ ಸ್ಥಿತಿಗೆ ಆರೋಹಿಸುತ್ತದೆ.

ಜಗತ್ತಿನಲ್ಲಿ ಹುಟ್ಟಿಬಂದ ಮಾನವನು ಪ್ರಕೃತಿ ಮತ್ತು ಕರ್ಮಗಳ ಚಕ್ರದಲ್ಲಿ ಸಿಲುಕಿ ಲೋಕ ಲೋಕಾಂತರಗಳ ನಡುವೆ ಪರಿಭ್ರಮಣ ಗೈಯುತ್ತಾನೆ. ಪ್ರಕೃತಿಸ್ಥನಾದ ಪುರುಷ ಇದು ಮಾನವನ ಸೂತ್ರ. ಅವನೊಳಗಿರುವ ಆತ್ಮ ಏನನ್ನು ಕುರಿತು ಚಿಂತಿಸುವುದೋ, ಧ್ಯಾನಿಸುತ್ತದೋ ಮತ್ತು ಅದರಂತೆ ಕಾರ್ಯ ಮಾಡುತ್ತದೆಯೋ ಮಾನವನು ಅದೇ ಆಗುತ್ತಾನೆ. ಅವನ ಸದ್ಯದ ಜನ್ಮ ಮತ್ತು (ಭಾಗಶಃ) ವ್ಯಾಪಾರವು ಅವನ ಭೂತ ಕಾಲದ ಕೂಸು, ಅದೇ ಅವನ ಈಗಿನ ಜೀವನವನ್ನು ರೂಪಿಸುವುದು. ಅವನು ಏನು ವಿಚಾರ ಮಾಡುತ್ತಾನೆ. ಈ ಜೀವನದಲ್ಲಿ ಏನು (ಕೆಲಸ) ಮಾಡುತ್ತಾನೆ, ಸಾಯುವ ಕೊನೆಯ ಗಳಿಗೆಯವರೆಗೆ ಅವನು ಸಮಸ್ತ ಚಲನೆಯು ಅವನ ಈ ಮುಂದಿನ ಜನ್ಮವನ್ನು ನಿರ್ಧರಿಸುವುದು. ಹುಟ್ಟು ಅನ್ನುವುದು ಒಂದು ಆಗುವಿಕೆ, ಸಂಭೂತಿಯಾಗಿದೆ ಅನ್ನುವುದಾದರೆ ಸಾವು ಕೂಡ ಆಗುವಿಕೆಯೇ, ಅದೇನೂ ಆತ್ಯಂತಿಕ, ಕೊನೆಯ ವಿರಾಮ ಸ್ಥಿತಿ ಅಲ್ಲ. ಶರೀರವೇನೋ ಬಿದ್ದು ಹೋಗುತ್ತದೆ, ಆದರೆ ಆತ್ಮ ತನ್ನ ದಾರಿ ಹಿಡಿದು ಮುಂದೆ ಹೋಗುತ್ತದೆ "ತ್ಯಕ್ತ್ವ ಕಲೇ ವರಂ".

ಮಾನವನು ತನ್ನ ಕೊನೆಯ ಮರಣಾಸನ್ನ ಅವಸ್ಥೆಯಲ್ಲಿ ಯಾವ ರೀತಿ ಇರುತ್ತಾನೋ ಅದರ ಮೇಲೆ ಬಹಳಷ್ಟು ಅವಲಂಬಿಸಿದೆ. ಪ್ರಕೃತಿಯ ಕಾರ್ಯವೇನೆಂದರೆ ಮಾನವನ ಕರ್ಮಗಳ ಮೂಲಕ. ಅವನ ವಿಚಾರ, ಸಂಕಲ್ಪ ಮತ್ತು ಸಾಮರ್ಥ್ಯಗಳ ಮೂಲಕ ಅವನನ್ನು ನಿರೂಪಿಸುವುದು, ನಿರ್ದೇಶಿಸುವುದು, ಇದೇ ಅದರ ಕಾರ್ಯ ಮತ್ತು ವಿಧಾನ; ಆದ್ದರಿಂದ ಅವನ ಮರಣದ ಸಮಯದಲ್ಲಿ ಮತ್ತು ಅವನ ಮನದಲ್ಲಿ ಯಾವ ವಿಚಾರ ಮತ್ತು ಭಾವನೆ ದೃಢವಾಗಿರುವುದೋ, ಕೇಂದ್ರಿತವಾಗಿರುವುದೋ ಅದನ್ನೇ ಪ್ರಕೃತಿ ಸಾಧಿಸಿಕೊಡುವುದು. ಆದ್ದರಿಂದ ಮಾನವನ ಆತ್ಮವು ಪುರುಷೋತ್ತಮನ ಪದವಿಯನ್ನು ಹೊಂದುವ ಇಚ್ಛೆ ಹೊಂದಿದ್ದರೆ. ಎರಡು ರೀತಿಯ ಅಗತ್ಯಗಳನ್ನು ಎರಡು ನಿಯಮಗಳನ್ನು ಪೂರೈಸಬೇಕಾಗುತ್ತದೆ. ತನ್ನ ಜೀವನವನ್ನು ಅವನು ಇದೇ ಉದ್ದೇಶದ ಸಲುವಾಗಿ, ಅನುಷ್ಠಾನಕ್ಕಾಗಿ ಮುಡಿಪಿಡಬೇಕಾಗುತ್ತದೆ. ತನ್ನ ಆಂತರಿಕ ಜೀವನನ್ನು ಪೂರ್ತಿ ಇದರ ಸಲುವಾಗಿಯೇ ಮೀಸಲಿಡಬೇಕಾಗುತ್ತದೆ. ತನ್ನ ಅಭೀಕ್ಷೆಗೆ ಅವನು ತೀರ ನಿಷ್ಟನಿರಬೇಕಾಗುತ್ತದೆ, ಅವನ ಸಂಕಲ್ಪವು ಕೊನೆಯ ಕ್ಷಣದವರೆಗೂ ದೃಢವಾಗಿರಬೇಕಾಗುತ್ತದೆ. "ಮರಣ ಸಮಯದಲ್ಲಿ ಶರೀರವನ್ನು ಬಿಡುವಾಗಲೂ ಯಾರು ನನ್ನನ್ನು ಮರೆಯದೇ ನೆನಸುತ್ತಾರೆಯೋ ಅವರು ನನ್ನನ್ನೇ ಹೊಂದುತ್ತಾರೆ" (7/30) ಎಂದು ಕೃಷ್ಣನೇ ಹೇಳುತ್ತಾನೆ. ಕೃಷ್ಣನ ಪದ ಅಂದರೆ ಪರಮ ಪುರುಷನ ಪದ ಎಂದೇ ಅರ್ಥ ಅಂಥವನು ಪುರುಷೋತ್ತಮನ ಮೂಲ ಸ್ವರೂಪದೊಡನೆ ಒಂದಾಗುತ್ತಾನೆ. ಅದು ಆತ್ಮನ ಪರೋಭವ (8/26) ಅಂತಿಮ ಸ್ಥಿತಿ, ಅದು ಕರ್ಮದ ಕೊನೆಯ ಫಲ, ಅಲ್ಲಿಂದಾಚೆಗೆ ಅದು ಪುನಃ ಭೂಮಿಗೆ ಮರಳಬೇಕಾಗಿಲ್ಲ. ತನ್ನ ಮೂಲ ಸ್ವರೂಪವನ್ನು ಅದು ಪಡೆದಾಗಿರುತ್ತದೆ. ವಿಶ್ವ ಪ್ರಕೃತಿಯಲ್ಲಿಳಿದು ಬಂದ ಆತ್ಮವು ವಿಕಾಸದ ಲೀಲೆಯಲ್ಲಿ ತನ್ನ ಮೂಲ ಸ್ವಭಾವವನ್ನು ಮರೆತಂತೆಯೋ ಪುನಃ ತನ್ನತನವನ್ನು ಕಂಡುಕೊಳುವಂತೆಯೂ ಈ ಕ್ರೀಡೆಯಲ್ಲಿ ಅನೇಕ ಹಂತಗಳನ್ನು ದಾಟುತ್ತ, ವಿಕಾಸ ಹೊಂದುತ್ತ, ತನ್ನದೇ ಆದ ಪ್ರಜ್ಞೆಯ ಅನೇಕ ಸ್ತರಗಳನ್ನು ಮಿರುತ್ತ, ಕೊನೆಗೆ ತನ್ನ ಮೂಲ ಉಗಮ ಸ್ಥಾನವನ್ನು ಮರಳಿ ಹೊಂದುತ್ತದೆ. "ತಂತಂ ಭಾವಂ" ಹೊಂದಿ ಅಂತಿಮವಾಗಿ "ಮದ್ ಭಾವಂ" ಪಡೆದು ಕೃತಕೃತ್ಯತೆ ಹೊಂದುತ್ತದೆ. ಒಂದರ್ಥದಲ್ಲಿ ಆ ಆತ್ಮವೇ "ಈಶ್ವರ"ನಾಗುತ್ತಾನೆ ಎಂದು ಹೇಳಬಹುದು. ಏಕೆಂದರೆ ಅದು ಪರಮ ದೈವೀ ಸ್ವಭಾವವನ್ನೇ ಹೊಂದಿರುತ್ತದೆ, ತನ್ನ ಪಾರ್ಥಿವ ಪ್ರಕೃತಿಯನ್ನು ಪರಿವರ್ತಿಸಿಕೊಂಡು ದಿವ್ಯ ಪ್ರಕೃತಿಯೇ ಆಗಿ ನಿಲ್ಲುತ್ತದೆ.

(ಸಶೇಷ)

# ಶ್ರೀ ಅರವಿಂದರ
# 'ಊರ್ವಶಿ'

**– ಅನು: ಶ್ರೀ ಕಿಶೋರಕುಮಾರ ಕಾಸಾರ (ಸಮಷ್ಟಿ), ಕಲಬುರ್ಗಿ**

**4**

ಸಂಯಮದ ಸಾರ್ವಭೌಮರಾಗಿ ಸಮಯಾತೀತ ಸಾಗರದಲಿ
ಸುತ್ತುಹಾಕುತಿಹಾ ತಾಳ್ಮೆಯ ಅಧಿದೇವತೆಗಳು,
ನರರು ನಿಲಿಂಪರಾಗಿ ನೆಲದಿಂದ ನಾಕದೆಡೆಗೇರುವ ನೋಟಕಾಗಿ ನಿರೀಕ್ಷಿಸುತ,
ನಿಯತಿಯನೇ ನಡೆಸುತಿಹರು.
ಕರ್ಮವನೆಲ್ಲ ಕಾಡ್ಗಿಚ್ಚಿನೊಲು ಕ್ಷಯಿಸಿ ಕ್ಷಾಯಿಕಸಮ್ಯಕ್ತ್ವವನು ಕರುಣಿಸುವಾ
ಕೇವಲಿಗಳನು
ಕಡೆಗಣಿಸುವ ಕಾರ್ಮಣನು, ತನ್ನ ಕಿರೀಟವದು ಕೆಂಡದೊಳು ಕರಗಿ
ಕಳೇಬರವಾಗುವದ ಕಾಣುವನು.
ವರ್ಷಾವಧಿಯೊರೆಗೆ ವಿಜೃಂಭಿಸಿ ವಂಶಪೂರ್ವಜರಿಂದ ವಾರಸುದಾರಿಕೆಯಾಗಿ
ಒಲಿದ
ಸುವರ್ಣ ಸಾಮ್ರಾಜ್ಯವದು ಸುಟ್ಟುಸುಡುಗಾಡಾದ ಸಂದರ್ಭಕ್ಕೆ ಸಾಕ್ಷಿಯಾಗುವನು.
ಚಾರುದಿಶೆಯಲಿರುವ ಚಕ್ರಾಧಿಪತ್ಯವದು ರಥಚಕ್ರದೊಲು ಮುರಿದು
ಮಣ್ಣಾಗುವದನು ಕಣ್ಣಾರೆ ಕಾಣುವನು;
ಹಾಗಾಗಿ ಕ್ಷಣಿಕ ವೈಭವಕಾಗಿ ಸುಂದರ ಬದುಕನು ಬರಿದಾಗಿಸಿಕೊಳುವ
ಅಂಧಾಪೇಕ್ಷೆಯನು
ಆರಡಿಗೆ ತಳ್ಳಿ, ತಮದಿಂದಿರುವ ತಾಯ್ನೆಲೆಗೆ ತೂರ್ಯಸೂರ್ಯರನೇ
ತಂದಿಳಿಸುವ ತಯಾರಿಯಲ್ಲಿಹ ತಾರಾಕ್ಷರಾಗಿಹ ಕುರುಡು ದೈತ್ಯರೊಲು
ಸಾಹಸಧನನಾಗಿ ಸಾಧನೆಯ ಸುವೀಥಿಯಲಿ ಸಾವನ್ನೇ ಸದೆಬಡಿವ ಸಿದ್ಧಪುರುಷ
ನೀನಿರು.
ವಿಭೂತಿತತ್ವವ ಪೂರೈಸಿ, ವಿಜೃಂಭಿಸುತಿಹ ವಿದ್ಯುತ್‌ಲೋಕದಿ ವಿರಾಜಮಾನನಾಗಿ
ವಂದಿತನಾಗಿರು.
ಅಂದು ಸೂರ್ಯಚಂದ್ರಾದಿಗಳೇ ನಿನ್ನ ನೇಹಿಗರೆನಿಸುವರು.
ಅಷ್ಟದಿಕ್ಪಾಲಕರೇ ನಿನ್ನಡಿಯಾಳಾಗುವರು!

ತಾರಾಮಂಡಲದ ತನುಜೆ ತಿಲೋತ್ತಮೆಯು ತೀರ್ಥನುಡಿಗಳಿಗೆ
ತಿಲಾಂಜಲಿಯನಿಟ್ಟಿರಲು,
ಮೂರುಮುನ್ನೂರು ಮಂಡಲಗಳನೇ ಮಹಾಪ್ಲಾವನದಿ ಮುಚ್ಚಿ ಮಡಗಲೆಂದು
ಮುನ್ನೂಕಿದ
ಮಹಾವಾರಿಧಿಯೊಂದು ಮುಗಿಲಗೂಢಗಳನೇ ಮುಟ್ಟಿಮುರಿಯಲೆಂದೆಡೆಗೆ ಮೇಲೇರಿ
ರಾಹುರಕ್ಕಸಗಾತ್ರದ ಬಲ್ದೆರೆಗಳ ಬಿಚ್ಚಿ ಹೆಡೆಯಾಡಿಸುತ ಬರುವ ಅನಂತನಾಗನಂತೆ
ತೂರುತೇರುತ ಬಂದ ತೆರೆಗಳುಬ್ಬರವದು ತಳಮುಟ್ಟುತಲೇ ತಿಳ್ಳಿಯಾಡುವ
ತಣ್ಣೀರೆನಿಸಿತ್ತು!
ಮುನ್ನೀರ ಮೇರೆಯ ಅರಿತು ಅಲುಗುವಾ ಅಂಬುಧಿಯಂತಿಹ ಅಪ್ಸರವಾಣಿಯದು
ಪ್ರಕ್ಷುಬ್ಧವಿಹ ಪಾರಾವಾರದೊಲು ಪುಟ್ಟಿ, ಗಂಭೀರಾಂಬುಧಿಯೊಲು ಗಮಿಸಿ ಗತಿಸಿತ್ತು.
ದಶದಿಶೆಯೊಳಗೆ ವ್ಯಾಪಿಸಿರಲು ಶಾಂತಿ, ಪ್ರಜ್ಞಾಗ್ಗೋಳದೊಳು ಪುಟಿದೆದ್ದಿತೊಂದು
ಕ್ರಾಂತಿ;
ಅವ್ಯಕ್ತವಿಹ ಅನಂತಲೋಕದಂಚಿನಿಂದ ಬಂದೊಂದು ಮಿಂಚುಮಾಲೆಯದು
ಸೆಳೆದವನ ಎಳೆದೊಯ್ದಂತಿತ್ತು.
ಪ್ರವೃತ್ತವಿಹ ಪುರೂರವ' ಪ್ರಜ್ಞೆಯೊಳಗೆ ಪ್ರವಾಹದೊಲು ಪ್ರವಹಿಸಿರಲೊಂದು
ಪರಂಧಾಮಪ್ರಜ್ಞೆ
ಅಂತಃಪ್ರಜ್ಞೆಯಾಳದಲಿ ಅರಿವೆದ್ದು ಅರಳಿದ ಅಂತಃಚಕ್ಷುವಿನೆದುರು
ಅಪ್ಸರವಾಣಿಯದು
ವಾಗ್ದೇವಿಯಾಕಾರದಿ ಮೈದಳೆದು ಮೂಡಿತ್ತು. ಚಿತ್‌ಪಟಲದಿ ಚಿನ್ಮಯಳಾಗಿ
ಚಿತ್ರಿತವಾಗಿತ್ತು.
ಇಲಾಪುತ್ರನ ಇಂದ್ರಿಯವ್ಯಾಪಾರವಾಗಿರಲು ತಟಸ್ಥ, ಚಿತ್ತಪ್ರವೃತ್ತಿಯದು ಸ್ತಬ್ಧ,
ಬಾಹ್ಯಪ್ರಜ್ಞೆಯದು ಭೋರೆಂದು ಬೀಸುವ ಬಿರುಗಾಳಿಯಂತೆ ಬಂದೆರಗಿದರೂ
ಅಂತಃಪ್ರಜ್ಞೆಯೊಳು 'ಜೀ'ಯಿಡುವ ಜಿಂಗಭೃಂಗಾರಿಯ ಏಕತಾನವದು ಗುಂಯ್ಗುಟ್ಟಿತ್ತು!
ಮಾತೆಲ್ಲ ಮರೆತು ಮಸ್ತಿಷ್ಕಮಂಡಲದೊಳು ಮಧುಬಿಂದುವೊಂದು ತೊಟಕಿಕ್ಕಿ
ನಿಂತಿರಲು,
ಪುರೂರವನವ ಸ್ವರ್ಣಕನ್ಯೆಯರ ಸಂಘದಿಂದ ಸರಿದು ಮೌನದಿ ಮುಂಬರಿದಿಹನು.
ಭೂಮದಿಂ ಬುವಿಯೆಡೆಗೆ ಬಂದುಹೋಗುವ ಚಾರಣರಿಗಾಗಿರುವ ಚಿರಂತನದ
ದ್ವಾರವಾಗಿಹ,

ನೆಲಮುಗಿಲಿನಂಗಳದಿ ನೆಟ್ಟ ನಿರಂತರದ ನಿಚ್ಚಣಿಕೆಯೊಲಿಹ, ಹಿಮಾಲಯದಾ
    ಉತ್ತುಂಗಶೃಂಗದಲಿ
ಅದಿಮಪ್ರಕೃತಿಯ ಆದಿಮಾಧುರ್ಯದ ರಸಮಯಸಮಯವದಲ್ಲಿ ಸುಳಿದಾಡುತ್ತಿತ್ತು.
ಮರ್ತ್ಯಜೀವನವಿನ್ನೂ ಮುಚ್ಚಿದ ಮೊಗ್ಗೆಯೊಳಗೆ ಮಲಗಿ
ಮಲ್ಲಿಗೆಯಾಗಲೆಂದು ಮಾನಿಸುವ ಮುನ್ನದಲಿ,
ಪೃಥಿವಿಯಿನ್ನೂ ಪಲ್ಲವಿಸದ ಪಕಳೆಯೊಳಗವಿತು ಪೂರ್ಣಬದುಕಿನ
ಪ್ರತೀಕ್ಷೆಯಲಿಹ ಪೂರ್ವಪೊತ್ತಿನಲಿ,
ಕಾರ್ಮಣವಿನ್ನೂ ಕವಿದ ಕತ್ತಲೊಳಗಿಂದ ಕೆಳಲೋಕವಿದನು ಕಾಣಲೆಂದು
    ಕಣ್ತೊಡೆವ ಕಾಲದಲಿ,
ಋವಿಯೊಳಗೆ ಬದುಕಿದ್ದ ಏಕಾಂತಮಯದ, ದಿವ್ಯ–ಕಾರುಣ್ಯಮಯದ
ಜೀವನವದಲ್ಲಿ ಜೀವಿಸುತ್ತಿತ್ತು.
ಪ್ರಶಾಂತತೆಯಲಿ ಪೂರ್ಣಪಾವಿತ್ರ್ಯತೆಯನು ಪಡೆದು ಪರಂಧಾಮದ
    ಪ್ರಕೃತಿಯೊಲು ಪವಡಿಸಿಹಾ
ಮೇರುಮಂದಾರದ ಮೂಕಶೃಂಗಗಳಿಂದ ಮೇಲೆದ್ದ ಮಾನವರಥವದು
ಮಂದಮಾರುತದೊಳು ಮುಂಬರಿದಿತ್ತು.
ಪುರೂರವನನು ಹೊತ್ತ ವರೂಥವದು ವ್ಯಾಪ್ತವಿಶ್ವದಾ ವಿಕ್ಷಿಪ್ತಮಯದಿ
    ಒಂಟಿಯಾಗಿ ಒರಗಿರುವ
ಅವಕಾಶದಡಿಯ ಅಪರಂಪಾರದಾಳದಿ ಅಲವತ್ತುಕೊಂಡಿಹ
ಮೃತ–ಪ್ರಪಾತದ ಮೇಲೆ ಪಯಣಿಸಿತ್ತು.
ಉಲ್ಕಾಪಾದೊಳು ಉರ್ವಿತಲಕಿಳಿಯಲೆಂದು ಉದುರಿ ನಭೋಮಂಡಲದಿ
    ನೀಳರೇಖೆಯನೆಳೆದು
ಕರಗುತ ಕಾಣೆಯಾಗುವ ಪ್ರಜ್ವಲಿತ ತಾರಾಗ್ನಿಪಿಂಡದೊಲು ಹಿಮಾರಣ್ಯದ
ಹಿತ್ತಲಿನೊಳಗದು ಹಾದುಹೋಗಿತ್ತು.
ದಿಟ್ಟಿಗಮನದಿ ದಟ್ಟಾರಣ್ಯವಾಗಿ ದಟ್ಟೈಸಿದ ಬಿಳಿ ಬಣ್ಣದ ಭೂತಬೆಂತರವದು
ಕ್ರೂರದರ್ಶನದ ಕಾಣ್ಕೆಯನಿತ್ತಿರಲು,
ಕರ್ಣದಂತಃಕರಣದಿ ಗುಪ್ತಗಂಧರ್ವರ ಗಾಳಿಗಾನವದು ಮುಗಿಯದ ಮೌನಗಾನದ
ಮಂಪರನೇ ಮುತ್ತಿರಲು,
ನಿರ್ಜನವಿಹ–ನಿರ್ಜರವಿಹ ಅವ್ಯಕ್ತದಾವಕಾಶದಲಿ ಅಮಾನುಷವಿಹ

ಅನಾಥಪ್ರಜ್ಞೆಯೊಂದು ಬಂದಾವರಿಸಿತ್ತು.
ಗಗನಗಾಮಿಯಾಗಿ ವಿದ್ಯಾಧರವಿಮಾನದೊಲು ತೂಗುತಲೆಯುತಿಹ ರೌಹಿಷರಥವದು
ಗಂಗೋತ್ರಿಯ ಗುಂಭಗಂಭೀರ ಗಿರಿಗಳೆಡೆಗೆ ಗಮಿಸಿತ್ತು.
ಶಿಖರಸಂಸ್ಥಿತ ಗೌಪ್ಯಗುಹ್ಯದಾ ಗರ್ಭದೊಳಗಣ
ಗಾಢಾಂಧಕಾರದಲಿ ಗುಪ್ತಗಾಮಿನಿಯಾಗಿ ಗುಂಭಿಸಿಹ ಗಂಗೆಯವಳು ತುಳುಕುತ್ತ
ಬಳುಕುತ್ತ ಅಲ್ಲಿಲ್ಲಿ ಅಳುಕುತ್ತ
ಕೊನೆಗೊಮ್ಮೆ ಧುಮುಕುತ್ತ ಹಿಮನದಿಯಾಗಿ ಹರಿಯುವಳು.
ಜನಮಾನಸದ ಜೀವನದಿಯಾಗಿ ಜನಿಸುವಳು.
ಪರ್ವತರಂಧ್ರದೊಳಗಿಂದ ರಕ್ಕಸರಭಸದಲಿ ಹುಚ್ಚೆದ್ದು ಹರಿದು
ಸಮತಲದಿ ಶೀತಲಸರಿತಳಾಗಿ ಸರಿಯುವಳು.
ಮನುಕುಲಕೆಲ್ಲ ಮೊಲೆಹಾಲನಿತ್ತು ಮುದ್ದಿಸಿಹ ಮಾತಾಯಿಯಾದರೂ
ಚಿರಂತನವಾಗುಳಿವ ಚಿರಕನ್ಯೆಯೆನಿಸುವಳು.
ಕಿರಿಯ ಕಂದರಗಳೆಲ್ಲ ಹಿರಿಯ ಹಂದರಗಳಾಗಿ ಹರಿದು,
ಕಮರಿಗಳನೆಲ್ಲ ಕಣಿವೆ ಕಂದಕಗಳಾಗಿ ಕೊರೆದು,
ಭಗೀರಥ ಬಾಂಧವರೆಡೆ ಭವಿಸುತಿಹ ಬಾಗೀರಥಿಯು, ಜಾಹ್ನವಿಯಾಗಿ
ಜನಜೀವನವಿಹ ಜಗದೆಡೆಗೆ ಜರಿಯುವಳು.
ಶುದ್ಧ ಉದ್ಬುದ್ಧಳಾಗುತ ಉಗಮಿಸುವಾ ಗಂಗೆಯ ಗುಪ್ತದ್ವಾರಗಳಿಹ
ಗಂಗೋತ್ರಿಗಿರಿಗಳಿಂದ ಮುಂಬರಿದ ಮಾನವನು
ಸ್ವರ್ಲೋಕದಿಂದಿಳಿವ ಸ್ವರ್ಣಾಳುಗಳಿಗೆ ಸಿದ್ಧಮಾರ್ಗವಾಗಿಹಾ
ಮಾನಸಗಿರಿಯಿಂದ ಮಾನುಷಗುರಿಯೆಡೆಗೆ ಮುನ್ನೂಕುವ ಮುನ್ನ
ಹಿಂತಿರುಗಿ ಹಿಮಾಲಯದಾ ಹೊನ್ನದ್ವಾರದೆಡೆಗೊಮ್ಮೆ ಹರಿಸಿರಲವನ ದಿಟ್ಟಿ,
ಒಂಟಿಶಿಖರದ ಮೇಲಾಯಿತವಳ ಭೆಟ್ಟಿ.
ಅವನ ಹೃದಯವೈಶಾಲ್ಯತೆಯ ಮೇಲೆ ವಾಯುಭಾರವನಿತ್ತ ಆಂತರ್ಯದ
ಬಿರುಗಾಳಿಯಲಿ
ಕನಸು ಕಲ್ಪನೆಯ ಕಟ್ಟಡಗಳೆಲ್ಲ ಕೊಚ್ಚಿ ಹೋಗಿರಲು, ಕೊನೆಯಾಸೆಯೊಂದು
ಕವಿದಿರಲು,
ಶೈಲಾಗ್ರಸಮೂಹಗಳಿಂದ ದೂರವಾಗಿ ತನ್ನಂತೆಯೇ ಒಂಟಿವೇದನೆಯಲಿ
ರೋಧಿಸುತಿಹ

ಏಕಾಂಗಿಶಿಖರವೊಂದರ ಮೇಲೆ ಮೆಟ್ಟಿ ಮೂಡಿಹಳವಳು ಜೀವನಸ್ವರ್ಗದಾ
ದೈವೀಕ ಕಾಂತೆ.
ಪುರೂರವಪ್ರಜ್ಞೆಯನೇ ಪ್ರೇಮಪ್ರಾಂಗಣವಾಗಿ ಪರಿವರ್ತಿಸಿದ ಪರಂಧಾಮದಾ
ಪ್ರಾಂಜಲಕನ್ಯೆ.
ಶೈಲಾಗ್ರದಲಿ ಸುಂಯ್ಯಿಡುವ ಶೀತಲಸಮಿರವದು ಸ್ವರ್ಗಶಿರೋಮಣಿಯ
ಸ್ವರ್ಣಕೇಶವನಲಿ ಸುಳಿದಾಡಿಸಿತ್ತು.
ನಿಲಿಂಪನಾಕದಿ ನೇಯ್ದು ನಿರ್ಮಿಸಿಹ ವಂದನೀಯಳ ವಸನವದು
ಪವನಪಾರ್ಶ್ವದಲಿ ಫಡಫಡಿಸಿತ್ತು.
ಆ ಗಿರಿಯಂಚಿನಲಿ ನಿಂತು ನೃಪನ ಪ್ರಸ್ಥಾನವನೇ ಪ್ರಜ್ವಲಿತ ಪಾಪೆಗಳಿಂದವಳು
ಪರಿವೀಕ್ಷಿಸುತ್ತಿರಲು,
ಅವಳ ಕೈಯೊಂದು ಮುಷ್ಠಿಗಂಟನು ಮುಚ್ಚಿ ಉಕ್ಕಿಬರುತಿಹ ಉನ್ಮಾದವನು
ತಡೆಯಲೆಂದು ತಡವರಿಸಿತ್ತು.
ಹಗುರಾದ ಹಸ್ತವಿನ್ನೊಂದು ಹೊನ್ನಗುವರಿಯ ಹಣೆಯನ್ನೇರಿ ನೇತ್ರದ್ವಯಗಳಿಗೆ
ನೆರಳಿನ ನೆರವನಿತ್ತಿತ್ತು.
ಕಣ್ಣಾಲಿಗಳಿಗೆ ಕನಿಕರದ ಕರಿಛಾಯೆಯು ಕವಿದಿರಲು, ಕಣ್ದಿಟ್ಟಿಗೋಚರವಿಹ
ಕಾಂತನ ಕಡೆನೋಟವದು ಕ್ರಾಂತದರ್ಶನವಾಗಿತ್ತು.
ಕೊರಲುಬ್ಬಿ ಬಂದಿಹ ಭಾಮಿನಿಯ ಹಿಂದೆ ಸುದೂರದಲಿ ಸ್ವರ್ಗಕನ್ನೆಯರ
ಸಮೂಹವದು ಸುತ್ತುಹಾಕಿರಲು,
ನೀರನಾರಿಯರಾ ನಗುನಾಚಿಕೆಯದು ನೃಪನೊಳಗೆ ಸಂಕೋಚದ
ಸುಳಿಗಾಳಿಯನೆ ಸುಳಿದೆಬ್ಬಿಸಿತ್ತು.
ಭಾವನೆಯ ಬಿರುಗಾಳಿಯನೇ ಬಡಿದೆಬ್ಬಿಸಿತ್ತು. ತನುಘಾತದಲಿಂತು ತತ್ತರಿಸಿದ,
ತಿಂಗಳ ತನುಜನವ,
ಅಶ್ವವಿದ್ಯೆಯ ಬಲ್ಲ ಅಶ್ವಪತಿಯಾಗಿ ಲಗಾಮುಗಳನು ಲಂಭಿಸಿ ಲೋಕಾಕಾಶದೆಡೆ
ಲಗ್ಗೆಯಿಟ್ಟನು,
ಅನಂತವಾಯುವಿನಲಿ ಆಕಾಶದೀಪವಾಗುತ ಅದೃಶ್ಯನಾದನು, ನೀಲನೀಲಿಮದಿ
ನಕ್ಷತ್ರವಾಗುತ ನೀಲದೊಳು ಸತ್ತೆಯಾದನು.
ಕೊನೆಗೆ ಕೆಳಮುಖವಾದ ಕಾಲರಥದ ಚಕ್ರಯುಗಲವು ಅವಕ್ಷೇಪನ ಮಾರ್ಗದಿ
ಮುಂಬರಿದಿರಲು,

ಬಿರುಗಾಳಿಯಂತೆ ಭೋರಿಡುತ ಬಂದ ಭವ್ಯಾತ್ಮನವನು ಇಳೆಯ ಶಾಂತನಗರಿಗೆ
ಬಂದಿಳಿದಿಹನು.
ಪೃಥಿವಿತಲದಿ ಪ್ರಶಾಂತಮಯವಾದ ಪ್ರತಿಷ್ಠಾನವಾಂತು ಪುಣ್ಯಪಟ್ಟಣಕೆ
ಪುರೂರವನವ ಪದವಿರಿಸಿಹನು.

* * *

---

**ಟಿಪ್ಪಣಿ:**

**ಅಧ್ಯಾಯ 1**

ಶ್ರೀ ಅರವಿಂದರ ಉರ್ವಶಿ ಕಾವ್ಯವು ಇಲ್ಲಿಂದಲೇ ಆರಂಭವಾದರೂ, ಈ ಕಾವ್ಯದ ನಾಯಕನಾದ ಪುರೂರವಸ್ಸನ ಅವತರಣದ ಭಾಗವಾದ 'ಪುರೂರವಸ್' ಕವನವನ್ನು ಅಭ್ಯಸಿಸಿಯೇ ನಾವಿಲ್ಲಿ ಪದವಿರಿಸಬೇಕಾಗುತ್ತದೆ. ಹಾಗಾಗಿಯೇ ಈ ಹಿಂದಿನ ಅಧ್ಯಾಯದಲ್ಲಿ ಪುರೂರವಸ್ ಕವನದ ಟಿಪ್ಪಣಿಯನ್ನು ನೀಡಿ ಇಲ್ಲಿ ಮುಂದುವರಿಯಲಾಗಿದೆ.

ಉರ್ವಶಿ ಕಾವ್ಯವು ಆರಂಭವಾಗುತ್ತಿದ್ದಂತೆ ಊರ್ಧ್ವದ ಸಪ್ತ ಸ್ತರಗಳಿಂದ ಅವರೋಹಿಸಿ ಮರ್ತ್ಯಕ್ಕಿಳಿಯುತ್ತಿರುವ ಪುರೂರವಸ್ಸನನ್ನು ತೋರಿಸಲಾಗುತ್ತದೆ. ಲೋಕಲೋಕಂಗಳ ಯಾತ್ರಿಕನಾಗಿ ಔನ್ನತ್ಯದ ಧಾಮಗಳಿಂದ ಅವತರಿಸಿದ ಪುರೂರವಸ್ಸನು ಪ್ರಾಣ ಕೋಶವನ್ನು ದಾಟಿ ಮರ್ತ್ಯ ವಲಯವನ್ನು ಪ್ರವೇಶಿಸಿದ ಕೂಡಲೇ ಈ ಭೂಮಂಡಲದ ನಾಭಿಯಾಗಿರುವ ಹಿಮಾದ್ರಿ ಶೃಂಗಗಳ ಮೇಲೆ ಬಂದಿಳಿಯುತ್ತಾನೆ. ಅವನು ಭೂವಲಯದ ಗಡಿ ರೇಖೆಯನ್ನು ಪ್ರವೇಶಿಸುವ ಸಮಯವು ನಸುಕು ಹರಿಯುವ ಕಾಲವಾಗಿದ್ದು, ಬ್ರಾಹ್ಮಿ ಮುಹೂರ್ತವು ಮುಗಿದು, ಸತಿಯಾದ ಸೂರ್ಯಕುವರಿಯೊಡನೆ ಸರಥಿಕರಾಗಿ ಯಾತ್ರೆ ಹೊರಡುವ ದಸ್ರ–ನಾಸತ್ಯರು ಅಶ್ವಿನೀ ಮುಹೂರ್ತವನು ಮೂಡಿಸಿ ಮರೆಯಾಗುತ್ತಿರುವಾಗ, ಅರ್ಧ ಬೆಳಕರ್ಧ ಕತ್ತಲೆಯಿಂದ ಕೂಡಿದ ಈ ಲೋಕಕೆ ಬೆಳಕನೀಯಲೆಂದು ಹೊರಡುವ ಉಷೆಯು ಮೆಲ್ಲನೆ ಉದಿಸುತ್ತಿರುವ ಕಾಲವಾಗಿತ್ತು. ಸಾಮಾನ್ಯವಾಗಿ ಶ್ರೀ ಅರವಿಂದರ ಕಾವ್ಯಗಳೆಲ್ಲವೂ 'ಬೆಳಗು' ಮೂಡುವ ದೃಶ್ಯದಿಂದಲೇ ಪ್ರಾರಂಭವಾಗುತ್ತವೆ! ಶ್ರೀ ಅರವಿಂದರ ಪ್ರಕಾರ ಬೆಳಗು ಎಂಬುದು ಬರಿ ದಿನದ ಆರಂಭವಲ್ಲ, ಬದಲಿಗೆ ಅದು ಇಡೀ ವಿಶ್ವದ ಸೃಷ್ಟಿಯ ಸಂಕೇತ! ಹಾಗಾಗಿಯೇ ಅವರಿಗೆ ಬೆಳಗೆಂದರೆ ಬಹು ಇಷ್ಟದ ಕಾಲ. ಅದನ್ನು ಅವರು ಬೇರೆ ಬೇರೆ ಕಾವ್ಯಗಳಲ್ಲಿ ವೈವಿಧ್ಯಮಯವಾಗಿ

ವರ್ಣಿಸುತ್ತಾರೆ. ಸಾವಿತ್ರಿ ಮಹಾಕಾವ್ಯದಲ್ಲಿ ಈ ಬೆಳಗನ್ನು 'ಸಾಂಕೇತಿಕ ಉಷೆ' ಎಂದು ಕರೆಯುತ್ತಾರೆ. ಹಾಗೂ ಆ ಕಾಲದ ಸೂಕ್ಷ್ಮತೆಯನ್ನು ತಿಳಿಸುತ್ತಾ, 'ಅದು ಸೃಷ್ಟಿ ಸಾಮ್ರಾಟರಾದ ದೇವ ಗಣವೆಲ್ಲವೂ ಕಣ್ಣೊಡೆವ ಕಾಲಕ್ಕೂ ಮುನ್ನ ಇದ್ದ ಘಳಿಗೆಯಾಗಿದೆ' ಎಂಬುದಾಗಿ ವಿವರಿಸುತ್ತಾರೆ. ಆದರೆ ಅಲ್ಲಿ ನೇರವಾಗಿ ಉಷೆಯ ಪ್ರಸ್ತಾಪವನ್ನು ಮಾಡುವದಿಲ್ಲ. ಅದು ಸಾಂಕೇತಿಕ ಮಹಾಕಾವ್ಯವಾಗಿರುವದರಿಂದ ಯಾವುದೇ ದೈವತಗಳ ಪ್ರತಿಮಾ ಸೂಚಕಗಳನ್ನು ಅಲ್ಲಿ ಬಳಸಲಾಗಿಲ್ಲ. ಆದರೆ, ಉರ್ವಶಿ ಕಾವ್ಯದಲ್ಲಿ ಅವರು ನೇರವಾಗಿ ಉಷೆಯನ್ನು ಕುರಿತು ಪ್ರಸ್ತಾಪಿಸುತ್ತಾರೆ. ಹೀಗೆ ಉಷೋದಯದ ಸಮಯಕ್ಕೆ ಹಿಮ ಪರ್ವತಗಳ ಮೇಲೆ ಪುರೂರವನ ಅವತರಣಿಕೆಯಾಗುತ್ತದೆ. ಈ ಹಿಂದಣ 'ಪುರೂರವಸ್' ಕವನದಲ್ಲಿ ಅವನು ಮೇಲಿನ ಲೋಕಗಳಿಂದ ಇಳಿದು ಬರುವ ಚಿತ್ರಣವನ್ನು ಮಾತ್ರ ಕೊಡಲಾಗಿದೆ. ಆದರೆ, ಪುರೂರವಸ್ಸನು ಆ ಔನ್ನತ್ಯದ ಧಾಮಗಳೆಡೆ ಏಕೆ ತೆರಳಿದನು ಎಂಬುದನ್ನು ವಿವರಿಸಿಲ್ಲ. ಅದಕ್ಕೆ ಉತ್ತರವನ್ನು ಈ ಭಾಗದಲ್ಲಿ ಕಾಣಬಹುದು.

ಸಕಲ ವಿಶ್ವದ ಸೃಷ್ಟಿ ಕಾರ್ಯವು ಕೊನೆಗೊಂಡ ನಂತರ ಸುರರು ಊರ್ಧ್ವ ಲೋಕಗಳಿಗೂ, ಅಸುರರು ಅಧೋ ಲೋಕಗಳಿಗೂ ಸ್ವಾಮಿತ್ವವನ್ನು ಪಡೆದು–ಕೊಂಡರು. ಕೃಷ್ಣತಮ ತಮದಿಂದ ಪರಂಜ್ಯೋತಿಯೆಡೆಗಿನ ಆರೋಹಣ ಕ್ರಮದಲ್ಲಿ ಅಂತಿಮ ಊರ್ಜಸ್ಕರ ಸ್ತರವಾದ ಆನಂದಮಯವು ಸುರರ ನೆಲೆಯಾದರೆ, ಶೂನ್ಯದಾಳದ ತಮಸ್ಸೇ ಅಸುರರ ಪರಮವ್ಯೋಮವಾಯಿತು. ಆದರೆ ಅಪ್ರಜ್ಞೆಯ ಕತ್ತಲ ಲೋಕಗಳನ್ನು ಪಡೆದ ಅಸುರರು ಮೇಲೇರಿ ಬಂದು ಸ್ವರ್ಲೋಕ ವಾಸಿಗಳಾಗಲೆಂದು ಪ್ರಯತ್ನಿಸಿದರು. ಇದಕ್ಕೆ ಪ್ರತಿಯಾಗಿ ಸುರರು, 'ದೈತ್ಯರು ಸದಾಕಾಲ ಪಾತಾಳವಾಸಿಗಳಾಗಿಯೇ ಇರಬೇಕೆ'ಂದು ಪಣತೊಟ್ಟರು. ಈ ವ್ಯತಿರಿಕ್ತ ಮನೋಭಾವನೆಗಳಿಂದಾಗಿ ದೇವ–ದೈತ್ಯರೊಳಗೆ ಕದನ ಕೋಲಾಹಲಗಳು ನಡೆದು ಭೂಲೋಕದಿಂದ ಸ್ವರ್ಲೋಕಪರ್ಯಂತದವರೆಗಿನ ಸೃಷ್ಟಿಯು ದೈತ್ಯಾದಿತ್ಯರ ಯುದ್ಧರಂಗವಾಗಿ ಮಾರ್ಪಟ್ಟಿತು. ಈ ಯುದ್ಧದ ಸೆಣೆಸಾಟದಲ್ಲಿ ದೈತ್ಯರು ಸ್ವರ್ಲೋಕವನ್ನು ಹೊಂದಲು ಬಹಿರಂಗದ ಯುದ್ಧವನ್ನು ತೊರೆದು ಆಂತರ್ಯದ ಯುದ್ಧ ಮಾರ್ಗವನ್ನು ಅನುಸರಿಸಿದರು. ಇದರ ಪ್ರಕಾರ ಅಧೋ ಲೋಕಗಳಿಂದ ಏರಿಬರುವ ದೈತ್ಯರು ಮರ್ತ್ಯದ ಮನುಕುಲವನ್ನು ತಮ್ಮ ಅಡಿಯಾಳಾಗಿಸಿಕೊಂಡು ಆ ಮೂಲಕ ತಮ್ಮ ವಿಜಯವನ್ನು ಸಾಧಿಸಲೆಂದು ನೋಂತರು. ಅಸುರರ ಈ ಕ್ಷುದ್ರ ನಿಲುವನ್ನು ತರಿದೊಗೆಯಲೆಂದು ಸುರರು ಸ್ವರ್ಲೋಕದಿಂದ ಇಳಿದು ಮರ್ತ್ಯ

ಲೋಕದಲ್ಲಿ ದೈತ್ಯರಿಗೆದುರಾಗಿ ನಿಂತರು. ಇದರಿಂದಾಗಿ ಅತ್ತ ಊರ್ಧ್ವ ಲೋಕಗಳಿಂದಲೂ ಇತ್ತ ಅಧೋ ಲೋಕಗಳಿಂದಲೂ ಬಂದು ಯುದ್ಧಿಸುತಿಹ ದ್ವಂದ್ವ ಶಕ್ತಿಗಳಿಂದಾಗಿ ಈ ಅಪರಾರ್ಧದ ಭೂಲೋಕವು ಯುದ್ಧರಂಗವಾಗಿ ಮಾರ್ಪಟ್ಟಿತು.

ಸೃಷ್ಟಿಯ ಸಮಸ್ತ ಲೋಕಗಳು ಮಾನವ ಪ್ರಜ್ಞಾಸ್ತರದ ಸಂಕೇತಗಳಾಗಿದ್ದು, ಇಲ್ಲಿ ದೇವ–ದಾನವರು ಮಾನವ ಪ್ರಜ್ಞೆಗ್ಗಿಳಿದು ಸದಾ ಕಾದಾಟದಲ್ಲಿ ತೊಡಗಿರುತ್ತಾರೆ. ಮನುಕುಲವನ್ನು ಅಧೋ ಲೋಕಕ್ಕಿಳಿಸಲು ದಾನವರೂ, ಜ್ಯೋತಿರ್ಲೋಕಗಳೆಡೆ ಆರೋಹಿಸಲು ದೇವತೆಗಳೂ ಪ್ರಯತ್ನಿಸಿರುತ್ತಾರೆ. ಇದರಿಂದಾಗಿ ಮನುಕುಲವು ಸುರಾಸುರಮಿಶ್ರ ಪಿಂಡವಾಗಿ ಮಾನವ ಪಿಂಡವಾಗಿ ಬದಲಾಯಿತು. ಈ ಮಾನವ ಪ್ರಜ್ಞೆಯೊಳಗೆ ನೆಲೆಸಿದ ಶುಕ್ಲ ಸಂತತಿಯನ್ನು ನಿರ್ಮೂಲಿಸಲೆಂದು ಕೃಷ್ಣವರ್ತನಿಗಳೂ, ದೈತ್ಯ ವಲಯವನ್ನು ನಿರ್ನಾಮಗೈಯಲೆಂದು ಆದಿತ್ಯಪಡೆಯೂ ಸಂತತವಾಗಿ ಕಾದಾಡುತ್ತಲೇ ಇರುತ್ತಾರೆ. ಇಂತಹ ದೇವಾಸುರ ಸಂಗ್ರಾಮವೊಂದು ಘೋಷಣೆಯಾದ ಕೂಡಲೇ ಮನೋಮಯ ಲೋಕದ ಮಾನಸರು, ಪುರೂರವಸ್ಸನಿಗೆ ಯುದ್ಧ ಸಹಾಯವನ್ನು ಕೋರಿ ಸಂದೇಶವನ್ನು ಕಳುಹಿಸಿದರು. ಅಮರ ಲೋಕದ ವಾಣಿಯನ್ನಾಲಿಸುತ್ತಲೇ ಯುದ್ಧಸನ್ನದ್ಧನಾದ ನೃಪನು ನೇರ ಊರ್ಧ್ವನೆಲೆಗೆ ತೆರಳಿ ದೈತ್ಯ ಪಡೆಯನ್ನು ಸಂಹರಿಸುವ ಕಾರ್ಯದಲ್ಲಿ ನಿಲಿಂಪರಿಗೆ ನೆರವಾಗಿ, ದಾನವರೆಲ್ಲರನ್ನು ದಂಡಿಸಿ ದಿಕ್ಕುಪಾಲಾಗಿಸಿ, ಕೊನೆಗೆ ಅಂತಿಮ ಊರ್ಜಸ್ಕರ ಲೋಕವಾದ ಆನಂದಮಯಕ್ಕೆ ತೆರಳಿ ತ್ರಿಧಾತುವಿನ ಧಾತೃವಿನಿಂದ ಅನುಗ್ರಹಿತನಾಗಿ ಅವರೋಹಿತ ಮಾರ್ಗದಲ್ಲಿನ ಪಂಚ ಕೋಶಗಳನ್ನು–ಸಪ್ತಧಾಮಗಳನ್ನು ಹಿಂದಿಕ್ಕಿ ಮರ್ತ್ಯಕ್ಕೆ ಬಂದಿಳಿದಿರುತ್ತಾನೆ.

ಪುರೂರವಸ್ಸನು, ಮರ್ತ್ಯ–ಮನೋಮಯಗಳ ಮಧ್ಯದಲ್ಲಿ ಮಿನುಗುವ ತಾರೆಯೊಂದು ನಕ್ಷತ್ರಪಾತದೊಳು ಉದುರಿದಂತೆ, ಪ್ರಕಾಶಮಾನವಾದ ಪುಂಜವೊಂದರ ರೂಪದಲ್ಲಿ ಇಳಿದು ಬರುವ ಚುಕ್ಕೆಯಂತೆ ಇಳಿದುಬಂದನು. ಹಗುರವಾಗಿ ಹಾಯಾಗಿರುವ ಹೊನ್ನಲೋಕಗಳಿಂದಿಳಿದ ಅವನು ಭಾರವಾಗಿರುವ ಭೌತಿಕದ ಬುವಿಗೆ ಬಂದಿಳಿಯುತ್ತಲೇ ವಾಯುಮಂಡಲದಲ್ಲಿ ಪಹರೆ ಸುತ್ತುತ್ತಿರುವ ಪ್ರಾಣದೂತರುಗಳು ತಂಬೆಲರ ಸೂಸಿ ಅವನನ್ನು ಸ್ವಾಗತಿಸಿದರು. ಬಹುಕಾಲ ತನ್ನನ್ನು ತೊರೆದು ಹೋದ ತನಯನೋರ್ವ ಮರಳಿ ತನ್ನ ಮಡಿಲಿಗೆ ಮರಳಿದಾಗ

ತುಂಬು ಹೃದಯದಿಂದ ಬರಸೆಳೆವ ಮಾತೆಯೋರ್ವಳಂತೆ, ಇನಿತುಕಾಲ ತನ್ನಿಂದ ದೂರವಾಗಿ, ಈಗ ಇಳೆಗಿಳಿಯುತಿಹ ಇಳಾತನಯನಾದ ಪುರೂರವಸ್ಸನಿಗೆ ಪೃಥಿವಿಯು ನಿತ್ಯ ಹರಿದ್ವರ್ಣದ ಹಸಿರ ಸೀರೆಯನುಟ್ಟ ಅಮ್ಮನಂತೆ ಆವರಿಸಿಕೊಂಡಿತ್ತು. ಹಿಮಾರುಣವಿಹ ಪರ್ವತಾವಳಿಗಳ ಮೇಲೆ ಬಂದಿಳಿದ ಅವನ ಸುತ್ತಲೂ ಎತ್ತರೆತ್ತರಕ್ಕೆ ಬೆಳೆದು ನಿಂತಿದ್ದ ಶೃಂಗಗಳು ಮುಗಿಲಿನೊಳಗೆ ಮೈಚಾಚಿಕೊಂಡಿದ್ದವು. ಆ ಶಿಖರಾಗ್ರದಿಂದ ಮತ್ತೂ ಮುಂಬರಿದ ನೃಪನು, ಘಟ್ಟಮಾರ್ಗವನಿಳಿದು ಹಿಮ ಬಂಡೆಗಳಿಂದಾದ ಸಮತಲದ ನೀರ್ಗಲ್ಲ ಭಾಗಕ್ಕೆ ಬಂದಿಳಿದನು. ಹೀಗೆ ಬಹುಕಾಲದ ಯಾನದ ನಂತರ ತಾಯ್ನೆಲಕ್ಕೆ ಬಂದಿಳಿದ ನೃಪನು ಕೊಂಚ ಕಾಲ ವಿಶ್ರಮಿಸಿಕೊಳ್ಳಲೆಂದು ನೋಡಿದನು. ಏಕೆಂದರೆ, ಈ ಅವರೋಹಿತ ಪಯಣದಲ್ಲಿ ಅವನ ಪ್ರಜ್ಞೆಯು ಅಲ್ಲಲ್ಲಿ ಕತ್ತಲೆಯ ಕಾರಸ್ಥಾನಗಳ ಒಳಹೊಕ್ಕು ಪಾರಾಗಿ ಬಂದಿರುವುದರಿಂದ ಅವನ ಪ್ರಜ್ಞೆಯು ತುಸು ಜೊಂಪಿಸಿದಂತಾಗಿ ಅವನ ಸ್ಮೃತಿ–ಬುದ್ಧಿಗಳ ಮೇಲೆ ಮಾಯೆಯ ಛಾಯೆಯೊಂದು ಕವಿದಂತಾಗಿತ್ತು. ಆದರೆ ನಿಧಾನವಾಗಿ ಅವನ ಪೂರ್ವ ಸ್ಮೃತಿಯ ಹೊತ್ತಗೆಗಳೆಲ್ಲ ನಿಧಾನವಾಗಿ ಬಿಚ್ಚಿಕೊಳ್ಳಲಾರಂಭಿಸಿದವು. ದೈತ್ಯಾದಿತ್ಯರ ಯುದ್ಧ ಘೋಷಣೆ, ಯುದ್ಧ ಸಹಾಯವನ್ನು ಕೋರಿ ಬಂದ ಸಂದೇಶ, ಆರೋಹಣ, ದೇವಾಸುರ ಸಂಗ್ರಾಮ, ಮರಳಿ ಇಳಾವತರಣ... ಹೀಗೆ ಎಲ್ಲ ನೆನಪುಗಳು ಒಂದೊಂದಾಗಿ ಅವನ ಚೇತನವನ್ನು ತಿಳಿಗೊಳಿಸಿದವು. ಕೊನೆಗೆ “ಈ ಯುದ್ಧವೆಂಬ ಭೂತದ ರಕ್ಕಸ ದಾಹವು ಎಂದಿಗೂ ಕೊನೆಯಾಗದು! ಯಾವುದೇ ಒಂದು ಯುದ್ಧವು ಆರಂಭವಾಗುವ ಕಾಲಕ್ಕೆ ಬರುವ ಯುಗ ಪ್ರವರ್ತಕನೊರ್ವ, ‘ಈಗ ಜರುಗಲಿರುವ ಯುದ್ಧವು ಅಂತಿಮ ಅನಿವಾರ್ಯ ಹಿಂಸೆಯಾಗಿದ್ದು, ಇದರ ನಂತರ ವಿಶ್ವದೆಲ್ಲೆಡೆ ಶಾಂತಿ ನೆಲೆಸುತ್ತದೆ’ ಎಂದು ನುಡಿಯುತ್ತ ಯುದ್ಧ ಘೋಷವನ್ನು ಮೊಳಗಿಸುತ್ತಾನೆ. ಆದರೆ, ಒಂದು ಯುದ್ಧ ಮುಗಿದ ನಂತರ ಅದು ಮತ್ತೊಂದಕ್ಕೆ ನಾಂದಿಯಾಗುತ್ತದೆ. ಹೀಗೆ ಈ ಸಾಲು ಯುದ್ಧಗಳ ಸರಣಿ ಹಿಂಸೆಗಳು ಮುಂದುವರಿಯುತ್ತಲೇ ಇರುತ್ತವೆ.” ಎಂಬ ಸತ್ಯದ ಅನಾವರಣವಾಗುತ್ತದೆ.

ಹೀಗೆ ಸ್ಮೃತಿ ಸಾಮ್ರಾಜ್ಯದೊಳಗೆ ಕಳೆದುಹೋದ ನೆನಪಿನ ಗಂಟೆಲ್ಲ ಮರಳಿ ಮಸ್ತಕವನ್ನು ಸೇರಿರಲು, ಶಾಂತಿಯ ಮಧುಬಿಂದುವೊಂದು ಅವನ ಸಹಸ್ರಾರದ ಕಮಲದಳದೊಳಗೆ ತೊಟಕಿಕ್ಕಿ ನಿಂತಿತ್ತು. ಕಳೆದುಹೋದ ಮರ್ತ್ಯ ಪ್ರಜ್ಞೆಯು ಅವನೊಳಗೆ ಮತ್ತೆ ಇಳಿದು ಬಂದಿತ್ತು. ತಾ ನಿಂತ ತಾಣವನ್ನು ಒಮ್ಮೆ ಈಕ್ಷಿಸಿದ

ನೃಪನು, ಅದು ಬೆಳಗಿನ ಸಮಯವೆಂಬುದನ್ನರಿತು ಮೂಡಣದಲ್ಲಿ ಮೂಡುವ ಉಷೋದಯವನ್ನು ಕಾಣಲೆಂದು ದಿಗಂತದೆಡೆ ದಿಟ್ಟಿಸಿದನು. ಈ ಭಾಗದಲ್ಲಿ ಶ್ರೀ ಅರವಿಂದರು ಉಷೆಯ ದಿವ್ಯ ವೈಭವವನ್ನು ಸಂಕ್ಷಿಪ್ತವಾಗಿ ಪ್ರಸ್ತಾಪಿಸುತ್ತಾರೆ. ಆದರೆ, ಅದನ್ನು ಕನ್ನಡಕ್ಕೆ ಅನುಸ್ಪಂದಿಸುವ ಹಂತದಲ್ಲಿ ಋಗ್ವೇದದ ಉಷಾಸೂಕ್ತ ಮತ್ತು ಶ್ರೀ ಅರವಿಂದರ ವೇದ ರಹಸ್ಯ ಗ್ರಂಥದಲ್ಲಿ ಚರ್ಚಿತವಾದ ಉಷೆಯ ಮಾಹಿತಿಯೊಂದಿಗೆ ಸಮೀಕರಿಸಿ ಆ ವರ್ಣನೆಯನ್ನು ಇಲ್ಲಿ ಹಿಗ್ಗಿಸಲಾಗಿದೆ. ಹಾಗೂ ಅದನ್ನು ಉಷೆಯ ಸ್ತುತಿ ಗೀತೆಯಂತೆ ಹೇಳಲಾಗಿದೆ. ಈ ಕಾರ್ಯದಲ್ಲಿ ಋಗ್ವೇದದಲ್ಲಿ ಉಲ್ಲೇಖವಾದ ಉಷೆಯ ಹಲವು ನಾಮಾವಳಿಗಳನ್ನು ಸೂಕ್ತವಾಗಿ ಬಳಸಿ ಈ ಗೀತೆಯನ್ನು ಹೆಣೆಯಲಾಗಿದೆ.

ಋಗ್ವೇದದ 1.30.20; 1.48.1,10; 1.92.7,14; 1.123.5; 4.5.12; 4.52.6; 5.79.1,2,3,8,9; 7.75.1,5... ಮುಂತಾದ ಸೂಕ್ತಗಳಲ್ಲಿ ಉಲ್ಲೇಖಿತವಾದ ಉಷೆಯ ಪರ್ಯಾಯ ನಾಮಗಳಾದ ಪ್ರತ್ಯೂಷೆ, ಪರಂಜ್ಯೋತೆ, ಪರಂಧಾಮಸುತೆ, ಪ್ರಭಾವತಿ, ಸೂರ್ಯಾಂಶೆ, ಸೂರ್ಯಕಾಂತೆ, ಸೂರ್ಯಾವರ್ತೆ, ಶ್ರೀಮನದ ಸ್ವರ್ಣಿಮಶಾಂತೆ, ವಿವಸ್ವತಕಾಂತೆ, ಸೂರ್ಯ ಸೋದರಿ, ಸೂನೃತದ ಭಾಸ್ವತಿ ನೇತ್ರಿ, ಗೋಮಂತೆ, ಗೋಮತಿ, ಋತಾವರೆ ಎಂಬಿತ್ಯಾದಿ ನಾಮಗಳನ್ನು ಇಲ್ಲಿ ಸಂದರ್ಭೋಚಿತವಾಗಿ ಬಳಸಿ ಉಷಾಗೀತೆಯ ಸೌಂದರ್ಯವನ್ನು ಹೆಚ್ಚಿಸಲು ಪ್ರಯತ್ನಿಸಲಾಗಿದೆ.

ಪುರೂರವಸ್ಸನು, ದಿಗಂತದಲ್ಲಿ ಉದಿಸುತ್ತಿರುವ ಉಷೆಯ ದಿವ್ಯ ವೈಭವವನ್ನು ಕಾಣುತ್ತ ನಿಂತಿರುವಾಗಲೇ ಆ ಉಷೆಯ ನೀಲಿಮದ ಮಧ್ಯದೊಳಗಿಂದ ಕೆಲವು ಸುಂದರ ಆಕೃತಿಗಳು ಕಂಡುಬಂದವು. ನೆಲದಿಂದ ಬಹುದೂರ ಆಗಸದ ಅಂಚಿನಲ್ಲಿ ತೇಲುತ್ತಾ ಸಾಗುತ್ತಿದ್ದ ಆ ಆಕೃತಿಗಳನ್ನೇ ತದೇಕಚಿತ್ತದಿಂದ ನೋಡುತ್ತಿರಲು ಅವರುಗಳು ಜೀವನ ದೇವತೆಗಳ ಸ್ವರ್ಗ(ಸಾವಿತ್ರಿ.2.9)ದಿಂದ ಅವತರಿಸಿದ ಅಪ್ಸರ ಕನ್ಯೆಯರೆಂಬ ಅರಿವಾಯಿತು. ಆ ಅಪ್ಸರೆಯರ ಜನನದ ಬಗೆಗಿನ ಮಾಹಿತಿಯನ್ನು ನೀಡಲೋಸುಗ ಎರಡು ಪುರಾಣ ಪ್ರಸಿದ್ಧವಾದ ಐತಿಹ್ಯಗಳನ್ನು ಇಲ್ಲಿ ಸೇರಿಸಲಾಗಿದೆ. ಅಪ್ಸರೆಯರ ಕುರಿತಾದ ಶ್ರೀ ಅರವಿಂದರ ವರ್ಣನೆಯು ಪಾಶ್ಚಾತ್ಯ ಸಂಸ್ಕೃತಿಯಲ್ಲಿ ಕಾಣಸಿಗುವ Nymphsಗಳ ವರ್ಣನೆಗೆ ಹೊರತಾದುದಲ್ಲವೆಂಬುದನ್ನು ಇಲ್ಲಿ ಮೇಲ್ನೋಟಕ್ಕೆ ಅರ್ಥೈಸಿಕೊಳ್ಳಬಹುದು. ಆದರೆ, ಇಲ್ಲಿ ಆ ವಿವರಣೆಯನ್ನು

ಋಗ್ವೇದದಲ್ಲಿ ವಿವರಿಸಲಾದ ಆಪಸ್ಸಿನ ಮೂಲದಿಂದ ಉದಿಸಿ ಬಂದ ಕನ್ಯೆಯರ ಪರಿಕಲ್ಪನೆಯಂತೆಯೇ ಚಿತ್ರಿಸಲಾಗಿದೆ. ಈ ಅಪ್ಸರೆಯರ ಭಾಗವನ್ನು ಮೂಲದಲ್ಲಿದ್ದಂತೆಯೇ ಅನುಸ್ಪಂದಿಸಲಾಗಿದ್ದು, ಕನ್ನಡದ ಜಾಯಮಾನಕ್ಕೆ ತಕ್ಕಂತೆ ಅಲಂಕಾರಗಳನ್ನು ಬಳಸಿ ಕಾವ್ಯವನ್ನು ಔಚಿತ್ಯಪೂರ್ಣವಾಗಿ ಹೆಣೆಯಲಾಗಿದೆ. ಹಾಗಾಗಿ ಸಹೃದಯಿಗಳು ಇಲ್ಲಿ ಪೌರ್ವಾತ್ಯ–ಪಾಶ್ಚಿಮಾತ್ಯಗಳೆರಡೂ ಮೂಲದ ಹೊಳಹನ್ನು ಆಸ್ವಾದಿಸಬಹುದು.

ಆಕಾಶಗಾಮಿಗಳಾಗಿ ನಭದಲ್ಲಿ ಸಂಚರಿಸುತ್ತಿದ್ದ ಆ ಅಪ್ಸರೆಯರು ಕೆಲವೊಮ್ಮೆ ಶುಭ್ರ ಗಗನಾಂಗಣದಿ ದಿಟ್ಟಿಗೋಚರವಾಗುತ್ತ ಚರಿಸುತ್ತಿದ್ದರೆ, ಮತ್ತೆ ಕೆಲವೊಮ್ಮೆ ಮೇಘಮಂಡಲಗಳ ಮಧ್ಯೆ ಮರೆಯಾಗಿ ಮುಂದೋಡುತ್ತಿದ್ದರು. ಹಾಗಾಗಿ ನೃಪನಿಗೆ ಅವರ ಪೂರ್ಣ ರೂಪದ ದರ್ಶನವಾಗಲಿಲ್ಲ. ಅಲ್ಲಲ್ಲಿ ಚದುರುತ್ತ, ಮತ್ತೆಲ್ಲೋ ಕಲೆಯುತ್ತ ತೇಲುತ್ತಿದ್ದ ಮೋಡಗಳು ಗಂಧರ್ವರ ಪ್ರತಿರೂಪಗಳಾಗಿದ್ದು, ಜಲಾಧಿನಿವಾಸಿಗಳಾದ ಅಪ್–ಸರಗಳಿಗೆ ಮೂಲನೆಲೆಯಾಗಿದೆ. ಹಾಗಾಗಿಯೇ ಅಪ್ಸರಿಯರಿಗೆ 'ಗನ್ಧರ್ವ' ಮೋಡಗಳೆಂದರೆ ಇಷ್ಟ! ಅವರು ಸದಾ ಆ ಮೋಡಗಳ ಸುತ್ತಲೇ ಸುತ್ತುತ್ತಿರುತ್ತಾರೆ. ಆ ಸಮಯದಲ್ಲಿ ಅಂತರಿಕ್ಷದ ಪ್ರಾಣ ದೇವತೆಗಳು ತಮ್ಮ ಬೀಸುಗಾಳಿಯಿಂದ ಮೋಡಗಳನ್ನು ಚದುರಿಸುತ್ತ, ಅದರೊಳಗೆ ಅವಿತುಕೊಂಡಿರುವ ಅಪ್ಸರೆಯರ ಕೇಶವನ್ನು ಸುಳಿದಾಡಿಸುತ್ತಿದ್ದರು. ಕೊನೆಗೆ ಆ ಎತ್ತರದಿಂದಿಳಿದು ಕಣ್ಣಳತೆಯ ಅಂತರದಲ್ಲಿ ತೇಲುತ್ತ ಅಲೆಯುತ್ತಿದ್ದ ಅಪ್ಸರ ಕನ್ಯೆಯರನ್ನು ಕಂಡ ನೃಪನು ಅವರುಗಳ ನಾಮಾವಳಿಗಳನ್ನು ಸ್ಮರಿಸಿಕೊಂಡನು. ಅವರಲ್ಲಿ ಮೇನಕಾ, ಮಿಶ್ರಕೇಶಿ, ಮಲ್ಲಿಕಾ, ರಂಭಾ, ನೀಲಭಾ, ಶೀಲಾ, ನಳಿನಿ, ಲಲಿತಾ, ಲಾವಣ್ಯ, ತಿಲೋತ್ತಮೆ... ಮೊದಲಾದವರನ್ನು ಗುರುತಿಸಿದನು. ಆದರೆ, ಅವರೆಲ್ಲರಿಗಿಂತಲೂ ಪುರೂರವಸ್ಸನ ಮನಸ್ಸನ್ನು ಅತಿಯಾಗಿ ಸೆಳೆದ ಇರ್ನ್ಶೋರ್ವ ಅಪ್ಸರ ಕನ್ಯೆಯು ಅವರ ಮಧ್ಯದೊಳಗೆ ಮಿನುಗುತ್ತಿದ್ದಳು. ಅವಳನ್ನು ನೋಡಿದ ಕೂಡಲೇ ಪುರೂರವಸ್ಸನ ಮನವು ಕ್ಷೋಭಿಸುವ ಸಾಗರದಂತೆ ಹೊಯ್ದಾಡಲಾರಂಭಿಸಿತು. ಪ್ರೇಮಿಯೋರ್ವನು ತಾ ಪ್ರೀತಿಸಿದ ಹೆಣ್ಣನ್ನು ಕಂಡಕೂಡಲೇ ಪ್ರೇಮ ಭಯದಿಂದ ನಡುಗುವಂತೆ, ಪುರೂರವಸ್ಸನಲ್ಲೂ ಪ್ರೇಮ ಭಯವೊಂದು ಪುಟಿದೆತ್ತಿತ್ತು. ಇದರಿಂದ ಕ್ಷಣಕಾಲ ವಿಚಲಿತನಾದ ಪುರೂರವಸ್ಸನು ಅವಳನ್ನೇ ಈಕ್ಷಿಸಲಾರಂಭಿಸಿದನು. ಅವಳು ಔನ್ನತ್ಯದಲ್ಲಿ ಪ್ರಜ್ವಲಿಸುವ ಸೂರ್ಯನ ದಿವ್ಯ ರಹಸ್ಯದಂತೆ ನಿಗೂಢತೆಯನ್ನೇ ಮೈವೆತ್ತು ಬಂದಂತಿದ್ದಳು. ಸ್ವರ್ಗದ ಸೀಮೆಯಲ್ಲಿರುವ ನಂದನೋದ್ಯಾನದ

ತಂಬೆಲರನ್ನು ಉಸಿರಾಡಿದ ದಿವ್ಯಕನ್ನಿಕೆಯಾಗಿದ್ದಳು. ಅವಳನ್ನು ನೋಡುತ್ತಾ ನಿಂತಿರುವಾಗಲೇ ಕಳೆದುಹೋದ ಗತ ಜನ್ಮದ ಸ್ಮೃತಿಯೊಂದು ಅವನ ಪ್ರಜ್ಞೆಯೊಳಗೆ ನಿಧಾನವಾಗಿ ಇಳಿದು ಬಂದು ಆ ಕನ್ನಿಕೆಯ ಮೂಲವನ್ನು ಅರುಹಲು ಪ್ರಯತ್ನಿಸುತ್ತಿತ್ತು, ಅವಳ ನಾಮವನ್ನು ಸ್ಫುರಿಸುವ ಸನ್ನಾಹದಲ್ಲಿತ್ತು. ಅದೇ ಸಮಯಕ್ಕೆ ಅವನಿಗೇ ಗೊತ್ತಿಲ್ಲದಂತೆ ಅವನ ಅಂತರಾಳದೊಳಗಿಂದ ನುಡಿಯೊಂದು ಹೊರಬಿದ್ದಿತ್ತು. ಅದು ಆ ಕನ್ನಿಕೆಯೊಡನಿರುವ ತನ್ನ ಸಂಬಂಧವನ್ನು ಅನ್ವೇಷಿಸುವ ಕಾರ್ಯದಲ್ಲಿ ತನಗೆ ಸಹಾಯವನ್ನು ನೀಡುವಂತೆ ಕೋರಿ ನಿಲಿಂಪರೆಡೆಗೆ ಕೂಗಿ ಮೊರೆದ ಪ್ರಾರ್ಥನೆಯಾಗಿತ್ತು. ಆ ಪ್ರಾರ್ಥನೆಯಲ್ಲಿ ಪುರೂರವಸ್ಸನು ದೇವತೆಗಳ ಕುರಿತು, 'ಈ ಮರ್ತ್ಯದಲ್ಲಿ ಮಾನವ ಜನ್ಮವು ಹೇಗೆ ಸೃಷ್ಟಿಯಾಯಿತು ಎಂಬ ಪ್ರಶ್ನೆಯಿಂದ ಹಿಡಿದು, ಪುರೂರವ ನೃಪನಾಂತು ತನ್ನ ಮೂಲವಾವುದೂ ಎಂಬಲ್ಲಿಯವರೆಗಿನ ಪ್ರಶ್ನೆಗಳನ್ನು ಕೇಳಿಕೊಳ್ಳುತ್ತಾನೆ. ನಭದಲ್ಲಿ ಸುತ್ತುಹಾಕುತಿರುವ ನಕ್ಷತ್ರಗಳು ತನ್ನ ಕಕ್ಷೆಯನ್ನು ತೊರೆದು ಗಿರಕಿ ಸುತ್ತುತ ಕಳೆದೋದರೂ, ಅಚಲವಾಗಿ ನಿಂತ ಪಂಕಪರ್ವತಗಳೆಲ್ಲ ತಮ್ಮ ನೆಲೆಯನ್ನು ತೊರೆದು ಬೇರೊಂದು ಭಾಗದೆಡೆ ಭವಿಸಿದರೂ, ಧರ್ಮತತ್ಪರನಾಗಿ ರಾಜ್ಯವಾಳುತ್ತಿರುವ ತಾನು ಮಾತ್ರ ತನ್ನ ನಡೆಯಿಂದ ವಿಚಲಿತನಾಗೆನು ಎಂಬ ಭ್ರಾಂತಿಯಲ್ಲಿದ್ದು, ತನ್ನ ಪ್ರಜೆಗಳೂ ಸಹ ತನ್ನನ್ನು ಹಾಡಿ ಹರಸುತ್ತ ತಾನು ಇಡೀ ಮನುಕುಲವನ್ನು ಸ್ವರ್ಗದೆಡೆಗೆ ನಡೆಸುವನು ಎಂಬುದಾಗಿ ನಂಬಿದ್ದರು ಆದರೆ, ಇಂದೇಕೋ ಈ ಕನ್ನಿಕೆಯನ್ನು ಕಂಡ ಕೂಡಲೇ ತನ್ನ ಅಭಿಪ್ರಾಯಗಳೆಲ್ಲ ತಳಕಾಣುತ್ತಿವೆ' ಎಂದು ನುಡಿಯುತ್ತಾ ನಲುಗುತ್ತಾನೆ. ಮುಂಬರಿದು ದೂರದಲ್ಲೆಲ್ಲೋ ಚರಿಸುತ್ತ ನೃಪನ ಮನದೊಳಗೆ ಪ್ರೇಮ ಭಾವನೆಯನ್ನು ಜಾಗೃತಗೊಳಿಸಿದ ಆ ಕನ್ನಿಕೆಯನ್ನು ಕುರಿತು ನುಡಿಯುತ್ತಾನೆ, ಅವಳಾರು ಎಂಬುದಾಗಿ ಪ್ರಶ್ನಿಸುತ್ತಾನೆ. ತನ್ನ ಗತಿಸಿಹೋದ ಜನ್ಮದೊಳಗೆ ತನ್ನ ಜೊತೆಗಾರ್ತಿಯಾಗಿದ್ದ ಗೆಳತಿಯೇ? ಎಂದು ಕೇಳುತ್ತಾನೆ. ಅದೇ ಸಮಯಕ್ಕೆ ಅವನ ಸ್ಮೃತಿಕೋಶವು ತೆರೆದುಕೊಂಡು ಅವಳ ಮೂಲವನ್ನು ತಿಳಿಸಲು ಪ್ರಯತ್ನಿಸುತ್ತದೆ. ನಿಧಾನವಾಗಿ ಅವಳಾರೆಂಬ ಪ್ರಶ್ನೆಗೆ ಉತ್ತರವು ದೊರೆಯುತ್ತಾ ಸಾಗುತ್ತದೆ. ಅವಳು ತನ್ನ ಹಿಂದಿನ ಭವದ ಪತ್ನಿಯೆಂಬುದು ಮನವರಿಕೆಯಾಗುತ್ತದೆ. ಹೀಗೆ ಅವಳ ಕುರಿತು ನುಡಿಯುತ್ತ, ತಾವಿಬ್ಬರೂ ಹಿಂದಿನ ಜನ್ಮದಲ್ಲಿ ಜೊತೆಯಾಗಿ ನಡೆದ ನೆನಪುಗಳನ್ನೆಲ್ಲ ಸ್ಫುರಿಸುತ್ತಾನೆ. ಪ್ರಕೃತಿಯಲ್ಲಿ ತಾನು ಕಂಡ ಸೌಂದರ್ಯದ ದ್ರವ್ಯರಾಶಿಗಳೆಲ್ಲದರ ಜೊತೆಗೆ ಅವಳನ್ನು ಹೋಲಿಸಿ ಗೀತಿಸುತ್ತಾನೆ. ತಾ ಅರಿತ ದೇವಿಯರ ರೂಪದೊಡನೆ

ಸಮೀಕರಿಸಿ ಹಾಡುತ್ತಾನೆ. ಕೊನೆಗೆ ಅವಳನ್ನು ಕೂಗಿ ಕರೆಯುತ್ತಾನೆ. ಅವಳಿಗದು ಕೇಳಿಸದೇ ಇದ್ದಾಗ, ತಾವಿಬ್ಬರೂ ಸತಿ–ಪತಿಗಳಾಗಿದ್ದೆವೆಂಬುದನ್ನು ಮನವರಿಕೆ ಮಾಡುತ್ತ ಕೂಗುತ್ತಾನೆ. ಕೊನೆಗೆ ಅವನ ಚಿತ್ಪಟಲದಲ್ಲಿ ಅವಳ ಹೆಸರು ಬಂದು ಅಚ್ಚೊತ್ತಿ ನಿಂತಿರಲು ಅವಳನ್ನು ಉರ್ವಭ್ಯಶ್ನುತೆ, ಉರ್ವಾಶಿನಿ ಎಂದು ಪಠಿಸುತ್ತ ಕೊನೆಯಲ್ಲಿ ಉರ್ವಶಿ ಎಂದು ಬಾಯ್ತುಂಬ ಕರೆಯುತ್ತಾನೆ.

ಈ ಭಾಗವನ್ನು ಕನ್ನಡಕ್ಕೆ ತರುವ ಹಂತದಲ್ಲಿ, ಆ ಅಪ್ಸರ ಕನ್ಯೆಯನ್ನು ಕಂಡಕೂಡಲೇ ಪುರೂರವಸ್ಸನೊಳಗೆ ಜಾಗೃತವಾದ ಭಾವನೆಯನ್ನು ಪ್ರಸ್ತುತಪಡಿಸಲೋಸುಗ ಮತ್ತು ಪುರೂರವಸ್ಸನು ದೇವತೆಗಳ ಕುರಿತು ಪ್ರಾರ್ಥಿಸುವ ಸಮಯದಲ್ಲಿ ಅವನ ಬೇಡಿಕೆಯ ನುಡಿಗಳನ್ನು ಚಿತ್ರಿಸಲೋಸುಗ ಹಲವಾರು ಮಹೋಪಮೆಗಳನ್ನು ಬಳಸಿ ಅದರ ಸೌಂದರ್ಯವನ್ನು ಹೆಚ್ಚಿಸಲು ಪ್ರಯತ್ನಿಸಲಾಗಿದೆ. ಕೊನೆಗೆ ಪುರೂರವಸ್ಸನು, ತನ್ನ ಹಯರಥವನ್ನೇರಿ ಆ ಚೆಲುವೆಯೆಡೆ ಚರಿಸಲೆಂದು ಬಗೆದು ಆ ನೀಲಿಮದೆಡೆಗೇರಲಾರಂಭಿಸಿದನು.

ಆದರೆ, ಆ ಕ್ಷಣಕ್ಕೆ ಗಗನಗಾಮಿಗಳಾಗಿ ನರ್ತಿಸುತ್ತಿದ್ದ ಅಪ್ಸರೆಯರು ಗರುಡನನ್ನು ಕಂಡ ಪಾರಿವಾಳಗಳಂತೆ ಚೀತ್ಕರಿಸಿಲಾರಂಭಿಸಿದರು. ಕೂಡಲೇ ಪುರೂರವಸ್ಸನಿಗೆ ಅವರ ಈ ಆಕ್ರಂದನಕ್ಕೆ ಕಾರಣವೇನೆಂಬುದು ತಿಳಿದುಬಂದಿತು. ಅವರು ತೇಲುತ್ತಿದ್ದ ಆಗಸವು ನೋಡನೋಡುತ್ತಿದ್ದಂತೆ ಕಾರ್ಮೋಡಗಳಿಂದ ತುಂಬಿತ್ತು. ಕವಿದ ಮೇಘ ಮಂಡಲದ ಮೂಲೆಯೊಳಗಿಂದ ಮಿಂಚುಗೊಂಚಲುಗಳು ಮಿನುಗಿದವು, ಖಡಿಲ್ಲನೆ ಬಂದೆರಗಿದ ಸಿಡಿಲೊಂದು ಗುಡುಗಿನಾರ್ಭಟಕೆ ಕಾರಣವಾಯಿತು. ಸುತ್ತಮುತ್ತಲಿನ ವಾಯುವರ್ತುಲವೆಲ್ಲ ಮಂಜು ಮಂಜಾಗಿ ಮುಸುಕಲಾರಂಭಿಸಿತ್ತು. ಅಪ್ಸರಿಯರು ಮರಳಬೇಕಿದ್ದ ಆ ನಿರ್ವಯಲದ ನಭವು ಅವರ ಕಣ್ಣಿಗೆ ಕಾಣದಾಯಿತು. ಕೆಳಗಿಳಿಯಬೇಕೆಂದರೆ, ಭೂತಲವು ಅಸ್ಪಷ್ಟವಾಗಿ ತೋರಿಬರಲಾರಂಭಿಸಿತು. ಮೋಡಗಳಿಂದ ಸೋನೆರೂಪವಾಗಿ ಸುರಿಯಲಾರಂಭಿಸಿದ ವರ್ಷಾಧಾರೆಯು ದಬ್ಬಣಗಾತ್ರದವರೆಗೂ ಮುಂಬರಿದು ರಕ್ಕಸ ಮಳೆಗೆ ಸಾಕ್ಷಿಯಾಯಿತು. ಮೇಲೆ–ಕೆಳಗೆ, ಎಡ–ಬಲಕೆ, ಹಿಂದು–ಮುಂದಕೆ ಎಲ್ಲಿ ನೋಡಿದಲೆಲ್ಲ ಬರಿ ನೀರೇ ನೀರಾದ ನಿರ್ವಯಲಿನಲ್ಲಿ ನೀರನಾರಿಯರು ನೀರುನೀರಾಗಿ ಹೋದರು. ಅಪ್ಸರ ಕನ್ಯೆಯರನ್ನು ರಕ್ಷಿಸಲೆಂದು ಕಟಿಬದ್ಧನಾದ ಪುರೂರವಸ್ಸನು ಯಾವುದೇ ಮುನ್ಸೂಚನೆಯಿಲ್ಲದೆ ಸುರಿಯುತ್ತಿರುವ ಈ ರಾಕ್ಷ ಪ್ರವಾಹಕ್ಕೆ ಕಾರಣವೇನೆಂದು ತಿಳಿಯಲು

ಭೂಮ್ಯಾಕಾಶಗಳನೆಲ್ಲ ಶೋಧಿಸಿದನು. ಕೊನೆಗೆ ಈ ಕೃತಕ ವರ್ಷಾಧಾರೆಗೆ 'ಕೇಶಿ ದೈತ್ಯ'ನೇ ಕಾರಣನೆಂಬುದು ತಿಳಿಯಿತು. ಅಪ್ಸರ ಕನ್ಯೆಯರನ್ನು ಅಪಹರಿಸಲೆಂದು ಬಂದ ಕೇಶಿದೈತ್ಯನು ತನ್ನ ಅಂಕಿತದಲ್ಲಿರುವ ಜಲ ರಕ್ಕಸರನ್ನು ನಭದಲ್ಲಿ ನೆರೆಸಿ ಲೋಕಕ್ಕೆ ಕತ್ತಲೆಯನ್ನು ಕವಿಯುವಂತೆ ಮಾಡಿ ಸ್ವರ್ಗ ನಾರಿಯರನ್ನು ಅಪಹರಿಸಲೆಂದು ಹೊಂಚುಹಾಕುತ್ತಿದ್ದನು. ಕೊನೆಗೆ ತನ್ನ ಕಾರ್ಯವನ್ನು ಕೈಗೂಡಿಸಿಕೊಂಡ ಆ ದೈತ್ಯನು ಕಮಲ ಸರೋವರ ಮಧ್ಯದಲ್ಲಿರುವ ಪದ್ಮದಂತೆ ಅಪ್ಸರ ಕನ್ಯೆಯರ ಮಧ್ಯೆ ಹೊಳೆಯುತ್ತಿರುವ ಊರ್ವಶಿಯನ್ನೆತ್ತಿಕೊಂಡು ಪೂರ್ವ ದಿಶೆಯೆಡೆಗೆ ಮುನ್ನೂಕಿ ಮಾಯವಾದನು. ಇದೆಲ್ಲವನ್ನು ಕಾಣುತ್ತಿದ್ದ ಪುರೂರವಸ್ಸನು, ಮನೋವೇಗದಲ್ಲಿ ಚರಿಸಿ ದೈತ್ಯನಿಗೆದುರಾಗಿ ನಿಂತನು. ಈ ಭಾಗದಲ್ಲಿ ಕೇಶಿದೈತ್ಯನ ವರ್ಣನೆಯು ವೇದದ ಅಹಿವೃತ್ರದ ವರ್ಣನೆಯಂತೆ ಕಂಡುಬರುತ್ತದೆ. ನಿರುಕ್ತಗಳ ಪ್ರಕಾರ ವೃತ್ರ ಎಂದರೆ ಮೋಡವೆಂದೂ, ಇಂದ್ರನೆಂದರೆ ಸಿಡಿಲಿನ ಸಂಕೇತವೆಂದೂ ಸರ್ವವಿದಿತವಾಗಿದೆ. ಕಾರ್ಮೋಡದ ಸಂಕೇತವಾದ ವೃತ್ರನು ಸಪ್ತ ಸಿಂಧುಗಳನ್ನು ತನ್ನ ಕರಾಳ ಹಿಡಿತದಲ್ಲಿ ಸೆರೆಹಿಡಿದು ಊರ್ಧ್ವದ ತೇಜೋರಾಶಿಯು ಭೂತಲಕೆ ಬರದಂತೆ ತಡೆಯೊಡ್ಡಿರುವಾದ ಸಿಡಿಲಿನ ಶಕ್ತ್ಯಾಯುಧದಿಂದ ಮೋಘಗಳನ್ನು ಸೀಳಿ ಜಲವೃಷ್ಟಿಗೈವ ಇಂದ್ರನು ಕೊನೆಗೆ ಊರ್ಧ್ವದ ಜ್ಯೋತಿಸತ್ವವು ಇಳೆಗಿಳಿದು ಬರುವಂತೆ ಮಾಡುತ್ತಾನೆ. ಅದೇ ರೀತಿ ಇಲ್ಲಿ ಮೇಘಗಳನ್ನು ಕವಿಸಿ ಜಲಮೂಲದ ಅಪ್ಸರಿಯನ್ನು ಕದ್ದೊಯ್ಯುತ್ತಿರುವ ಕೇಶಿಯನ್ನು ಇಂದ್ರ ಸ್ವರೂಪಿಯಾದ ಪುರೂರವಸ್ಸನು ಹಿಮ್ಮೆಟ್ಟಿಸಿ ಅವನಿಂದ ಅಪಹರಣಕ್ಕೊಳಗಾದ ನೀರನಾರಿಯನ್ನು ಮರಳಿ ಭೂತಲಕ್ಕೆ ಕರೆತರುತ್ತಾನೆ.

(ಸಶೇಷ)

## ವಾರ್ತಾಪತ್ರ

### ಶ್ರೀ ಅರವಿಂದ ಸಂಕೀರ್ಣ

ಜೆ.ಪಿ.ನಗರ 1ನೇ ಹಂತ, ಬೆಂಗಳೂರು

ದಿನಾಂಕ 15/08/2025 ಶುಕ್ರವಾರ ಮೀರಾಂಬಿಕ ಸ್ಕೂಲ್ ಫಾರ್ ನ್ಯೂ ಏಜ್ ಶಿಕ್ಷಣ ಸಂಸ್ಥೆಯಲ್ಲಿ ಸ್ವಾತಂತ್ರ್ಯ ದಿನಾಚರಣೆ ಮತ್ತು ಮಹರ್ಷಿ ಶ್ರೀ ಅರವಿಂದರ 153ನೇ ಜನ್ಮ ದಿನಾಚರಣೆಯನ್ನು ಆಚರಿಸಲಾಯಿತು. ಶಾಲೆಯ ಅಧ್ಯಕ್ಷರಾದ ಡಾ॥ ಅಜಿತ್ ಸಬ್ನೀಸ್ ಧ್ವಜಾರೋಹಣ ಮಾಡಿದ ಬಳಿಕ ಮಹರ್ಷಿ ಶ್ರೀ ಅರವಿಂದರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು. ಸಂಸ್ಥೆಯ ಪ್ರಾಂಶುಪಾಲರು ಶ್ರೀಮತಿ ಶಾರದಾಂಬ ಪ್ರತಿಜ್ಞಾ ವಿಧಿಯನ್ನು ಬೋಧಿಸಿದರು. ಶಾಲಾ ವಿದ್ಯಾರ್ಥಿಗಳು ಸ್ವಾತಂತ್ರ್ಯ ದಿನದ ಮತ್ತು ಮಹರ್ಷಿ ಶ್ರೀ ಅರವಿಂದರ ಬಗ್ಗೆ ಮಾತನಾಡಿದರು. ವಿದ್ಯಾರ್ಥಿಗಳು ಯೋಗ ಪ್ರದರ್ಶನ, ನೃತ್ಯ ಮತ್ತು ದೇಶಭಕ್ತಿ ಗೀತೆಗಳ ಮೂಲಕ ಗಮನ ಸೆಳೆದರು. ಅಧ್ಯಕ್ಷರಾದ ಡಾ॥ ಅಜಿತ್ ಸಬ್ನೀಸ್‌ರವರು ಮಹರ್ಷಿ ಶ್ರೀ ಅರವಿಂದರ 5 ಕನಸುಗಳ ಬಗ್ಗೆ ಬೆಳಕು ಚೆಲ್ಲಿದರು. ವಂದೇ ಮಾತರಂ ಗೀತೆಯ ಮೂಲಕ ಕಾರ್ಯಕ್ರಮ ಸಮಾಪ್ತಿಯಾಯಿತು.

ದಿನಾಂಕ 15/08/2025 ಶುಕ್ರವಾರ ಶ್ರೀ ಅರವಿಂದರ 153ನೇ ಜನ್ಮ ದಿನಾಚರಣೆ ಕಾರ್ಯಕ್ರಮವನ್ನು ಶ್ರೀ ಅರವಿಂದ ಸಂಕೀರ್ಣದಲ್ಲಿ ಏರ್ಪಡಿಸಲಾಗಿತ್ತು. ಬೆಳಿಗ್ಗೆ 7.30 ರಿಂದ 7.50 ರವರೆಗೆ ಸಾಮೂಹಿಕ ಧ್ಯಾನ, ಪ್ರಸಾದ ವಿನಿಯೋಗ ಹಾಗೂ ಸಂದೇಶ ಪತ್ರವನ್ನು ವಿತರಿಸಲಾಯಿತು. ತತ್ಸಂಬಂಧ 11.00 ರಿಂದ 12.00 ರವರೆಗೆ "Sri Aurobindo - A New Dawn (Part I & II)" ಎಂಬ ವಿಷಯವಾಗಿ ವೀಡಿಯೋ ಪ್ರದರ್ಶಿಸಲಾಯಿತು.

ಶ್ರೀ ಪ್ರದೀಪ್ ತಂಬಟ್ಕರ್‌ರವರು ದಿನಾಂಕ 16, 17 ಮತ್ತು 23ನೇ ಆಗಸ್ಟ್ 2025 "Mystery of Consciousness" ಎಂಬ ವಿಷಯವಾಗಿ ಉಪನ್ಯಾಸ ನೀಡಿದರು.

ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಅನೇಕ ಗುರು–ಬಂಧುಗಳು, ಸಾಧಕರು ಮತ್ತು ಇತರರು ಹಾಜರಿದ್ದರು. ಜೂಮ್ ಹಾಗೂ ಯೂಟ್ಯೂಬ್ ಮುಖಾಂತರ ಸಹ ಪ್ರಸ್ತುತ ಪಡಿಸಲಾಯಿತು.

"Meditations on Savitri (Book 2, Canto 1-4)" ವಿಷಯ ಕುರಿತು ದಿನಾಂಕ 10ನೇ ಜೂನ್ 2025 ರಿಂದ 11ನೇ ಆಗಸ್ಟ್ 2025 ವರೆಗೂ ಶ್ರೀ ಅರವಿಂದ ಸಂಕೀರ್ಣದ ಸಾಂಸ್ಕೃತಿಕ ಸಭಾ ಭವನದಲ್ಲಿ ಫೋಟೋ ಚಿತ್ರಪ್ರದರ್ಶನ ಆಯೋಜಿಸಲಾಗಿದೆ.



ಫೋಟೊ: ಇಮೇಜಿಂಗ್ ಸಾವಿತ್ರಿ

“ಪಾತಾಳದೆದೆಯ ಆ–ಕ್ರಂದವಿಂದು ಪಡೆದಿತ್ತು ಸ್ವರ್ಗ–ಸ್ಪಂದ”

**– ಪುಟ್ಟು ಕುಲಕರ್ಣಿ**
**(ಶ್ರೀ ಅರವಿಂದರ ‘ಸಾವಿತ್ರಿ’)**

**RNI No. 22511/1971**
No. of Pages **72 + 4 (Cov. Page)**
KAR Reg No.: RNP/KA/BGS/368/2024-2026
Licensed to post without prepayment License No.PMG BG/WPP-409/2024-2026
Kannada Monthly Magazine
Date of Publication on 7th of Every Month
Permitted to Post 10th of Every Month. Reg. Valid till: 31-12-2026
Licensed to Post at BG PSO, Mysuru Road, Bengaluru - 560 026



ಫೋಟೋ: ಇಮೇಜಿಂಗ್ ಸಾವಿತ್ರಿ

Ed. Sri Puttu Parashuram Kulkarni, Pub: Dr. Ajit Sabnis
Ptd. by M/s. Seshaasai e-forms Pvt. Ltd.,
on behalf of Sri Aurobindo Complex Trust, ‘Sri Aurobindo Marg’,
J.P. Nagar I Phase, Bengaluru - 560 078. Phone: 080 - 22449882.